

ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ,
ನಂ.3, ಎಸ್.ಕರಿಯಪ್ಪ ರಸ್ತೆ, ಬಸವನಗುಡಿ,
ಬೆಂಗಳೂರು-560 004.

ಇದರ

2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ ದೃಢೀಕರಿಸಿದ ಹಣಕಾಸಿನ ತಃಖ್ತೆಗಳು ಮತ್ತು ಕುಳುವಾರುದಳು.

ಪರಿವಿಡಿ

ಕ್ರ.ಸಂ.	ವಿ ವ ರ	ಪುಟ ಸಂಖ್ಯೆ
1.	ಮುಖಪತ್ರ	1
2.	ಲೆಕ್ಕಪರಿಶೋಧನಾ ವರದಿ	2–59
3.	ಜಮಾ–ಖರ್ಚು ತಃಖ್ತೆ	60–64
4.	ಲಾಭ–ನಷ್ಟದ ತಃಖ್ತೆ	65–67
5.	ಆಸ್ತಿ– ಜವಾಬ್ದಾರಿ ತಃಖ್ತೆ	68–71
6.	ಸನ್ನದು ಲೆಕ್ಕಪರಿಶೋಧನಾ ವರದಿ	72
7.	ಲೆಕ್ಕಪರಿಶೋಧನಾ ವರ್ಗೀಕರಣ ತಃಖ್ತೆ	73
8.	ಕಾರ್ಯಕಾರಿ ಮಂಡಳಿ ದೃಢೀಕರಣ ಪತ್ರ	74–75
9.	ಭಾರತೀಯ ಜೀವ ವಿಮಾ ನಿಗಮ ಸಾಲದ ದೃಢೀಕರಣ	76
10.	ಷೇರು ಅಮಾನತ್ತು	77–79
11.	ಸಾಮಾನ್ಯ ಅಮಾನತ್ತು	80
12.	ಸಿಬ್ಬಂದಿ ಖಾತರಿ ಠೇವಣಿ ಕುಳುವಾರು	81
13.	1ನೇ ಯೋಜನೆ ನಿವೇಶನದ ಸಂಕ್ಷಿಪ್ತ ಕುಳುವಾರು	82–83
14.	2ನೇ ಯೋಜನೆ ನಿವೇಶನದ ಸಂಕ್ಷಿಪ್ತ ಕುಳುವಾರು	84–85
15.	ಸದಸ್ಯರ ಫ್ಲಾಟ್ ಮುಂಗಡ	86
16.	ಕ.ರಾ.ಸ. ಅಪೆಕ್ಸ್ ಬ್ಯಾಂಕ್, ಕೇಂದ್ರ ಕಛೇರಿ ಶಾಖೆಯ ಚಾಲ್ತಿ ಖಾತೆಯ ಸಮನ್ವಯ ಪಟ್ಟಿ ಹಾಗೂ ಹೂಡಿಕೆಯ ದೃಢೀಕರಣ	87–90
17.	ಅಮಾನತ್ ಕೋ ಆಪರೇಟಿವ್ ಬ್ಯಾಂಕ್‌ನ ದೃಢೀಕರಣ	91
18.	ಕೆನರಾ ಬ್ಯಾಂಕ್, ಬಸವನಗುಡಿ ಶಾಖೆಯ ಚಾಲ್ತಿ ಖಾತೆಯ ಸಮನ್ವಯ ಪಟ್ಟಿ ಹಾಗೂ ಹೂಡಿಕೆಯ ದೃಢೀಕರಣ	92–94
19.	ಬಿ.ಆರ್ & ಬಿ.ಡಿ.ಸಿ.ಸಿ. ಬ್ಯಾಂಕ್, ಬೆಂಗಳೂರು ಚಾಲ್ತಿ ಖಾತೆಯ ಸಮನ್ವಯ ಪಟ್ಟಿ ಹಾಗೂ ಹೂಡಿಕೆಯ ದೃಢೀಕರಣ	95–96
20.	ಕ.ರಾ.ಸ. ಅಪೆಕ್ಸ್ ಬ್ಯಾಂಕ್, ಜಯನಗರ ಶಾಖೆಯ ಚಾಲ್ತಿ ಖಾತೆಯ ಸಮನ್ವಯ ಪಟ್ಟಿ ಹಾಗೂ ಹೂಡಿಕೆಯ ದೃಢೀಕರಣ	97–100
21.	ಕ.ರಾ.ಸ. ಅಪೆಕ್ಸ್ ಬ್ಯಾಂಕ್, ಅಶೋಕ ಪಿಲ್ಲರ್ ಶಾಖೆಯ ಚಾಲ್ತಿ ಖಾತೆಯ ಸಮನ್ವಯ ಪಟ್ಟಿ ಹಾಗೂ ಹೂಡಿಕೆಯ ದೃಢೀಕರಣ	101–102
22.	ಹೆಚ್.ಡಿ.ಎಫ್.ಸಿ. ಬ್ಯಾಂಕ್ ಶಾಖೆಯ ದೃಢೀಕರಣ	103
23.	ಐ.ಡಿ.ಬಿ.ಐ. ಬ್ಯಾಂಕ್ ಖಾತೆಯ ಸಮನ್ವಯ ಪಟ್ಟಿ ಹಾಗೂ ದೃಢೀಕರಣ	104–105
24.	ಯೆಸ್ ಬ್ಯಾಂಕ್ ಖಾತೆಯ ದೃಢೀಕರಣ	106
25.	ಕ.ರಾ.ಸ. ಅಪೆಕ್ಸ್ ಬ್ಯಾಂಕ್, ಕೇಂದ್ರ ಕಛೇರಿ ಶಾಖೆಯ ಷೇರು ದೃಢೀಕರಣ	107
26.	ಕ.ರಾ.ಸ. ಅಪೆಕ್ಸ್ ಬ್ಯಾಂಕ್, ಬನಶಂಕರಿ 1ನೇ ಹಂತದ ಶಾಖೆಯ ಠೇವಣಿಯ ದೃಢೀಕರಣ	108
27.	ಸಂಕ್ಷಿಪ್ತ ಹೂಡಿಕೆ ನಿಧಿ ವಿವಿಧ ಬ್ಯಾಂಕುಗಳಲ್ಲಿ	109–110
28.	ಎಲ್.ಐ.ಸಿ ಸಿಬ್ಬಂದಿ ಗ್ರ್ಯಾಚುಟಿ ದೃಢೀಕರಣ	111–112
29.	ಜಿಲ್ಲಾವಾರು ಜೀವ ವಿಮಾ ಸಾಲದ ಕುಳುವಾರು	113

30.	ರಾಷ್ಟ್ರೀಯ ವಸತಿ ಬ್ಯಾಂಕ್ ಸಾಲದ ಕುಳುವಾರು	114
31.	ಜಿಲ್ಲಾವಾರು ಅಭಿವೃದ್ಧಿ ಸಾಲದ ಕುಳುವಾರು	115
32.	ನಿವೇಶನ ಖರೀದಿ ಸಾಲ (ಎಲ್ಐಸಿ) ಕುಳುವಾರು	116
33.	ಅಲ್ಪಾವಧಿ ಸಾಲ (ಎಲ್ಐಸಿ) ಕುಳುವಾರು	117
34.	ಸಾಮಾನ್ಯ ಸಾಲ ಕುಳುವಾರು	118
35.	ಗ್ರಾಮಾಂತರ ಸಾಲ ಕುಳುವಾರು	119
36.	ಲಕ್ಷ್ಮಣ್ ಪ್ರಾಪರ್ಟೀಸ್ ದೃಢೀಕರಣ	120
37.	ಪೀಠೋಪಕರಣದ ವಿವರ	121–123
38.	ಸಾಲದ ಅಮಾನತ್ ಖಾತೆಯ ಕುಳುವಾರು	124
39.	ವೈಯಕ್ತಿಕ ಸಾಲದ ಪರಿಶೀಲನಾ ಪಟ್ಟಿ	125
40.	ಬಡ್ಡಿ ಕಾದಿರಿಸಿದ್ದು – ಭಾರತೀಯ ಜೀವ ವಿಮಾ ಸಂಸ್ಥೆ ಸಾಲಗಳ ಮೇಲೆ	126
41.	**ಎ ರಿಂದ ಜೆಡ್ ವರೆಗೆ (26 ಪ್ರತ್ಯೇಕ ತಃಖ್ತೆಗಳು)**	127–183
(ಎ)	ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ	
(ಬಿ)	ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಳಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ	
(ಸಿ)	ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ	
(ಡಿ)	ಸದಸ್ಯತ್ವ ಮತ್ತು ಷೇರು ಷೆಡ್ಯೂಲು	
(ಇ)	ಆಡಳಿತ ಮಂಡಳಿಯ ನೌಕರರ ಮತ್ತು ಸದಸ್ಯರ ಪಟ್ಟಿ ನೌಕರರ ಪಟ್ಟಿ	
(ಎಫ್)	ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು	
(ಜಿ)	ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು	
(ಹೆಚ್)	ತಗಾದೆ ವಸೂಲಿ ಮತ್ತು ಉಳಿಕೆ ತಃಖ್ತೆ	
(ಐ)	ಸುಸ್ತಿದಾರ ಸದಸ್ಯರ ಪಟ್ಟಿ	
(ಜೆ)	ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ	
(ಕೆ)	ಹೂಡಿಕೆಗಳು ಮತ್ತು ಅವುಗಳ ದೃಢೀಕರಣ ಷೆಡ್ಯೂಲು	
(ಎಲ್)	ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲು	
(ಎಂ)	ಸಾಲ ದೃಢೀಕರಣ ತಃಖ್ತೆ –ಸಂಘವು ಪಡೆದಿರುವ ಸಾಲ / ಠೇವಣಿಗಳು	
(ಎನ್)	ವರ್ಷದಾದ್ಯಂತ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ	
(ಒ)	ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು	
(ಪಿ)	ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು	
(ಕ್ಯೂ)	ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದೆ ಇರುವ ಸದಸ್ಯರ ಷೆಡ್ಯೂಲು	
(ಆರ್)	ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ತಃಖ್ತೆ	
(ಎಸ್)	ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೆ ಇರುವ ಸಾಲ/ಮುಂಗಡಗಳ ಷೆಡ್ಯೂಲು	

(ಟಿ)	ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು	
(ಯು)	ಮೀಸಲು ಇತರ ನಿಧಿಗಳ ಷೆಡ್ಯೂಲು	
(ವಿ)	ಠೇವಣಿದಾರರ ಷೆಡ್ಯೂಲು	
(ಡಬ್ಲ್ಯೂ)	ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು	
(ಎಕ್ಸ್)	ಆಖ್ಯೈರು ದಾಸ್ತಾನಿನ ಷೆಡ್ಯೂಲು	
(ವೈ)	ಉಪವಿದಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರ ಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು–ವರ್ಗವಾರು.	
(ಜಡ್)	ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು	
44	ಆಸ್ತಿ– ಜವಾಬ್ದಾರಿ ತಃಖ್ತೆ 31–03–2019ಕ್ಕೆ	184–187

ಮಿನೇಜಸ್ ಅಂಡ್ ಅಸೋಸಿಯೇಟ್ಸ್

ಸನ್ನದು ಲೆಕ್ಕಪರಿಶೋಧಕರು, ನಂ. 137/1, 2ನೇ ಅಂತಸ್ತು, ಆರ್.ಎಂ.ವಿ ಆಸ್ಪತ್ರೆ ಎದುರು,
ವಿ.ಇ.ಸಿ.ವಿಸ್ ಲೇಔಟ್, ಸಂಜಯನಗರ, ಬೆಂದಳೂರು-560 094

ಗೆ,
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ.,
ನಂ.3, ಎಸ್. ಕರಿಯಪ್ಪ ರಸ್ತೆ, ಬಸವನಗುಡಿ,
ಬೆಂಗಳೂರು-560 004.

ಮಾನ್ಯರೆ,

ವಿಷಯ: 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳನ್ನು ರವಾನಿಸುವ ಕುರಿತು.
ಉಲ್ಲೇಖ: ವಸತಿ ಮಹಾಮಂಡಲದ ಪತ್ರ ಸಂಖ್ಯೆ: ಕವಮ: ಆಡಳಿತ:ವ್ಯ.ನಿ.: 3784:2019-20
ದಿನಾಂಕ: 17-10-2019 ರ ವಿಷಯ ಸಂಖ್ಯೆ (12 ರಂತೆ)

❖❖❖

ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಕಾಯ್ದೆ 2012 ರ ಕಲಂ 63(1) ರನ್ವಯ ತಮ್ಮ ಸಂಸ್ಥೆಯ 2019-20ನೇ ಸಾಲಿನ ಲೆಕ್ಕ ಪರಿಶೋಧನೆ ಕುರಿತು ತಾವು ನನ್ನನ್ನು ಲೆಕ್ಕ ಪರಿಶೋಧಕರು ಎಂದು ಉಲ್ಲೇಖ (1) ರ ಪತ್ರದ ಪ್ರಕಾರ ನಿಯುಕ್ತಿಗೊಳಿಸಿದ್ದು, ಉಲ್ಲೇಖ (2) ರ ಆದೇಶದನ್ವಯ ನನಗೆ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಕಾಯ್ದೆ 2012 ರ ಕಲಂ 63(1) ರಲ್ಲಿ ಪ್ರದತ್ತವಾದ ಅಧಿಕಾರದಿಂದ ತಮ್ಮ ಸಂಸ್ಥೆಯ 2019-20ನೇ ಸಾಲಿನ ಅಂತಿಮ ಲೆಕ್ಕ ಪರಿಶೋಧನೆ ಪೂರೈಸಿ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಕಾಯ್ದೆ 2012 ರ ಕಲಂ 63(8) ರಲ್ಲಿ ಪ್ರದತ್ತವಾದ ಅಧಿಕಾರದಿಂದ ತಮ್ಮ ಸಂಸ್ಥೆಯ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಕಾಯ್ದೆ 2012 ರ ಕಲಂ 63(10) ರನ್ವಯ ಸದರಿ ಲೆಕ್ಕ ಪರಿಶೋಧನಾ ವರದಿಯನ್ನು ಮುಂಬರುವ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಿ, ಅದರಲ್ಲಿರುವ ನ್ಯೂನ್ಯತೆಗಳ ಬಗ್ಗೆ ಅನುಸರಣಾ ಕ್ರಮ ಕೈಕೊಂಡು, ಕೈಕೊಂಡ ಕ್ರಮದ ಅನುಪಾಲನಾ ವರದಿಯನ್ನು ಸಂಸ್ಥೆಯ ವಾರ್ಷಿಕ ಮಹಾಸಭೆ ಜರುಗಿದ 30 ದಿನಗಳೊಳಗಾಗಿ ಸಹಕಾರ ಇಲಾಖೆಗೆ ಹಾಗೂ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಗೆ ಸಲ್ಲಿಸುವುದು.

ತಮ್ಮ ವಿಶ್ವಾಸಿ,
ಸಹಿ/-
(ಮಿನೇಜಸ್ ಅಂಡ್ ಅಸೋಸಿಯೇಟ್ಸ್)
ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು.

ಸ್ಥಳ: ಬೆಂಗಳೂರು
ದಿನಾಂಕ: 29-10-2020

ಈ ಕೆಳಕಂಡ ಪ್ರತಿಗಳನ್ನು ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.:
1) ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052.
2) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಕರ್ನಾಟಕ ರಾಜ್ಯ, ಬೆಂಗಳೂರು.
3) ಪ್ರಧಾನ ವ್ಯವಸ್ಥಾಪಕರು, ಭಾರತೀಯ ಜೀವ ವಿಮಾ ನಿಗಮ, ಮುಂಬಯಿ.
4) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಬೆಂಗಳೂರು ಜಿಲ್ಲೆ, ಬೆಂಗಳೂರು.
5) ಸನ್ನದು ಲೆಕ್ಕಪರಿಶೋಧಕರ ಪ್ರತಿ.
6) ಕಛೇರಿ ಕಡತ.

MENEZES & ASSOCIATES BANGALORE-94 CHARTERED ACCOUNTANTS

(ಮಿನೇಜಸ್ ಅಂಡ್ ಅಸೋಸಿಯೇಟ್ಸ್)
ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು.

ಸ್ಥಳ: ಬೆಂಗಳೂರು
ದಿನಾಂಕ: 29-10-2020

ಮಿನೇಜಸ್ ಅಂಡ್ ಅಸೋಸಿಯೇಟ್ಸ್

ಪನ್ನಿದು ಲೆಕ್ಕಪರಿಶೋಧಕರು, ನಂ. 137/1, 2ನೇ ಅಂತಸ್ತು, ಆರ್.ಎಂ.ವಿ ಆಸ್ಪತ್ರೆ ಎದುರು,
ಎ.ಇ.ಸಿ.ಎಸ್ ಲೇಔಟ್, ಸಂಜಯನಗರ, ಬೆಂದಳೂರು-560 094

ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ.,
ನಂ. 3, ಎಸ್. ಕರಿಯಪ್ಪ ರಸ್ತೆ, ಬಸವನಗುಡಿ, ಬೆಂದಳೂರು-560 004
ಇದರ
2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

(ಹಣ ದುರುಪಯೋಗ ಹಾಗೂ ದುರುತರವಾದ ಮ್ಯಾಟ್ಯತೆಗಳ ಬಗ್ಗೆ 43 ಹಾಗೂ 44 ಕಂಡಿಕೆಗಳನ್ನು ಓದುವುದು)

ಭಾಗ-1
ಸಂಘದ ಪರಿಚಯಾತ್ಮಕ ವಿವರಗಳು

1) ಸಂಘದ ವಿವರಗಳು

1	ಸಂಘದ ಹೆಸರು ಹಾಗೂ ವಿಳಾಸ	ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿಯಮಿತ,
2	ಸಂಘದ ವಿಳಾಸ	ನಂ.3, ಎಸ್.ಕರಿಯಪ್ಪ ರಸ್ತೆ, ಬಸವನಗುಡಿ, ಬೆಂಗಳೂರು-560 004.
3	ಸಂಘದ ನೋಂದಣಿ ಸಂಖ್ಯೆ/ದಿನಾಂಕ	ಆಗಿನ ಸಹಕಾರ ಸಂಘಗಳ ನಿಬಂಧಕರು, ಮೈಸೂರು ಇವರಿಂದ ದಿನಾಂಕ: 12-8-1950 ರಂದು ನೊಂದಣಿ ಸಂಖ್ಯೆ 1606/ಅರ್‌ಸಿಎಸ್ ಪ್ರಕಾರ ನೊಂದಾಯಿಸಲ್ಪಟ್ಟಿದೆ.
4	ಸಂಘದ ಕಾರ್ಯಕ್ಷೇತ್ರ (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ)	ವಸತಿ ಮಹಾಮಂಡಲದ ಉಪ ನಿಯಮ 3 ರಂತೆ ವಸತಿ ಮಹಾಮಂಡಲದ ಕಾರ್ಯ ವ್ಯಾಪ್ತಿಯು ಪೂರ್ಣ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿರುತ್ತದೆ.

2) ಸಂಸ್ಥೆಯ ಮುಖ್ಯ ಉದ್ದೇಶಗಳು/ ಚಟುವಟಿಕೆಗಳು (ಸಂಸ್ಥೆಯ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ)

1) ವಸತಿ ಮಹಾಮಂಡಲದ ಸದಸ್ಯ ಸಂಘಗಳಿಗೆ ಈ ಕೆಳಕಂಡ ಉದ್ದೇಶಗಳಿಗೆ ಆರ್ಥಿಕ ಸೌಲಭ್ಯ ನೀಡುವುದು.

5(i) (ಅ) ವಸತಿ ಮಹಾಮಂಡಲವು ತನ್ನ ಸ್ವಂತ ಬಂಡವಾಳದಿಂದ ಅಥವಾ ಹೊರಗಡೆಯಿಂದ ಪಡೆದ ಸಾಲದಿಂದ, ವಸತಿ ಯೋಜನೆಗೆ ಜಮೀನನ್ನು ಖರೀದಿಸುವುದು ಮತ್ತು ಅಭಿವೃದ್ಧಿಪಡಿಸುವುದು, ಬಡಾವಣೆ ರಚಿಸಿ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ನೊಂದಣಿ ಮಾಡುವುದು.

ಆ) ಗೃಹ ನಿರ್ಮಾಣಕ್ಕಾಗಿ ಪ್ರಾಥಮಿಕ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಹಾಗೂ ಸಂಘದ ಮೂಲಕ ಸಂಘದ ಸದಸ್ಯರುಗಳಿಗೆ ಸಾಲ ವಿತರಿಸುವುದು.

ಇ) ಸದಸ್ಯ ಸಂಘಗಳ ಸದಸ್ಯರುಗಳಿಗೆ ಫ್ಲಾಟ್ ಅಥವಾ ಅಪಾರ್ಟ್‌ಮೆಂಟ್ ಅಥವಾ ಮನೆ ಖರೀದಿಸಲು ಸಾಲ.

ಈ) ಸಂಘಗಳಿಗೆ ಅಥವಾ ಸಂಘದ ಸದಸ್ಯರುಗಳಿಗೆ ಅವರುಗಳ ವಾಸದ ಮನೆಯನ್ನು ಹೆಚ್ಚು ಸುಖಕರವಾಗಿ ವಾಸ ಮಾಡಲು ಅನುಕೂಲವಾಗುವಂತೆ ಮಾಡಲು ಅಥವಾ ಆಸ್ತಿ ಮೌಲ್ಯವರ್ಧನೆಗೆ ಅಭಿವೃದ್ಧಿ/ ವಿಸ್ತರಣೆಗೆ ಸಾಲ ಸೌಲಭ್ಯ

ಉ) ಸಂಘದ ಕಛೇರಿ ಕಟ್ಟಡ ನಿರ್ಮಾಣಕ್ಕೆ ಅಥವಾ ಸಂಘದ ಸದಸ್ಯರ ಉಪಯೋಗಕ್ಕಾಗಿ ಇತರ ವಾಣಿಜ್ಯ ಕಟ್ಟಡ ಕಟ್ಟಲು ಸಾಲ.

5.ii(ಅ) ಸಕ್ಷಮ ಪ್ರಾಧಿಕಾರದ ಒಪ್ಪಿಗೆಗೆ ಒಳಪಟ್ಟಂತೆ ಸದಸ್ಯರುಗಳ ಪ್ರಯೋಜನಕ್ಕಾಗಿ ಸಂಘವು ವಶಪಡಿಸಿಕೊಂಡ/ ಖರೀದಿಸಿದ ಭೂಮಿಯಲ್ಲಿ ಮನೆಗಳ ಫ್ಲಾಟ್‌ಗಳ/ ಅಪಾರ್ಟ್‌ಮೆಂಟ್‌ಗಳ ನಿರ್ಮಾಣವನ್ನು ಕೈಗೊಳ್ಳುವುದು.

ಆ) ವಸತಿ ಮಹಾಮಂಡಲವು ತನ್ನ ಸ್ವಂತ ಬಂಡವಾಳದಿಂದ ಅಥವಾ ಹೊರಗಡೆಯಿಂದ ತಂದ ಸಾಲದಿಂದ, ವಸತಿ ಯೋಜನೆಗೆ ಜಮೀನನ್ನು ಖರೀದಿಸುವುದು ಮತ್ತು ಅಭಿವೃದ್ಧಿಪಡಿಸುವುದು, ಮತ್ತು ಬಡಾವಣೆಯಲ್ಲಿ ನಿವೇಶನಗಳನ್ನು ವಿಂಗಡಣೆ ಮಾಡುವುದು, ಗುಂಪು ಮನೆಗಳನ್ನು ಕಟ್ಟುವುದು, ಫ್ಲಾಟ್ ಮತ್ತು ಬಹು ಅಂತಸ್ತು ಮನೆಗಳ ಸಂಕೀರ್ಣ ಕಟ್ಟುವುದು, ವಾಣಿಜ್ಯ ಸಂಕೀರ್ಣ ನಿರ್ಮಿಸುವುದು, ನಿವೇಶನಗಳನ್ನು ಮತ್ತು ಫ್ಲಾಟ್‌ಗಳನ್ನು ಹೊಂದುವುದು ಮತ್ತು ನಾಮಮಾತ್ರ ಸದಸ್ಯತ್ವ ನೀಡಿ ಬಿಡಿವ್ಯಕ್ತಿಗಳಿಗೆ ನಿವೇಶನಗಳನ್ನು ಮತ್ತು ಫ್ಲಾಟ್‌ಗಳನ್ನು ಹಂಚಲು ಕಾರ್ಯಕಾರಿ/ ನಿಯೋಗಿಯಾಗಿ (ಏಜೆಂಟ್) ವರ್ತಿಸಲು ಮತ್ತು ಯಾವುದೇ ರೀತಿಯ ಸ್ವತ್ತನ್ನು ಹೊಂದುವುದು ಮತ್ತು ಸ್ವತ್ತಿನ ಹಕ್ಕಿನ ಬಗ್ಗೆ ವ್ಯವಹರಿಸುವುದು ಮತ್ತು ಸ್ವತ್ತನ್ನು ಮಾರಾಟ ಮಾಡಲು, ಅಭಿವೃದ್ಧಿ

MENEZES & ASSOCIATES BANGALORE-94 CHARTERED ACCOUNTANTS

ಪಡಿಸಲು, ಆಡಳಿತ ನಡೆಸಲು, ಅದಲು ಬದಲು ಮಾಡಲು, ಅಧಾರ ಮಾಡಲು, ಗುತ್ತಿಗೆಗೆ ನೀಡಲು ಅಥವಾ ಸ್ವತ್ತಿನ ಬಾಬ್ತು ಯಾವುದೇ ರೀತಿಯ ವ್ಯವಹಾರ ನಡೆಸುವುದು.

ಇ) ಬಿಡಿ ವ್ಯಕ್ತಿಗಳಿಗೆ, ಗೃಹ ನಿರ್ಮಾಣ, ಗೃಹ/ಫ್ಲಾಟ್ ಖರೀದಿ, ಗೃಹ ಅಭಿವೃದ್ಧಿ ಮತ್ತು ನಿವೇಶನ ಖರೀದಿಗೆ ಸಾಲ ನೀಡುವುದು.

ಈ) ನಿವೇಶನ ಖರೀದಿಸಲು ಅಥವಾ ಬಡಾವಣೆ ನಿರ್ಮಿಸಲು ಅಥವಾ ಬಡಾವಣೆಗಾಗಿ ಜಮೀನು ಖರೀದಿಗಾಗಿ ಸಾಲ ನೀಡುವುದು.

5. iii. (xii) ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಧ್ಯವಾದಂತೆಲ್ಲಾ, ಸುಲಭ ಬೆಲೆಗೆ ಕೊಂಡು ದಾಸ್ತಾನು ಮಾಡುವುದು ಹಾಗೂ ಅದನ್ನು ಸದಸ್ಯ ಸಂಘಗಳಿಗೆ ಸರಬರಾಜು ಮಾಡುವುದು ಅಥವಾ ಸರಬರಾಜು ಮಾಡಲು ಕ್ರಮ ಕೈಗೊಳ್ಳುವುದು.

xxii) ವಸತಿ ಕ್ಷೇತ್ರದಲ್ಲಿ ಆಸಕ್ತಿಯುಳ್ಳ ರಾಷ್ಟ್ರ ಮಟ್ಟದ ಸಹಕಾರ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆಯುವುದು.

xxiii) ಮಹಾಮಂಡಲದ ಹಾಗೂ ಸದಸ್ಯ ಸಂಘಗಳ ಅಭಿವೃದ್ಧಿಗೆ, ಒಳ್ಳೆಯದಕ್ಕೆ, ಹಾಗೂ ಮೂಲೋದ್ದೇಶಗಳನ್ನು ಈಡೇರಿಸಲು ಈ ಉಪನಿಬಂಧನೆಗಳಲ್ಲಿ ನಿಗದಿಪಡಿಸಿದ ಮಹಾಮಂಡಲದ ಉದ್ದೇಶಗಳ ಗುರಿ ಸಾಧನೆಗಾಗಿ ಅಗತ್ಯ ಅಥವಾ ಜರೂರು ಇರುವಂತಹ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುವುದು. ಮೇಲ್ಕಂಡ ಉದ್ದೇಶಗಳ ಪೈಕಿ ಕ್ರಮ ಸಂಖ್ಯೆ 5ಅ, ಆ, ಇ, ಈ, ಉ, 5(ii) ಅ, ಆ, ಇ, ಈ, ಉ, ಗಳನ್ನು ಅನುಷ್ಟಾನಕ್ಕೆ ತಂದಿದ್ದು, ಉಳಿದವುಗಳನ್ನು ಅನುಷ್ಟಾನಕ್ಕೆ ತರಲು ಯೋಜನೆಗಳನ್ನು ರೂಪಿಸಿಕೊಳ್ಳತಕ್ಕದ್ದು. ವಸತಿ ಮಹಾಮಂಡಲವು ತನ್ನ ಸೇವಾ ನಿಯಮಗಳನ್ನು ತಿದ್ದುಪಡಿ ಮಾಡಿಕೊಂಡು ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಈ ಕಛೇರಿಯ ಆದೇಶ ಸಂಖ್ಯೆ: ಹೆಚ್.ಎಸ್.ಜಿ-2/427/ಹೆಚ್‌ಹೆಚ್‌ಎಸ್/2015-16 ರಂತೆ 28-01-2016 ರಿಂದ ಅನುಷ್ಠಾನಕ್ಕೆ ತಂದಿರುತ್ತದೆ.

3) ಸಂಘದ ಪದಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ: (ದಿನಾಂಕ 31-03-2020ರಲ್ಲಿದ್ದಂತೆ)

ಅಧ್ಯಕ್ಷರು	ಶ್ರೀ ಎಸ್.ಟಿ.ಸೋಮಶೇಖರ್, ಅಧ್ಯಕ್ಷರು
ಉಪಾಧ್ಯಕ್ಷರು	ಶ್ರಿ ಕೆ.ವೀರಣ್ಣ, ಉಪಾಧ್ಯಕ್ಷರು, ದಿನಾಂಕ: 01-04-2019 ರಿಂದ 10-07-2019 ರವರೆಗೆ ಕಾರ್ಯ ನಿರ್ವಹಿಸುತ್ತಿದ್ದು, ಚುನಾವಣೆ ನಂತರ ದಿನಾಂಕ: 11-07-2019 ರಿಂದ ತಹಲ್‌ವರೆಗೂ ಶ್ರೀ ಟಿ.ವಿ. ಶಿವಶಂಕರಪ್ಪ ರವರು ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.
ಖಜಾಂಚಿಗಳು	ದಿನಾಂಕ: 01-04-2019 ರಿಂದ 10-07-2019 ರವರೆಗೆ ಹುದ್ದೆ ಖಾಲಿ. ಇದ್ದು, ಚುನಾವಣೆ ನಂತರ ಶ್ರೀ ಬಿ.ಸಿ. ಶಿವಲಿಂಗೇಗೌಡ ರವರು ಖಜಾಂಚಿರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು	ಸಂಸ್ಥೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕ ಪ್ರಭಾರದಲ್ಲಿ ಶ್ರೀ ವೈ.ಹೆಚ್. ಗೋಪಾಲಕೃಷ್ಣ ರವರು ವರದಿ ಸಾಲಿನಲ್ಲಿ ದಿನಾಂಕ; 11-07-2019 ರವರೆಗೆ ಕಾರ್ಯ ನಿರ್ವಹಿಸಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ದಿನಾಂಕ: 10-07-2019ರಂತೆ ಶ್ರೀ ಬಿ.ಸಿ. ಸತೀಶ್ ಸಹಕಾರ ಸಂಘಗಳ ಅಪರ ನಿಬಂಧಕರು ಇವರನ್ನು ಸಂಸ್ಥೆಯ ವ್ಯವಸ್ಥಾಪಕರ ನಿರ್ದೇಶಕರಾಗಿ ನೇಮಕವಾಗಿದ್ದು, ದಿನಾಂಕ: 12-07-2019 ರಂದು ಸದರಿ ಹುದ್ದೆಗೆ ವರದಿ ಮಾಡಿಕೊಂಡಿರುತ್ತಾರೆ. ವರದಿ ಸಾಲಿನಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಒ.100/ಇಸಿ/2019 ದಿನಾಂಕ: 05-08-2019 ರನ್ವಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳಕ್ಕೆ ನೇಮಕವಾಗಿದ್ದು, ಮುಂದಿನ ಆದೇಶದವರೆವಿಗೂ ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಲ ನಿ, ಇದರ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಲೆಕ್ಕಪರಿಶೋಧನಾ ವೇಳೆಗೆ ಶ್ರೀ ಬಿ.ಸಿ. ಸತೀಶ್ ರವರು ವರ್ಗಾವಣೆಗೊಂಡಿದ್ದು, ಶ್ರೀ ಅಶ್ವತ್ಥನಾರಾಯಣ, ಸಹಕಾರ ಸಂಘಗಳ ಜಂಟಿ ನಿಬಂಧಕರು (ರೇಷ್ಮೆ) ಇವರನ್ನು ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲದಲ್ಲಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಅಧಿಕ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

4) ಶಾಖೆಗಳು ಮತ್ತು ಅವುಗಳ ವಿಳಾಸ

ಶಾಖೆಯ ಹೆಸರು	ಶಾಖೆಯ ವಿಳಾಸ	ಶಾಖಾ ವ್ಯವಸ್ಥಾಪಕರು
ಯಾವುದೇ ಶಾಖೆಗಳನ್ನು ಹೊಂದಿರುವುದಿಲ್ಲ.		



ಲೆಕ್ಕಪರಿಶೋಧನೆ ಮತ್ತು ಆಂತರಿಕ ಪರಿಶೋಧನೆ ವಿವರಗಳು

6) ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಒದಗಿಸಿದವರ ಹೆಸರು ಮತ್ತು ಹುದ್ದೆ

ಹೆಸರು	ಹುದ್ದೆ	ಕಛೇರಿ
ಶ್ರೀ ಅಶ್ವತ್ಥನಾರಾಯಣ	ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಅಧಿಕ ಪ್ರಭಾರದಲ್ಲಿ)	ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ಬೆಂಗಳೂರು
ಶ್ರೀಮತಿ ಎನ್.ಆರ್. ರಮಣಿ	ಪ್ರಧಾನ ವ್ಯವಸ್ಥಾಪಕರು (ಪ್ರಭಾರ)	–ಡಿಟೋ–
ಶ್ರೀ ಕೆ.ನಾಗರಾಜ್	ಮೊದಲನೇ ದರ್ಜೆ ಗುಮಾಸ್ತರು/ಲೆಕ್ಕಾಧಿಕಾರಿ (ಪ್ರಭಾರ)	–ಡಿಟೋ–

7) ಹಿಂದಿನ ಸಾಲಿನ ಲೆಕ್ಕ ಪರಿಶೋಧಕರ ಹೆಸರು ಮತ್ತು ವಿಳಾಸ

1)	ಲೆಕ್ಕಪರಿಶೋಧಕರ ಹೆಸರು	ಸುರೇಶ್.ಜಿ.ಮುದ್ದೆಬಿಹಾಳ್
2)	ಹುದ್ದೆ ಹಾಗೂ ವಿಳಾಸ	ಮುದ್ದೇಬಿಹಾಳ್ ಅಂಡ್ ಕಂಪನಿ. ಸನ್ನದು ಲೆಕ್ಕಪರಿಶೋಧಕರು, ನಂ. 88/4.ಎಫಿ–3, 2ನೇ ಫ್ಲೋರ್, ಕೆ.ಎಂ.ಆರ್ ಅಪಾರ್ಟ್‌ಮೆಂಟ್, 18ನೇ ಕ್ರಾಸ್, ಭಗವತಿ ಲೇ ಔಟ್, ಹುಳಿಮಾವು, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076.
3)	ಎಂಪಾನಲ್‌ಮೆಂಟ್ ನಂಬರ್	025339
4)	ಲೆಕ್ಕಪರಿಶೋಧನಾ ಅವಧಿ	1–4–2018 ರಿಂದ 31–3–2019

7) ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ವಿವರ

1)	ಲೆಕ್ಕಪರಿಶೋಧಕರ ಹೆಸರು	ಮಿನೇಜಸ್ ಅಂಡ್ ಅಸೋಸಿಯೇಟ್ಸ್
2)	ಹುದ್ದೆ ಹಾಗೂ ವಿಳಾಸ	ಮಿನೇಜಸ್ ಅಂಡ್ ಅಸೋಸಿಯೇಟ್ಸ್, ನಂ. 137/1, 2ನೇ ಅಂತಸ್ತು, ಆರ್.ಎಂ.ವಿ ಆಸ್ಪತ್ರೆ ಎದುರು, ಎ.ಇ.ಸಿಎಸ್. ಲೇಔಟ್, ಸಂಜಯನಗರ, ಬೆಂಗಳೂರು– 560 094.
3)	ಎಂಪಾನಲ್‌ಮೆಂಟ್ ನಂಬರ್	ಸಿ–28/02/2013–18:26:39
4)	ನೇಮಕಾತಿ ಉಲ್ಲೇಖ / ವಂಟನೆ ಆದೇಶ ಸಂಖ್ಯೆ ಮತ್ತು ದಿನಾಂಕ	ದಿನಾಂಕ: 23–9–2019ರ ಸರ್ವ ಸದಸ್ಯರ ಸಭೆ ನಿರ್ಣಯ ಸಂಖ್ಯೆ 12 ರಂತೆ ಮೇಲ್ಕಂಡ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಆದರೆ ಈ ಬಗ್ಗೆ ವಂಟನೆ ಆದೇಶಗಳನ್ನು ಸಂಬಂಧಪಟ್ಟವರಿಗೆ ರವಾನಿಸಿರುವುದಿಲ್ಲ.
5)	ಲೆಕ್ಕಪರಿಶೋಧನೆಯ ಆರಂಭದ ದಿನಾಂಕ	ದಿನಾಂಕ: 23–04–2020
6)	ಲೆಕ್ಕಪರಿಶೋಧನೆಯ ಮುಕ್ತಾಯದ ದಿನಾಂಕ	ದಿನಾಂಕ: 21–10–2020
7)	ಲೆಕ್ಕಪರಿಶೋಧನಾ ವರದಿ ನೀಡಿದ ದಿನಾಂಕ	ದಿನಾಂಕ: 29–10–2020
8)	ಲೆ.ಪ.ಗೆ ತೆಗೆದುಕೊಂಡ (ಮಾನವ) ದಿನಗಳು	45 ದಿನಗಳು

8) ಲೆಕ್ಕಪರಿಶೋಧನಾ ವರ್ಗೀಕರಣ :

(ನಿರ್ದೇಶಕರ ಲೆಕ್ಕ ಪರಿಶೋಧನಾ ಮಾರ್ಗಸೂಚಿ (Audit Instruction) ಕ್ರಮ ಸಂಖ್ಯೆಯೊಂದಿಗೆ ವಿಮರ್ಷಿಸಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು.)

ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ ವರ್ಗೀಕರಣ	"ಎ"
ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರ್ಗೀಕರಣ	"ಎ"

9) ಆಂತರಿಕ/ ಸಮವರ್ತಿ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಷೆ :

1)	ಸಂಘದ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೆ?	ಸಂಸ್ಥೆಯ ಹಿರಿಯ ಶ್ರೇಣಿಯ ಸಿಬ್ಬಂದಿಯೊಬ್ಬರು ಹೆಚ್ಚುವರಿಯಾಗಿ ಆಂತರಿಕ ಲೆಕ್ಕಪರಿಶೋಧಕರಾಗಿ ಕೆಲಸ ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ.
2)	ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆಯೆ?	ಆಂತರಿಕ ಲೆಕ್ಕಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆ.
3)	ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು	ಆಂತರಿಕ ಲೆಕ್ಕಪರಿಶೋಧನೆ ಕುರಿತಂತೆ ನ್ಯೂನತೆಗಳ ಬಗ್ಗೆ ಪ್ರತ್ಯೇಕವಾಗಿ ವರದಿ ತಯಾರಿಸಿ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ.

MENEZES & ASSOCIATES BANGALORE-94 CHARTERED ACCOUNTANTS

4)	ಅವುಗಳಿಗೆ ಸಂಸ್ಥೆಯು ನೀಡಿದ ಅನುಪಾಲನಾ ವರದಿಯ ವಿವರ	ಕಡತದಲ್ಲಿ ವ್ಯಕ್ತಪಡಿಸಿದ ಆಕ್ಷೇಪಣೆಗಳನ್ನು ಸಂಬಂಧಪಟ್ಟ ಸಿಬ್ಬಂದಿಯು ಸರಿಪಡಿಸಿಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ.
5)	ಅಂತಹ ನ್ಯೂನತೆಗಳು ಮುಂದುವರೆದಿದೆಯೆ? ಅವುಗಳ ನಿವಾರಣೆಗೆ ಕೈಗೊಂಡ ಕ್ರಮಗಳೇನು?	ಮೇಲ್ಕಂಡ ಕಾರಣಗಳಿಂದಾಗಿ ಸದರಿ ಪ್ರಶ್ನಾವಳಿಗೆ ವ್ಯಾಖ್ಯಾನಿಸಲು ಏನು ಇರುವುದಿಲ್ಲ.

ದಾಖಲೆಗಳು, ಲೆಕ್ಕಪತ್ರಗಳ ನಿರ್ವಹಣೆ

10) ಕರ್ನಾಟಕ ಸಹಕಾರ ಸಂಘಗಳ ನಿಯಮ 29 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 8 ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರು ಪಡಿಸಿದ್ದಾರೆಯೇ?

ಎ	ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ	ಹೌದು	–
ಬಿ	ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಲಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ;	ಹೌದು	–
ಸಿ	ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ;	ಹೌದು	–
ಡಿ	ಸದಸ್ಯತ್ವ ಮತ್ತು ಷೇರು ಷೆಡ್ಯೂಲು;	ಹೌದು	–
ಇ	ಆಡಳಿತ ಮಂಡಲಿಯ ಸದಸ್ಯರ ಮತ್ತು ನೌಕರರ ಪಟ್ಟಿ;	ಹೌದು	–
ಎಫ್	ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;	ಹೌದು	–
ಜಿ	ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;	ಹೌದು	–
ಹೆಚ್	ತಗಾದೆ ವಸೂಲಿ ಮತ್ತು ಉಳಿಕೆ ತಃಖ್ತೆ;	ಹೌದು	–
ಐ	ಸುಸ್ತಿದಾರರ ಸದಸ್ಯರ ಪಟ್ಟಿ;	–	ಪ್ರತ್ಯೇಕವಾಗಿ ನಿರ್ವಹಿಸಲಾಗಿದೆ
ಜೆ	ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ;	–	ಪ್ರತ್ಯೇಕವಾಗಿ ನಿರ್ವಹಿಸಲಾಗಿದೆ
ಕೆ	ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು;	ಹೌದು	–
ಎಲ್	ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು;	ಹೌದು	–
ಎಮ್	ಸಾಲ ದೃಢೀಕರಣ ತಃಖ್ತೆಗಳು;	ಹೌದು	–
ಎನ್	ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ;	ಹೌದು	–
ಒ	ಮೂರು ಅಥವಾ ಹೆಚ್ಚು ಆಡಳಿತ ಮಂಡಲಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು;	ಹೌದು	–
ಪಿ	ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು;	ಹೌದು	–
ಕ್ಯೂ	ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು;	–	ಪ್ರತ್ಯೇಕವಾಗಿ ನಿರ್ವಹಿಸಲಾಗಿದೆ
ಆರ್	ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ;	–	ಅನ್ವಯಿಸುವುದಿಲ್ಲ
ಎಸ್	ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು;	ಹೌದು	–
ಟಿ	ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು;	ಹೌದು	–
ಯು	ಮೀಸಲು ಇತರ ನಿಧಿಗಳ ಷೆಡ್ಯೂಲು;	ಹೌದು	–
ವ್ಹಿ	ಠೇವಣಿದಾರರ ಷೆಡ್ಯೂಲು;	ಹೌದು	–
ಡಬ್ಲ್ಯೂ	ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು;	ಹೌದು	–
ಎಕ್ಸ್	ಅಖೈರು ದಾಸ್ತಾನಿನ ಷೆಡ್ಯೂಲು;	ಹೌದು	–
ವೈ	ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗವಾರು;	ಹೌದು	–
ಝೆಡ್	ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು;	ಹೌದು	–



11) ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ

ಸಂಘವು ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ವಿವರಣೆ

1	ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ ?	ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಂಬಂಧಪಟ್ಟವರಿಗೆ ಸಲ್ಲಿಸಲಾಗಿದೆ.
2	ಸಲ್ಲಿಸಿದ್ದಲ್ಲಿ ಪತ್ರ ಸಂಖ್ಯೆ, ವಿವರ	ಸಹಕಾರ ಸಂಘಗಳ ಕಾಯಿದೆ ಕಾನೂನು 63(10) ರಂತೆ ಸರ್ವ ಸದಸ್ಯರ ಸಭೆ ನಡೆದ ದಿನಾಂಕದಿಂದ ಒಂದು ಮಾಹೆಯೊಳಗೆ ಅನುಸರಣಾ ವರದಿಯನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಹಾಗೂ ನಿಬಂಧಕರಿಗೆ ಸಲ್ಲಿಸಬೇಕಾಗಿದ್ದು, ಈ ಬಗ್ಗೆ ಸಹಕಾರ ಸಂಘಗಳ ನಿಬಂಧಕರಿಗೆ ಮಾತ್ರ ಅನುಸರಣಾ ವರದಿಯನ್ನು ಸಕಾಲದಲ್ಲಿ ಪತ್ರ ಸಂಖ್ಯೆ: ಕವಮ:3800/ 2019-20 ದಿನಾಂಕ: 21-10-2019ರಂದು ಸಲ್ಲಿಸಲಾಗಿದೆ.
3	ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು.	

ಕ್ರ.ಸಂ.	ಕಂಡಿಕೆ ಸಂಖ್ಯೆ	ಪುಟ ಸಂಖ್ಯೆ	ನ್ಯೂನತೆಯ ಸಂಕ್ಷಿಪ್ತ ವಿವರ	ನೀಡಿದ ಸಮಜಾಯಿಷಿ	ಪ್ರಸ್ತುತ ಸ್ಥಿತಿ
1	43 (1)	57	1) ಇತ್ತೀಚಿನ ವರ್ಷಗಳಲ್ಲಿ ಜೀವ ವಿಮಾ ಸಂಸ್ಥೆಯವರು ಆರ್ಥಿಕ ಸಹಾಯ ಮಾಡದೆ ಇರುವುದರಿಂದ ಸಂಸ್ಥೆಯ ಸದಸ್ಯರಿಗೆ ಸಾಲಗಳನ್ನು ವಿತರಿಸಲು ಸಾಧ್ಯವಾಗದೆ ಇರುವುದರಿಂದ ಬೇರೊಂದು ಆರ್ಥಿಕ ನೆರವು ನೀಡುವ ಸಂಸ್ಥೆಯೊಂದಿಗೆ ಸಂಪರ್ಕಿಸಿದ್ದು, ಸಾಲ ಪಡೆಯುವ ಪ್ರಯತ್ನ ಆಗಿದ್ದರೂ ಜಾಗ್ರತೆ ಸಾಲ ಪಡೆದು ಹೆಚ್ಚು ಸದಸ್ಯರಿಗೆ ಸಾಲ ವಿತರಿಸುವುದು ಅಗತ್ಯವಾದ ಎಲ್ಲಾ ವ್ಯವಹಾರಗಳ ಬಗ್ಗೆ ಕ್ರಮ ಮುಂದುವರೆಸುವುದು.	ಸಂಸ್ಥೆಯು ತನ್ನ ಸ್ವಂತ ಬಂಡವಾಳವನ್ನು ವೃದ್ಧಿಸಿಕೊಳ್ಳುವ ಮೂಲಕ ತನ್ನ ಸದಸ್ಯರಿಗೆ ಬೇಕಾದ ಸಾಲಗಳನ್ನು ನೀಡಲು ಉದ್ದೇಶಿಸಲಾಗಿರುತ್ತದೆ	ಕ್ರಮವಿಡಲಾಗಿದೆ
2	43 (2)	57	ನಿವೇಶನಗಳ ಹಂಚಿಕೆಯ ಯೋಜನೆಗಳು ಪ್ರಾರಂಭವಾಗಿ 10-12 ವರ್ಷಗಳಾಗಿದ್ದರೂ ಸಂಸ್ಥೆಯು ಸದಸ್ಯರಿಗೆ ಬಾಕಿ ಇರುವ ನಿವೇಶನ ಸಿಗುವಂತೆ ಅಭಿವೃದ್ಧಿದಾರರೊಂದಿಗೆ ವ್ಯವಹರಿಸಿ ಈ ಯೋಜನೆಯನ್ನು ಪೂರ್ಣಗೊಳಿಸಲು ಪ್ರಯತ್ನ ನಡೆಸುವುದು.	ನಿವೇಶನ ಹಂಚಿಕೆ ಮಾಡಿ ನೊಂದಣಿ ಮಾಡಲಾಗುತ್ತಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಕ್ರಮವಿರಿಸಲಾಗಿದೆ.	ನಿವೇಶನಗಳ ಹಂಚಿಕೆ ಮಾಡಿದ ಸದಸ್ಯರಿಗೆ ನೊಂದಾಯಿಸಲ್ಪಟ್ಟಿರುತ್ತದೆ.
3	43 (4)	58	ಸಂಸ್ಥೆಯ ಸಹ ಸದಸ್ಯತ್ವವನ್ನು ಕಾನೂನು ಮಿತಿಯಲ್ಲಿ ಇರುವಂತೆ ನೋಡಿಕೊಳ್ಳತಕ್ಕದ್ದು.	ಕ್ರಮವಿರಿಸಲಾಗುವುದು	ನ್ಯೂನತೆ ಹಾಗೆಯೇ ಮುಂದುವರೆದಿರುತ್ತದೆ.
4	43 (5)	58	ಸಂಸ್ಥೆಯ ವತಿಯಿಂದ ವರದಿ ಸಾಲಿನಲ್ಲಿ ರೂ. 3.39 ಕೋಟಿ ಸಾಲ ನೀಡಿದ್ದು, ಅದನ್ನು ಜೀವ ವಿಮಾ ನಿಗಮ ಸಾಲ ಎಂದು ಪರಿಗಣಿಸುತ್ತಿರುವ ಕ್ರಮ ಸರಿಯಲ್ಲ.	ಜೀವ ವಿಮಾ ಸಾಲವು ಮರುಪಾವತಿ ಬಾಕಿ ಇರುವುದರಿಂದ ಜೀವ ವಿಮಾ ಸಾಲ ಎಂದು ತೋರಿಸಲಾಗುತ್ತಿದೆ.	ನ್ಯೂನತೆ ಹಾಗೆಯೇ ಮುಂದುವರೆದಿರುತ್ತದೆ.

MENEZES & ASSOCIATES BANGALORE-94 CHARTERED ACCOUNTANTS

5	43 (6)	58	ಸಂಬಳವು ವೇತನ ಹಾಗೂ ಇತರ ಬಾಬ್ತುಗಳಲ್ಲಿ ಮೂಲದಲ್ಲಿ ಕಟಾಯಿಸಲಾದ ಆದಾಯ ತೆರಿಗೆ (TDS) ಬಾಬ್ತುಗಳನ್ನು ಸಕಾಲದಲ್ಲಿ ಇಲಾಖೆಗೆ ಪಾವತಿಸಲು ಕ್ರಮ ಅಗತ್ಯವಾಗಿರುತ್ತದೆ.	ಸಕಾಲದಲ್ಲಿ ಪಾವತಿಸಲಾಗುತ್ತಿದೆ.	ನ್ಯೂನತೆ ಸರಿಪಡಿಸಿಕೊಂಡಿರುತ್ತಾರೆ.
6	43 (7)	58	ಸಂಸ್ಥೆಯು ಕೆಲವೊಮ್ಮೆ ವ್ಯವಹಾರದಲ್ಲಿ ಪೈಸೆಗಳನ್ನು ನಮೂದಿಸುತ್ತಿರುವ ಕ್ರಮವನ್ನು ಕೈ ಬಿಡುವುದು.	ಸರಿಪಡಿಸಲಾಗಿದೆ	ನ್ಯೂನತೆ ಹಾಗೆಯೇ ಮುಂದುವರೆದಿರುತ್ತದೆ.
7	43 (8)	58	ವರದಿ ಸಾಲಿನಲ್ಲಿ ಕೆಲವೊಮ್ಮೆ ರೂ. 10,000/- ಕ್ಕಿಂತ ಹೆಚ್ಚಿನ ಬಾಬ್ತುಗಳನ್ನು ನಗದು ರೂಪದಲ್ಲಿ ಪಾವತಿಸಿರುವುದನ್ನು ಗಮನಿಸಿದ್ದು, ಕೂಡಲೇ ಕೈ ಬಿಡತಕ್ಕದ್ದು.	ಅಗತ್ಯವಿದ್ದಾಗ ಪಾವತಿಸಲಾಗಿದೆ	ಭಾಗಶಃ ಸರಿಪಡಿಸಿಕೊಂಡಿರುತ್ತದೆ.
8	43 (9)	58	ಅನಗತ್ಯವಾಗಿ ಮುಂದುವರೆಯುತ್ತಿರುವ ಕೆಲ ಜವಾಬ್ದಾರಿಗಳನ್ನು ಚುಕ್ತಾ ಮಾಡಿಕೊಳ್ಳಲು ಕ್ರಮ ಅಗತ್ಯ.	ಕ್ರಮವಿರಿಸಲಾಗುವುದು	ಹಾಗೆಯೇ ಮುಂದುವರೆದಿರುತ್ತದೆ.
9	44 (1)	60	ಮೂರು ವರ್ಷಕ್ಕೆ ಮೇಲ್ಪಟ್ಟ ಡಿವಿಡೆಂಡನ್ನು ಆಪದ್ಧನಕ್ಕೆ ವರ್ಗಾಯಿಸುವ ಕ್ರಮ ಅಗತ್ಯ.	ಕ್ರಮವಿರಿಸಲಾಗುತ್ತಿದೆ	3 ವರ್ಷ ಮೇಲ್ಪಟ್ಟ ಡಿವಿಡೆಂಡನ್ನು ಆಪದ್ಧನಕ್ಕೆ ವರ್ಗಾಹಿಸದೇ ಇರುವುದು ಕಂಡು ಬಂದಿರುತ್ತದೆ
10	44 (2)	60	ಅಪೆಕ್ಸ್ ಬ್ಯಾಂಕ್, ಜಯನಗರ ಶಾಖೆಯ ವಿಷಯದ ಕುರಿತಂತೆ ಸಮನ್ವಯ ಪಟ್ಟಿಯಲ್ಲಿ ಮಾರ್ಚ್ 2018 ರಿಂದ ಜಾರಿ ಇರುವ ಚೆಕ್‌ಗಳನ್ನು ರಿವರ್ಸ್ ಎಂಟ್ರಿ ಹಾಕಿಕೊಳ್ಳಲು ಕ್ರಮ ಅಗತ್ಯ.	ಕ್ರಮವಿರಿಸಲಾಗಿದೆ	ಸರಿಪಡಿಸಿಕೊಂಡಿರುವುದಿಲ್ಲ.
11	44 (3)	60	ಸಿಬ್ಬಂದಿಯಿಂದ ಖಾತರಿ ಠೇವಣಿ ಜೊತೆಗೆ ನಂಬಿಕೆ ಖಾತರಿಯನ್ನು ಪಡೆಯಬೇಕಾಗಿದ್ದು, ಪಡೆದಿರುವುದಿಲ್ಲ.	ಕ್ರಮವಿರಿಸಲಾಗುವುದು	ನಷ್ಟ ಭರ್ತಿ ಬಾಂಡುಗಳನ್ನು ಸಿಬ್ಬಂದಿಯಿಂದ ಪಡೆಯಲು ಬಾಕಿ ಇರುತ್ತದೆ.
12	44 (4)	60	ನಿಷ್ಕ್ರೀಯ ಬ್ಯಾಂಕ್ ಖಾತೆಗಳನ್ನು ರದ್ದುಪಡಿಸಿಕೊಳ್ಳಲು ಕ್ರಮ ಅಗತ್ಯ.	ಕ್ರಮವಿರಿಸಲಾಗಿದೆ	ಸರಿಪಡಿಸಿಕೊಂಡಿರುತ್ತಾರೆ.
13	44 (5)	60	ಸುಸ್ತಿ ಸಾಲ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಲು ಕ್ರಮ ಅಗತ್ಯ.	ಕ್ರಮವಿರಿಸಿದೆ	ಸರಿಪಡಿಸಿಕೊಂಡಿರುತ್ತಾರೆ.

12) ಸಹಕಾರ ಸಂಘಕ್ಕೆ / ಸಹಕಾರಿಗೆ ಅನ್ವಯಿಸುವ ಕಾನೂನುಗಳ ಪಾಲನೆ ಅಥವಾ ಉಲ್ಲಂಘನೆ ಕುರಿತು
(ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗು ಬೈಲಾದ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.)

1	ಸಹಕಾರಿ ಕಾಯ್ದೆ, ನಿಯಮಗಳ ಪಾಲನೆ ಬಗ್ಗೆ ಟಿಪ್ಪಣಿ	ಸಂಸ್ಥೆಯು ತನ್ನ ವ್ಯಾಪ್ತಿಯಲ್ಲಿನ ಸಂಘಗಳಿಂದ ಠೇವಣಿಗಳನ್ನು ಸ್ವೀಕರಿಸುತ್ತಿದ್ದು, ಈ ಬಗ್ಗೆ ಅಗತ್ಯ ದ್ರವ್ಯಾಸ್ತಿಗಳನ್ನು ನಿರ್ವಹಿಸಿದ್ದರೂ ಈ ಬಗ್ಗೆ ರಿಜಿಸ್ಟರ್‌ಗಳನ್ನು ಕ್ರಮಬದ್ಧವಾಗಿ ಬರೆದಿಟ್ಟಿರುವುದಿಲ್ಲ.
2	ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ,	ನಿಬಂಧಕರು ಹಾಗೂ ಇಲಾಖೆಯ ನಿರ್ದೇಶಕರು

MENEZES & ASSOCIATES BANGALORE-94 CHARTERED ACCOUNTANTS

	ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೆ? ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ?	ಆಗಿಂದಾಗ್ಗೆ ನೀಡುವ ಸೂಚನೆ ಮತ್ತು ಸುತ್ತೋಲೆಯ ಅಂಶಗಳನ್ನು ಪಾಲಿಸಲಾಗಿರುತ್ತದೆ.
3	ನಬಾರ್ಡ್ ಅಥವಾ ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ	ಸದರಿ ಸಂಸ್ಥೆಗೆ ಆರ್.ಬಿ.ಐ. ಹಾಗೂ ನಬಾರ್ಡ್ ಮಾರ್ಗಸೂಚಿಗಳು ಅನ್ವಯವಾಗುವುದಿಲ್ಲ.
4	ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆ ಬಗ್ಗೆ ವರದಿ	ಉಪವಿಧಿಗಳ ಉಲ್ಲಂಘನೆ ಕಾಯ್ದೆ ಉಲ್ಲಂಘನೆ ಹಾಗೂ ನಿಯಮಗಳ ಉಲ್ಲಂಘನೆ ಬಗ್ಗೆ ವರದಿಯಲ್ಲಿ ಆಯಾಯ ಕಂಡಿಕೆಗಳಲ್ಲಿ ವ್ಯಾಖ್ಯಾನಿಸಲಾಗಿದೆ.
5	ಸಹಕಾರ ಇಲಾಖೆ ಅಥವಾ ಆರ್.ಬಿ.ಐ. ನಿಂದ ವಿಚಾರಣೆ/ ತಪಾಸಣೆ ಬಗ್ಗೆ ವರದಿ	ಸಹಕಾರ ಇಲಾಖೆಯಿಂದ ಯಾವುದೇ ವಿಚಾರಣೆ ಹಾಗೂ ತಪಾಸಣೆ ನಡೆದಿರುವುದಿಲ್ಲ. ಆರ್.ಬಿ.ಐ. ಅಂಶ ಸಂಸ್ಥೆಗೆ ಅನ್ವಯವಾಗುವುದಿಲ್ಲ.

ಭಾಗ – 2

ಸಂಘದ ವ್ಯಾವಹಾರಿಕ ವಿವರಗಳು

13) ದಿನಾಂಕ 31-03-2020 ರಲ್ಲಿರುವಂತೆ "ಎ" ಮತ್ತು "ಸಿ" ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.

ಸದಸ್ಯತ್ವ	ಸಾಮಾನ್ಯ ಸದಸ್ಯತ್ವ		ನಾಮಮಾತ್ರ ಸದಸ್ಯತ್ವ		ಸಹಸದಸ್ಯತ್ವ	
	ಪ್ರಸಕ್ತ ಸಾಲು	ಹಿಂದಿನ ಸಾಲು	ಪ್ರಸಕ್ತ ಸಾಲು	ಹಿಂದಿನ ಸಾಲು	ಪ್ರಸಕ್ತ ಸಾಲು	ಹಿಂದಿನ ಸಾಲು
ವರ್ಷಾರಂಭದಲ್ಲಿ ಇದ್ದ ಸದಸ್ಯರು	447	444	–	–	461	522
ಹೊಸದಾಗಿ ಸದಸ್ಯತ್ವ ಪಡೆದವರು	2	4	–	–	5	5
ಸದಸ್ಯತ್ವದಿಂದ ಕಡಿಮೆ ಆದವರು	–	1	–	–	69	66
ಸಾಲಾಖೈರಿಗೆ ಇರುವ ಸದಸ್ಯರು	449	447	–	–	397	461

13.2 ಸಂಘದ ಸದಸ್ಯರೊಡನೆ ವ್ಯವಹಾರಗಳ ಬಗ್ಗೆ ಟಿಪ್ಪಣಿ

1	ವಿವಿಧ ವರ್ಗಗಳ ಸದಸ್ಯರ ವ್ಯವಹಾರಗಳ ಬಗ್ಗೆ ಟಿಪ್ಪಣಿ	ವಸತಿ ಮಹಾಮಂಡಲದ ಉಪ ನಿಯಮ 22 ರಂತೆ ಸದಸ್ಯತ್ವವು ಈ ಕೆಳಕಂಡಂತೆ ಇರತಕ್ಕದ್ದು.
	ಅ)	"ಎ" ತರಗತಿ ಸದಸ್ಯರು – ಗೃಹ ನಿರ್ಮಾಣ ಸಹಕಾರ ಸಂಘ
	ಆ)	"ಬಿ " ತರಗತಿ ಸದಸ್ಯರು – ಸಂಸ್ಥೆಯಲ್ಲಿ ವ್ಯವಹಾರ ಹೊಂದುವ ವಿಮಾ ಕಂಪನಿ, ಠೇವಣಿ ಕಂಪನಿ ಹಾಗೂ ಇತರೆಯವರಿಗೆ ನಾಮಮಾತ್ರ ಸದಸ್ಯತ್ವ.
	ಇ)	"ಸಿ" ತರಗತಿ ಸದಸ್ಯರು– ಮಹಾಮಂಡಲದಲ್ಲಿ ನೇರವಾಗಿ ಸದಸ್ಯತ್ವ ಪಡೆಯುವವರು.
	ಡಿ)	"ಡಿ" ತರಗತಿ ಸದಸ್ಯರು – ರಾಜ್ಯ ಸರ್ಕಾರ, ಭಾರತೀಯ ಜೀವ ವಿಮಾ ನಿಗಮ, ರಾಷ್ಟ್ರೀಯ ವಸತಿ ಬ್ಯಾಂಕ್, ಹಾಗೂ ಹುಡ್ಕೋ
		ಸಂಸ್ಥೆಯಲ್ಲಿ 'ಎ' ಮತ್ತು 'ಸಿ' ತರಗತಿಯ ಸದಸ್ಯರು ಮಾತ್ರ ಇರುತ್ತಾರೆ. 'ಎ' ಸದಸ್ಯರು ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಮಾತ್ರ ಇದ್ದು, 'ಸಿ' ತರಗತಿ ಸದಸ್ಯರು ಮಹಾಮಂಡಲದಲ್ಲಿ ನೇರವಾಗಿ ಸದಸ್ಯತ್ವ ಪಡೆದು ಸಾಲ ಬಾಕಿ ಇರುವ ಬಿಡಿ ವ್ಯಕ್ತಿಗಳು ಆಗಿರುತ್ತಾರೆ. ವರ್ಷಾರಂಭದಲ್ಲಿ 'ಎ' ತರಗತಿಗೆ ಸಂಬಂಧಿಸಿದ ಸಾಮಾನ್ಯ ಸದಸ್ಯತ್ವ 449 ಸಂಘಗಳು ಹೊಂದಿರುತ್ತದೆ. ವರದಿ ಸಾಲಿನಲ್ಲಿ ಅಪೂರ್ಣ ಷೇರಿನಲ್ಲಿದ್ದ ಎರಡು ಪ್ರಕರಣಗಳಲ್ಲಿ ವ್ಯತ್ಯಾಸದ ಷೇರು ಹಣವನ್ನು ಸಂಬಂಧಪಟ್ಟವರಿಂದ ಪಡೆದು ಪೂರ್ಣ ಸದಸ್ಯರಾಗಿರುತ್ತಾರೆ.

MENEZES & ASSOCIATES BANGALORE-94 CHARTERED ACCOUNTANTS

		'ಎ' ತರಗತಿ ಸದಸ್ಯರು ಮಹಾಮಂಡಲದಲ್ಲಿ 449 ಸದಸ್ಯ ಸಂಘಗಳಿರುತ್ತದೆ. ಸಾಲು ಪ್ರಾರಂಭಕ್ಕೆ ಸಂಸ್ಥೆಯಲ್ಲಿ 461 ಜನ ಸಹ– ಸದಸ್ಯರಿದ್ದು ವರದಿ ಸಾಲಿನಲ್ಲಿ 5 ಸಹಸದಸ್ಯರು ಹೊಸದಾಗಿ ಸದಸ್ಯತ್ವ ಪಡೆದಿದ್ದು, 69 ಜನ ಸದಸ್ಯತ್ವನ್ನು ಕಳೆದುಕೊಂಡಿದ್ದರಿಂದ ವರ್ಷಾಖ್ಯೆರಿಗೆ 397 ಸದಸ್ಯರಿರುತ್ತಾರೆ.
2	ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ	ಸಂಸ್ಥೆಯು ಸದಸ್ಯೇತರರೊಂದಿಗೆ ಯಾವುದೇ ವ್ಯವಹಾರ ನಡೆಸಿರುವುದಿಲ್ಲ
3	ವ್ಯಾಪ್ತಿಮೀರಿ ನಡೆಸಿದ ವ್ಯವಹಾರಗಳು	ವ್ಯಾಪ್ತಿ ಮೀರಿ ನಡೆಸಿರುವ ವ್ಯವಹಾರಗಳು ಯಾವುದು ಕಂಡು ಬಂದಿರುವುದಿಲ್ಲ.
4	ಷೇರು ಬಂಡವಾಳ ನಿರ್ವಹಣೆ ಬಗ್ಗೆ ಟಿಪ್ಪಣಿ	ಸಂಸ್ಥೆಯಲ್ಲಿ ಪಾವತಿಯಾದ ಷೇರು ಬಂಡವಾಳವು ವರ್ಷಾ ವರ್ಷ ಇಳಿಮುಖವಾಗಿರುವುದು ಕಂಡು ಬರುತ್ತದೆ. ಪಾವತಿಯಾದ ಷೇರು ಬಂಡವಾಳವನ್ನು ಹೆಚ್ಚಿಸಿಕೊಳಲು ಕ್ರಮ ಅಗತ್ಯವಿರುತ್ತದೆ. ಸಂಸ್ಥೆಯು ಸತತವಾಗಿ ಪ್ರತಿ ವರ್ಷ ಲಾಭ ಗಳಿಸುತ್ತಿರುವುದರಿಂದ ಷೇರಿನ ಮೌಲ್ಯ ಕಡಿಮೆಯಾಗಿಲ್ಲದಿರುವುದನ್ನು ಗಮನಿಸಲಾಗಿದೆ. ರಾಜ್ಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆಗೂ ಸಂಸ್ಥೆಯಲ್ಲಿ ಸದಸ್ಯತ್ವ ಪಡೆದಿರುವ ಸಂಖ್ಯೆಗೂ ಬಹಳಷ್ಟು ಅಂತರವಿರುತ್ತದೆ. ಇಂತಹ ಸದಸ್ಯತ್ವ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಸಂಸ್ಥೆಯ ಕಾರ್ಯ ವ್ಯಾಪ್ತಿಯೊಳಗೆ ತಂದು ವರ್ಷ ವರ್ಷ ಕಡಿಮೆಯಾಗುತ್ತಿರುವ ಷೇರು ಬಂಡವಾಳವನ್ನು ಹೆಚ್ಚಿಸಿಕೊಳ್ಳಲು ಕ್ರಮ ಅಗತ್ಯವಾಗಿರುತ್ತದೆ.

14 ಷೇರು ಬಂಡವಾಳ ಬಗ್ಗೆ ವಿಮರ್ಷೆ :

1) ಅಧಿಕೃತ ಷೇರು ಬಂಡವಾಳ : ಸಂಘದ ಉಪನಿಯಮದನ್ವಯ ಅಧಿಕೃತ ಷೇರು ಬಂಡವಾಳದ ಮಿತಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ನಿರ್ಧರಿಸಿದ ಕುರಿತು ಹಾಗೂ ಸಂಘದ ಉಪ ನಿಯಮದನ್ವಯ ಷೇರಿನ ಮುಖಬೆಲೆ ಕುರಿತು ವಿಮರ್ಷಿಸುವುದು.	ಷೇರು ಬಂಡವಾಳ : **ಅಧಿಕೃತ ಷೇರು ಬಂಡವಾಳ :** ಉಪ ನಿಯಮ 8(ಅ)ರನ್ವಯ ಅಧಿಕೃತ ಷೇರು ಬಂಡವಾಳವನ್ನು ವಸತಿ ಮಹಾಮಂಡಲದ ಸರ್ವ ಸದಸ್ಯರ ಸಭೆಯು ಆಗಿಂದಾಗ್ಗೆ ನಿಗದಿಗೊಳಿಸ ಬಹುದಾಗಿರುತ್ತದೆ. ಅದರಂತೆ ದಿನಾಂಕ: 27–9–2001 ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ವಸತಿ ಮಹಾಮಂಡಲದ ಅಧಿಕೃತ ಷೇರು ಬಂಡವಾಳವನ್ನು ರೂ. 8.00 ಕೋಟಿಗಳಿಗೆ ನಿಗದಿಪಡಿಸಲಾಗಿದೆ. ಪಾವತಿಯಾದ ಪಾಲು ಬಂಡವಾಳವು ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿರುವುದರಿಂದ ಇತ್ತೀಚಿನ ವರ್ಷಗಳ ಸರ್ವ ಸದಸ್ಯರ ಸಭೆಯಲ್ಲಿ ಅಧಿಕೃತ ಷೇರು ಬಂಡವಾಳವನ್ನು ಹೆಚ್ಚಿಸುವ ಬಗ್ಗೆ ತೀರ್ಮಾನ ಮಾಡುವ ಅಗತ್ಯತೆ ಉದ್ಭವಿಸುವುದಿಲ್ಲ. ಉಪ ನಿಯಮ 8 ರಂತೆ ಷೇರು ಬಂಡವಾಳವು "ಎ", "ಸಿ" ಮತ್ತು "ಡಿ" ತರಗತಿಯ ಷೇರುಗಳಿಂದ ಕೂಡಿದ್ದಾಗಿರುತ್ತದೆ. ದಿನಾಂಕ: 3–2–2014ರಲ್ಲಿ ಆದ ಸಮಗ್ರ ತಿದ್ದುಪಡಿಯಂತೆ "ಎ" ತರಗತಿಯ ಷೇರುಗಳ ಮುಖಬೆಲೆಯು ರೂ. 5,000/– ಹಾಗೂ "ಸಿ" ಮತ್ತು "ಡಿ" ತರಗತಿಯ ರೂ. 1000/– ಪಾವತಿಸಿ ಸಹಸದಸ್ಯರಾಗತಕ್ಕದ್ದು. ಉಪ ನಿಯಮ 24(ಎ) ರನ್ವಯ "ಬಿ" ತರಗತಿಯ ಸದಸ್ಯರು ನಾಮಮಾತ್ರ ಸದಸ್ಯರಾಗಿರುತ್ತಾರೆ. ಬಿಡಿ ವ್ಯಕ್ತಿಗಳು, ವ್ಯವಹಾರ ಸಂಸ್ಥೆಗಳು, ಟ್ರಸ್ಟ್‌ಗಳು, ಬ್ಯಾಂಕಿಂಗ್ ಕಂಪನಿಗಳು, ವಿಮಾ ಕಂಪನಿಗಳು ಮಹಾಮಂಡಲದಲ್ಲಿ

MENEZES & ASSOCIATES BANGALORE-01 CHARTERED ACCOUNTANTS

	ವ್ಯವಹಾರ ಹೊಂದಬೇಕಾದರೆ ಸಾಲ ಮಂಜೂರಾತಿ ಷರತ್ತಿನಂತೆ ಷೇರು ಹಣ ಮತ್ತು ಷೇರು ಶುಲ್ಕವನ್ನು ಮಾತ್ರ ಪಾವತಿಸಬೇಕಾಗಿರುತ್ತದೆ. "ಎ" ತರಗತಿಯು ಸದಸ್ಯರು ತಮ್ಮ ಸದಸ್ಯತ್ವದ ವ್ಯತ್ಯಾಸದ ಹಣವನ್ನು ಸದಸ್ಯ ಸಂಘಗಳಿಂದ ಸಂಗ್ರಹಿಸಲು ಲಿಖಿತ ಮೂಲಕ ಹಾಗೂ ಸರ್ವ ಸದಸ್ಯರ ಸಭೆಯ ನೋಟೀಸ್ ಮೂಲಕ ತಿಳುವಳಿಕೆ ನೀಡಿ ವ್ಯತ್ಯಾಸ ಪಾವತಿಸಿದೇ ಇರುವ ಅಪೂರ್ಣ ಮೊತ್ತಗಳನ್ನು ಅಮಾನತ್ತಿನಲ್ಲಿ ಪ್ರತ್ಯೇಕವಾಗಿ ಇಟ್ಟು ಕ್ರಮ ಕೈಗೊಂಡಿರುತ್ತಾರೆ. "ಸಿ" ತರಗತಿ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ಸದಸ್ಯತ್ವ ನೀಡುವಾಗ, ಸದರಿಯವರ ಸದಸ್ಯತ್ವ, ಸದಸ್ಯತ್ವವಾದ ದಿನಾಂಕದಿಂದ ಒಂದು ನಿರ್ದಿಷ್ಟ ಅವಧಿಗೆ ಅಥವಾ ಸೇವೆ ಪಡೆದ ನಂತರ ಅವರ ಸದಸ್ಯತ್ವ ಮುಕ್ತಾಯವಾಗುವ ಹಾಗೆ ಉಪ ನಿಯಮಗಳಿಗೆ ತಿದ್ದುಪಡಿ ಮಾಡಿಕೊಳ್ಳುವುದು ಸೂಕ್ತ.

14.1 ದಿನಾಂಕ 31-03-2020ಕ್ಕೆ ಇರುವಂತೆ ಸಂಸ್ಥೆಯ ಸಂದಾಯವಾದ ಷೇರು ಬಂಡವಾಳದ ವಿವರ ಈ ಕೆಳಕಂಡಂತೆ ಇರುತ್ತದೆ.

ಷೇರು ಬಂಡವಾಳ	ಸರಕಾರದ ಸದಸ್ಯತ್ವ		ಸಾಮಾನ್ಯ ಸದಸ್ಯತ್ವ		ನಾಮಮಾತ್ರ ಸದಸ್ಯತ್ವ		ಸಹ ಸದಸ್ಯತ್ವ	
	ಪ್ರಸಕ್ತ ಸಾಲು	ಹಿಂದಿನ ಸಾಲು	ಪ್ರಸಕ್ತ ಸಾಲು	ಹಿಂದಿನ ಸಾಲು	ಪ್ರಸಕ್ತ ಸಾಲು	ಹಿಂದಿನ ಸಾಲು	ಪ್ರಸಕ್ತ ಸಾಲು	ಹಿಂದಿನ ಸಾಲು
ವರ್ಷಾರಂಭದಲ್ಲಿದ್ದಂತೆ	–	–	39520000-00	40845000-00	–	–	9581000	10907000
ಪ್ರಸಕ್ತ ಸಾಲಿನಲ್ಲಿನ ಜಮಾ	–	–	2175405-50	2308355-50	–	–	231200	377200
ಪ್ರಸಕ್ತ ಸಾಲಿನಲ್ಲಿನ ಖರ್ಚು	–	–	4075405-50	3633355-50	–	–	1936200	1703200
ಸಾಲಾಖೈರಿಗೆ ಇದ್ದಂತೆ	–	–	**37620000-00**	**39520000**	–	–	**7876000**	**9581000**

	<u>ಸರಕಾರದ ಷೇರು ಬಂಡವಾಳದ ಬಗ್ಗೆ ವಿಮರ್ಶೆ :</u> ಸರ್ಕಾರದ ಷೇರು ಧನ ಕುರಿತಂತೆ ಮಂಜೂರಾತಿ ಆದೇಶ ಮತ್ತು ಮರು ಪಾವತಿಯ ಕಂತುಗಳ ಷರತ್ತು ಇತ್ಯಾದಿ ಕುರಿತು ವಿಮರ್ಷಿಸುವುದು.	ಸರ್ಕಾರದ ಷೇರು ಬಂಡವಾಳ ಸಂಸ್ಥೆಯಲ್ಲಿ ಇರದ ಕಾರಣ ಅದರ ಆದೇಶಗಳ ಲಭ್ಯತೆ ಬಗ್ಗೆ ವ್ಯಾಖ್ಯಾನಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.
3	<u>ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಶೆ</u> (ಇದರಲ್ಲಿ ಸಂದಾಯವಾದ ಷೇರು ಬಂಡವಾಳ ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿ ಇರುವಂತೆ, ಷೇರಿನ ಮುಖಬೆಲೆಯಂತೆ ಪೂರ್ಣ ಇರುವ ಬಗ್ಗೆ, ಎಲ್ಲ ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಿರುವ ಬಗ್ಗೆ, ಸಂಘದಲ್ಲಿ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 122 ರಂತೆ ಸದಸ್ಯರ ರಿಜಿಸ್ಟರ ಪೂರ್ಣ ವಿವರಗಳೊಂದಿಗೆ ಬರೆದು ಇಟ್ಟಿರುವ ಬಗ್ಗೆ ವಿಮರ್ಶಿಸುವುದು.)	ಸಂಸ್ಥೆಯಲ್ಲಿ ಸಂದಾಯವಾದ ಷೇರು ಬಂಡವಾಳ, ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿರುತ್ತದೆ. ಸಹಕಾರ ಸಂಘಗಳ ಕಾಯ್ದೆ ಕಲಂ 122 ರಂತೆ ಸದಸ್ಯರ ರಿಜಿಸ್ಟರ್ ನಿರ್ವಹಿಸಲ್ಪಟ್ಟಿರುತ್ತದೆ.
4	ಕುಳುವಾರು ಪಟ್ಟಿ ತಯಾರಿಸಿದ್ದಾರೆಯೇ? ತಾಳೆಯಾಗಿದೆಯೇ ?	ಪಟ್ಟಿ ತಯಾರಿಸಿದ್ದು, ತಾಳೆ ಇರುತ್ತದೆ.

14.2 ಮೀಸಲು ನಿಧಿ ಮತ್ತು ಇತರೆ ನಿಧಿಗಳು : ಷೆಡ್ಯೂಲ್ "ಯು" ನಲ್ಲಿರುವ ಪ್ರಕಾರ

1	ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆಯೇ? ಪ್ರತ್ಯೇಕವಾಗಿ ಗುಂತಾಯಿ ಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆದಿದ್ದಾರೆಯೇ? ಗುಂತಾವಣೆಯ ಮೇಲಿನ ಬಡ್ಡಿ	ಆಪದ್ಧನ ನಿಧಿ: ರೂ. **8,96,22,057-07:** ದಿನಾಂಕ: 31-3-2020ಕ್ಕೆ ಸಂಸ್ಥೆಯು ಈ ಕೆಳಗಿನಂತೆ ರೂ. 8,96,22,057-07 ಗಳ ಆಪದ್ಧನ ನಿಧಿಯನ್ನು ಹೊಂದಿರುತ್ತದೆ.	
		(ಅ)ಸಾಲ ಪ್ರಾರಂಭಕ್ಕೆ ಇದ್ದ ಆಪದ್ಧನ ಬಾಬ್ತು	ರೂ. 8,67,23,150-44
		(ಆ)2018-19ನೇ ಸಾಲಿನಲ್ಲಿ ನಿವ್ವಳ ಲಾಭ ವಿಭಾಗಿಸಿ ಹಾಗೂ ಇತರೆಯಿಂದ ಆಪದ್ಧನಕ್ಕೆ	ರೂ.28,98,906-63
		(ಇ) ದಿನಾಂಕ: 31-3-2020ಕ್ಕೆ ಸಂಸ್ಥೆಯಲ್ಲಿರುವ ಆಪದ್ಧನ ಬಾಬ್ತು	ರೂ. **8,96,22,057-07**

MENEZES & ASSOCIATES BANGALORE-94 CHARTERED ACCOUNTANTS

	ಸಾಲಾಖೈರಿಗೆ ಸಂಘಕ್ಕೆ ಜಮಾ. ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ.	
		ಸಹಕಾರ ಸಂಘಗಳ ನಿಬಂಧಕರ ಆದೇಶ ಸಂಖ್ಯೆ ಹೆಚ್.ಎಸ್.ಜಿ–1/ಹೆಚ್ ಹೆಚ್ ಎಸ್/154/2004–05ದಿನಾಂಕ: 23–4–2005ರಲ್ಲಿ ಸಹಕಾರ ಸಂಘಗಳ ನಿಯಮ 1960ರ ನಿಯಮ 23(2)ರ ಅವಕಾಶದನ್ವಯ ಮಹಾಮಂಡಲದ 2ನೇ ಹಂತದ ನೂತನ ಕಛೇರಿ ಕಟ್ಟಡ ನಿರ್ಮಿಸಲು ಕಾದಿರಿಸಿದ ನಿಧಿಯಿಂದ ರೂ. 2.00 ಕೋಟಿ ಹಿಂತೆಗೆಯಲು ಹಿಂದಿನ ಸಾಲುಗಳಲ್ಲಿ ಅನುಮತಿ ಪಡೆಯಲಾಗಿದೆ. ಸದರಿ ಆದೇಶದಂತೆ ಹೂಡಿಕೆಯಾದ ಕಾದಿರಿಸಿದ ನಿಧಿಯಿಂದ ರೂ. 1,97,28,545/– ಗಳನ್ನು ಹಿಂತೆಗೆದಿದ್ದು, ನಿಬಂಧಕರ ಆದೇಶದಂತೆ ಹಿಂತೆಗೆದ ಒಟ್ಟು ಹಣ ರೂ. 1,97,28,545/– ಗಳಲ್ಲಿ 2010–11ನೇ ಸಾಲಿನ 20 ವಾರ್ಷಿಕ ಸಮ ಕಂತುಗಳಲ್ಲಿ ಪುನಃ ಆಪದ್ಧನ ನಿಧಿಗೆ ಕಂತು ಮರುಭರಿಸಬೇಕಾಗಿದ್ದು, 2019–20ನೇ ಸಾಲಿನವರೆಗೆ ರೂ. ಒಂದು ಕೋಟಿಗಳನ್ನು ಆಪದ್ಧನಕ್ಕೆ ಮರುಭರಿಸಲಾಗಿದೆ. ಇನ್ನುಳಿದ ರೂ. 97,28,545/– ಗಳನ್ನು ಪ್ರತ್ಯೇಕವಾಗಿ ಹೂಡಲು ಬಾಕಿ ಇರುತ್ತದೆ. ವರ್ಷವಾರು ತಲಾ ರೂ. 30.00 ಲಕ್ಷಕ್ಕೆ ಆಪದ್ಧನಕ್ಕೆ ಜಮಾ ಮಾಡಬೇಕಾಗಿರುತ್ತದೆ. ಭಾರತೀಯ ಜೀವ ವಿಮಾ ನಿಗಮವು ಸಂಸ್ಥೆಗೆ 4–5 ವರ್ಷಗಳಿಂದ ಸಾಲ ಮಂಜೂರು ಮಾಡದೇ ಇರುವುದರಿಂದ ಸಂಸ್ಥೆಯು ಸದಸ್ಯರಿಗೆ ನೇರವಾಗಿ ಸಾಲ ನೀಡಲು ಆರ್ಥಿಕ ಸೌಲಭ್ಯ ಅಗತ್ಯವಿದ್ದು, ಸಂಸ್ಥೆಯು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಕೇಂದ್ರ ಕಛೇರಿಯಲ್ಲಿ ಪ್ರತ್ಯೇಕವಾಗಿ ಹೂಡಿರುವ ಆಪದ್ಧನದ ಪೈಕಿ ರೂ. 6 ಕೋಟಿಗಳಷ್ಟು ಬಳಸಿಕೊಳ್ಳಲು ಸಹಕಾರ ಸಂಘಗಳ ನಿಬಂಧಕರ ಅನುಮತಿಯನ್ನು ಕೇಳಿದ್ದು, ನಿಬಂಧಕರು ಪತ್ರ ಸಂಖ್ಯೆ ಹೆಚ್.ಎಸ್.ಜಿ–1/174/ ಹೆಚ್‌ಹೆಚ್.ಎಸ್/2017–18 ದಿನಾಂಕ: 29–1–2018 ರಂದು ಸದರಿ ಮೊಬಲಗನ್ನು ಸಂಸ್ಥೆಗೆ ಉಪಯೋಗಿಸಲು ಆದೇಶ ಹೊರಡಿಸಿರುತ್ತಾರೆ. ನಿಬಂಧಕರು ವಿಧಿಸಿರುವ ಷರತ್ತಿನಂತೆ ರೂ. 6 ಕೋಟಿ ಆಪದ್ಧನ ನಿಧಿಯ ಮೊತ್ತವನ್ನು ಮಹಾಮಂಡಲದ ಲಾಭದ 20 ಕಂತುಗಳಲ್ಲಿ ಆಪದ್ಧನ ನಿಧಿಗೆ ಜಮಾ ಮಾಡಬೇಕಾಗಿರುತ್ತದೆ. ವರದಿ ಸಾಲಿನಲ್ಲಿ ಅಪೆಕ್ಸ್ ಬ್ಯಾಂಕ್‌ನಲ್ಲಿ ಹೂಡಿರುವ ಆಪದ್ಧನಕ್ಕೆ ಈ ಕೆಳಗಿನ ವಿವರದಂತೆ ಒಟ್ಟು ರೂ. 68,99,000/–ಗಳನ್ನು ಪಾವತಿ ಮಾಡಿರುತ್ತದೆ.

ಕ್ರ.ಸಂ.	ವಿ ವ ರ	ಸಂಸ್ಥೆಯು ಹೊಂದಿರುವ ನಿಧಿ	ಸಂಸ್ಥೆಯು ಹೂಡಿರುವ ನಿಧಿ
1	ಸಾಲು ಪ್ರಾರಂಭಕ್ಕೆ ಅಪೆಕ್ಸ್ ಬ್ಯಾಂಕ್ ಆಪದ್ಧನದಲ್ಲಿ ಬಡ್ಡಿ ಮೊತ್ತ	–	1,94,54,000
2	ವರದಿ ಸಾಲಿನಲ್ಲಿ ಪಾವತಿ ಮಾಡಿದ ವಿವರ	–	–
ಅ)	2018–19ನೇ ಸಾಲಿನ ನಿವ್ವಳ ಲಾಭದ ವಿಲೇವಾರಿಯಲ್ಲಿ ಬಂದ ಬಾಬ್ತು	28,99,000	–
ಆ)	ಕಟ್ಟಡ ನಿರ್ಮಾಣಕ್ಕೆ ಉಪಯೋಗಿ ಸಿದ ಆಪದ್ಧನದ ಪೈಕಿ ಹೂಡಲಾದ ಮೊತ್ತ	10,00,000	–
ಇ)	ಸದಸ್ಯರಿಗೆ ಸಾಲ ನೀಡಲು ಉಪಯೋಗಿಸಿದ ಬಾಬ್ತಿನ ಪೈಕಿ	30,00,000	68,99,000
ಈ)	ದಿನಾಂಕ:31–03–2020ಕ್ಕೆ ಅಪೆಕ್ಸ್ ಬ್ಯಾಂಕಿನಲ್ಲಿ ಆಪದ್ಧನದಲ್ಲಿ ಹೂಡಿರುವ ಮೊತ್ತ	–	2,63,53,000

MENEZES & ASSOCIATES BANGALORE-94 CHARTERED ACCOUNTANTS

		ಸಂಸ್ಥೆಯು ಈ ಹಿಂದೆ ಎರಡು ಸಂದರ್ಭದಲ್ಲಿ ಅಪೆಕ್ಸ್ ಬ್ಯಾಂಕ ಆಪದ್ಧನ ನಿಧಿಯಿಂದ ಇಲಾಖಾ ಅನುಮತಿ ಪಡೆದು ವಿವಿಧ ಉದ್ದೇಶಗಳಿಗೆ ಬಳಸಿಕೊಂಡಿದ್ದು, ಈ ಪೈಕಿ ಮರುಪಾವತಿ ಮಾಡಿದ ಮೊಬಲಗು ಹಾಗೂ ಮರುಪಾವತಿ ಮಾಡಬೇಕಾಗಿರುವ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ಉದ್ದೇಶ	ವಾಪಸ್ಸು ಪಡೆದ ಮೊತ್ತ	ಮರುಪಾವತಿ ಮಾಡಬೇಕಾಗಿರುವ ಸಮಾಕಂತುಗಳು	ಮರುಪಾವತಿ ಮಾಡಿದ ಕಂತುಗಳು	ಮರು ಪಾವತಿ ಮಾಡಿದ ಮೊತ್ತ	ಮರುಪಾವತಿ ಮಾಡಲು ಬಾಕಿ ಇರುವ ಮೊಬಲಗು
1	ಕಟ್ಟಡ ನಿರ್ಮಾಣ ಉದ್ದೇಶ	1,97,28,545	20	10	1,00,00,000	97,28,545
2	ಸಾಲ ನೀಡಿಕೆ ಉದ್ದೇಶ	6,00,00,000	20	02	60,00,000	5,40,00,000
	ಒಟ್ಟು	**7,97,28,545**			**1,60,00,000**	**6,37,28,545**

		ಸಂಸ್ಥೆಯು ದಿನಾಂಕ: 31-03-2020ಕ್ಕೆ ರೂ. 2,58,93,512-07 ಗಳನ್ನು ಪ್ರತ್ಯೇಕವಾಗಿ ಹೂಡಬೇಕಾಗಿದ್ದು, ಸಂಸ್ಥೆಯು ರೂ. 2,63,53,000/- ಗಳನ್ನು ಹೂಡಿರುತ್ತದೆ. ಅಂದರೆ ತಾನು ಕೂಡಬೇಕಾದ ಮೊತ್ತಕ್ಕಿಂತ ಹೆಚ್ಚಾಗಿ ತೊಡಗಿಸಿರುತ್ತದೆ.

14.3 ಇತರೆ ನಿಧಿಗಳು

1	ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಲಾಗಿದೆಯೆ?	ನಿಧಿಗಳನ್ನು ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಲಾಗಿದೆ. ಸಂಸ್ಥೆಯು ದಿನಾಂಕ: 31-3-2020ಕ್ಕೆ ನಿಧಿಗಳು ರೂ. 19,39,98,669-03 ಹೊಂದಿರುವುದನ್ನು ಈ ಕೆಳಗೆ ನಮೂದಿಸಲಾಗಿದೆ.

ಕ್ರ.ಸಂ.	ವಿ ವ ರ	ಸಂಸ್ಥೆಯು ಹೊಂದಿರುವ ನಿಧಿ	ಸಂಸ್ಥೆಯು ಹೂಡಿರುವ ನಿಧಿ
i)	ಕರಡು ಸಾಲದ ನಿಧಿ	2,54,31,105-20	78,02,630-70
ii)	ಕಟ್ಟಡದ ನಿಧಿ	3,36,45,532-96	23,71,087-00
iii)	ಸವಕಳಿ ನಿಧಿ	3,04,60,074-10	-
iv)	ಲಾಭಾಂಶ ಸಮತೋಲನಾ ನಿಧಿಮತ್ತು ಸಾಮಾನ್ಯ ಕ್ಷೇಮ ನಿಧಿ	94,46,181-10	20,33,999-91
v)	ಷೇರು ತೀರಿವಳಿ ನಿಧಿ	1,18,46,612-12	29,31,966-00
vi)	ಸಿಬ್ಬಂದಿ ಗ್ರೂಪ್ ಗ್ರಾಚ್ಯಯಿಟಿ ನಿಧಿ	1,36,93,022-00	1,36,93,022-00
vii)	ಆಶಕ್ತ ಸದಸ್ಯರ ಸಹಾಯ ನಿಧಿ	2,30,281-95	1,25,378-94
viii)	ಕರಡು ಸಾಲದ ಬಾಬ್ತು ಕಾದಿರಿಸಿದ್ದು	6,13,62,349-94	-
ix)	ಕ್ಯಾಪಿಟಲ್ ರಿಸರ್ವ್	4,67,081-00	-
x)	ಧಾರ್ಮಿಕ ದತ್ತಿ ನಿಧಿ	64,09,423-86	3,82,000
xi)	ಸಹಕಾರ ತರಬೇತಿ ಮತ್ತು ಪ್ರಚಾರ ನಿಧಿ	10,07,004-80	74,000-00
	ಒಟ್ಟು	**19,39,98,669-03**	**2,94,14,084-55**

		ಸಂಸ್ಥೆಯು ಹೂಡಿರುವ ನಿಧಿಗಳ ಪೈಕಿ ಮೇಲ್ಕಂಡಂತೆ ಕೆಲವೊಂದು ನಿಧಿಗಳನ್ನು ಭಾಗಷಃ ಹೂಡಿರುತ್ತಾರೆ. ಈ ಹಿಂದೆ ಸಂಸ್ಥೆಯ ಉಪ ನಿಯಮಗಳಲ್ಲಿ ಕೆಲ ನಿಧಿಗಳಿಗೆ ಅವಕಾಶ ಕಲ್ಪಿಸಿದ್ದು, ಈಗ ಆ ನಿಧಿಗಳಿಗೆ ಅವಕಾಶ ಇಲ್ಲದಿರುವ ಈ ಕೆಳಕಂಡ ಬಾಬ್ತುಗಳನ್ನು ಪ್ರತ್ಯೇಕವಾಗಿ ಹೂಡಿದ್ದು, ಅಂತಹವುಗಳನ್ನು ಬೇರೆ ನಿಧಿಗಳಿಗೆ ವರ್ಗಾಯಿಸತಕ್ಕದ್ದು. (1) ಆಶಕ್ತ ಸದಸ್ಯರ ಸಹಾಯ ನಿಧಿ ರೂ. 1,25,378-94



3	ಸಂಘವು ಸಹಕಾರ ಶಿಕ್ಷಣ ನಿಧಿಯ ವಂತಿಗೆಯನ್ನು ಪಾವತಿಸಿದೆಯೆ? ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಸಂಘದ ಸದಸ್ಯರಿಗೆ ಡಿವಿಡೆಂಡ್ ಹಂಚಿ ಸಹಕಾರ ಸಂಘಗಳ ಕಾಯಿದೆ ಕಲಂ 57(4)(ಬಿ) ಯ ಉಲ್ಲಂಘನೆಯಾಗಿದೆಯೇ ?	ವರದಿ ಸಾಲಿನಲ್ಲಿ 2018–19ನೇ ಸಾಲಿನ ನಿವ್ವಳ ಲಾಭ ಹಂಚಿಕೆಯಾಗಿ ರೂ. 1,53,856/– ಸಹಕಾರ ಶಿಕ್ಷಣ ನಿಧಿಗೆ ಕಾದಿರಿಸಿದ್ದು ಅಷ್ಟೇ ಮೊತ್ತವನ್ನು ಸಹಕಾರ ಮಹಾಮಂಡಲಕ್ಕೆ ದಿನಾಂಕ: 09–10–2019ರಂದು ಪಾವತಿಸಿರುತ್ತಾರೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 57ಎ(2) ರಂತೆ ಪ್ರತಿಯೊಂದು ಸಹಕಾರ ಸಂಸ್ಥೆಯು ಅದರ ವಂತಿಗೆಯನ್ನು ಅದರ ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ ಸಂದಾಯ ಮಾಡಬೇಕಾಗಿದ್ದು, ಸಂಸ್ಥೆಯು ದಿನಾಂಕ: 09–10–2019ರಂದು ಪಾವತಿಸಲ್ಪಟ್ಟಿದ್ದು ನಿಯಮವನ್ನು ಉಲ್ಲಂಘನೆ ಮಾಡಿರುವುದಿಲ್ಲ. ಸಂಘವು ಹೊಂದಿರುವ ಕೆಲವೊಂದು ನಿಧಿಗಳನ್ನು ಪ್ರತ್ಯೇಕವಾಗಿ ಹೂಡಬೇಕಾಗಿದ್ದು, ಹೂಡಿರುವುದಿಲ್ಲ, ಸಂಘವು ಹೊಂದಿರುವ ನಿಧಿಗಳನ್ನು ವೆಚ್ಚ ಮಾಡಲು ಒಳ ನಿಯಮಗಳನ್ನು ರಚಿಸಿಕೊಳ್ಳುವುದು.

14.4 ಠೇವಣಿಗಳು :

1	ಸಂಘವು ಠೇವಣಿ ಸಂಗ್ರಹಣೆ ಮಾಡಲು ಉಪನಿಯಮದಲ್ಲಿ ಅವಕಾಶವಿರುವ ಬಗ್ಗೆ ಸಂಘವು ಸಂಗ್ರಹಿಸಿರುವ ಠೇವಣಿ ಉಪನಿಯಮದನುಸಾರ ಇರುವ ಬಗ್ಗೆ ವಿಮರ್ಷಿಸಿ.	ಸಂಸ್ಥೆಯು ಉಪನಿಯಮ 25(iii) (ಅ) ರಂತೆ ನಿಶ್ಚಿತ ಠೇವಣಿಗಳಿಗೆ ಹಾಗೂ (ಊ) ರಂತೆ ಗೃಹ ನಿರ್ಮಾಣ ಸಹಕಾರ ಸಂಘಗಳಿಂದ ಆಪದ್ಧನ ನಿಧಿ ಮತ್ತು ಇತರೆ ನಿಧಿಗಳನ್ನು ಸಂಸ್ಥೆಯು ಪಡೆಯಲು ಅವಕಾಶ ಇರುತ್ತದೆ. ಇದರಂತೆ ದಿನಾಂಕ: 31–03–2020 ರಂತೆ ಸಂಸ್ಥೆಯಲ್ಲಿ ಈ ಕೆಳಗಿನ ವಿವರದಂತೆ ರೂ. 17,53,36,866–02 ಗಳ ವಿವಿಧ ಠೇವಣಿ ಇರುತ್ತದೆ.
2	**ಸಂಘವು ಸಂಗ್ರಹಣೆ ಮಾಡಿರುವ ವಿವಿಧ ಠೇವಣಿಗಳ ವಿವರಗಳು [ಕಳೆದ ಸಾಲು ಹಾಗೂ ಪ್ರಸಕ್ತ ಸಾಲಿಗೆ ಸಂಗ್ರಹಿಸಿರುವ ಮೊಬಲಗು ಹೆಚ್ಚು/ಕಡಿಮೆ ಶೇಕಡ ಮಾಹಿತಿಯೊಂದಿಗೆ ವಿಮರ್ಷಿಸಿ.]** ಸಂಸ್ಥೆಯು ಸಂಗ್ರಹಣೆ ಮಾಡಿರುವ ವಿವಿಧ ಠೇವಣಿಗಳ ವಿವರಗಳು ಹಿಂದಿನ ಸಾಲಿನಲ್ಲಿ ಸಂಗ್ರಹವಾಗಿದ್ದ ಠೇವಣಿಗಳ ವಿವರಗಳೊಂದಿಗೆ ಹಾಗೂ ಹೆಚ್ಚು ಕಡಿಮೆ ಶೇಕಡ ಮಾಹಿತಿಯೊಂದಿಗೆ ವಿವರಣೆ ಈ ಕೆಳಗಿನಂತಿರುತ್ತದೆ. ವರದಿ ಸಾಲಿನ ಠೇವಣಿ ಸಂಗ್ರಹಣೆ ಕುಂಠಿತವಾಗಿರುತ್ತದೆ.	

ಠೇವಣಿ ವಿವರಗಳು	31–03–2019ಕ್ಕೆ	31–03–2020ಕ್ಕೆ	ವ್ಯತ್ಯಾಸ	ಶೇಕಡವಾರು	ಪರಾ
ಖಾಯಂ ಠೇವಣಿ	5,86,35,638–60	5,27,31,546–00	59,04,092–60	10.06	ಹೆಚ್ಚು
ಕಾದಿರಿಸಿದ ನಿಧಿ	11,38,55,404–02	12,26,05,320–02	87,49,916–00	7.68	ಹೆಚ್ಚು
ಒಟ್ಟು ಮೊತ್ತ	**17,24,91,042–62**	**17,53,36,866–02**	**1,46,54,008–60**	**17.74**	

ಒಟ್ಟು ಠೇವಣಿಗಳ ಕಳೆದ 02 ವರ್ಷಗಳ ಅಂಕಿಅಂಶಗಳೊಂದಿಗೆ ತುಲನಾತ್ಮಕ ವಿವರ:

2017–18 ಕ್ಕೆ	2018–19 ಕ್ಕೆ	2019–20 ಕ್ಕೆ
13,15,48,858–52	17,24,91,042–62	17,53,36,866–02

		ಹಿಂದಿನ ಸಾಲಿನಲ್ಲಿ ಸಂಸ್ಥೆಯು ಹೊಂದಿರುವ ಒಟ್ಟಾರೆ ಠೇವಣಿಗಳ ಸಂಗ್ರಹಣೆಯನ್ನು ಗಮನಿಸಿದಾಗ ವರದಿ ಸಾಲಿನ ಅಂತ್ಯಕ್ಕೆ ಇರುವ ಠೇವಣಿಗಳ ಸಂಗ್ರಹಣೆ ಒಟ್ಟಾರೆ ಶೇಕಡ 1.64 ರಷ್ಟು ಹೆಚ್ಚಿಗೆಯಾಗಿರುತ್ತದೆ. ಮತ್ತಷ್ಟು ಠೇವಣಿ ಹೆಚ್ಚಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಇನ್ನಷ್ಟು ಠೇವಣಿಗಳನ್ನು ಹೆಚ್ಚಿಸಿಕೊಳ್ಳಲು ಕ್ರಮವಿಡುವುದು.

ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿತದ ಬಗ್ಗೆ ವಿಮರ್ಶೆ

3	ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ ?	ಸಂಸ್ಥೆಯು ಸದಸ್ಯರಲ್ಲದವರಿಂದ ಯಾವುದೇ ಠೇವಣಿ ಸ್ವೀಕರಿಸಿರುವುದಿಲ್ಲ. ಸಂಘವು ವರ್ಷಾಂತ್ಯಕ್ಕೆ ಸಂಗ್ರಹಿಸಿರುವ ಠೇವಣಿಗಳ ಬಗ್ಗೆ ಪ್ರತ್ಯೇಕ ಕುಳುವಾರು ತಯಾರಿಸಿದ್ದು

MENEZES & ASSOCIATES BANGALORE-94

		ಕುಳುವಾರುಗಳು ಆಸ್ತಿ-ಜವಾಬ್ದಾರಿ ತಃಖ್ತೆಯ ಮೊಬಲುಗಳಿಗೆ ತಾಳೆ ಇರುತ್ತದೆ. ತಾಳೆ ಇರುವ ಕುಳುವಾರು ಪಟ್ಟಿಗಳನ್ನು ಲೆಕ್ಕಪರಿಶೋಧನಾ ವರದಿಗೆ ಪ್ರತ್ಯೇಕವಾಗಿ ಲಗತ್ತಿಸಿದೆ.
4	ಠೇವಣಿ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ	ಠೇವಣಿಗಳ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆ. ಸಂಸ್ಥೆಯು ದಿನಾಂಕ: 01-04-2017 ರಿಂದ ಅವಧಿ ಠೇವಣಿಗಳ ಮೇಲೆ ವಿವಿಧ ಅವಧಿಗಳಿಗೆ ಶೇಕಡ 7 ರಿಂದ 8.5 ರ ತನಕ ಬಡ್ಡಿ ನೀಡಲಾಗುತ್ತಿದೆ. ಹಾಗೂ ಆಪದ್ಧನದ ಮೇಲೆ ಶೇಕಡ 8.5 ರಂತೆ ಬಡ್ಡಿ ನೀಡಲಾಗುತ್ತಿರುತ್ತದೆ. ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ ರೂ. 1,40,90,681/- ಆಗಿರುತ್ತದೆ. ವರದಿ ಸಾಲಿನಲ್ಲಿ ಠೇವಣಿಗಳ ಮೇಲೆ ಸರಾಸರಿ ಶೇಕಡ 8.03 ರಷ್ಟು ಬಡ್ಡಿ ಪಾವತಿಸಿದಂತಾಗಿರುತ್ತದೆ. ಹಿಂದಿನ ಸಾಲಿಗೆ ಹೋಲಿಸಿದಾಗ ವರದಿ ಸಾಲಿನಲ್ಲಿ ಠೇವಣಿಗಳ ಮೇಲೆ ಸರಾಸರಿ ಬಡ್ಡಿಯ ಪ್ರಮಾಣ ಕಡಿಮೆಯಾಗಿರುತ್ತದೆ. ಇದಕ್ಕೆ ಮುಖ್ಯ ಕಾರಣ ಹಿಂದಿನ ಸಾಲುಗಳಿಗಿಂತ ನೀಡುತ್ತಿರುವ ಬಡ್ಡಿಯ ದರದ ಪ್ರಮಾಣ ಕಡಿಮೆ ಮಾಡಿರುವುದೇ ಕಾರಣವಾಗಿರುತ್ತದೆ.
5	ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆಯೇ ?	ಠೇವಣಿದಾರರಿಗೆ ಸರ್ಟಿಫಿಕೇಟ್ ನೀಡಲಾಗಿದೆ.
6	ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸಿ	ವರ್ಷಾಂತ್ಯಕ್ಕೆ ಸಂಸ್ಥೆಯು ಎಲ್ಲಾ ಠೇವಣಿ ಖಾತೆಗಳಿಗೆ ಬಾಕಿ ಇಲ್ಲದಂತೆ ಬಡ್ಡಿ ಪಾವತಿಸಲಾಗಿದೆ. ಆದರೂ ಮುಂಜಾಗ್ರತ ಕ್ರಮವಾಗಿ ವರ್ಷಾಂತ್ಯಕ್ಕೆ ರೂ. 65,50,172-44 ಗಳ ಬಡ್ಡಿಯನ್ನು ಕಾಯ್ದಿರಿಸಿಕೊಂಡಿದೆ.
7	ಪಿಗ್ಮಿ ಠೇವಿನ ವ್ಯವಹಾರ ಕೈಗೊಂಡಿರುವರೋ?	ಪಿಗ್ಮಿ ಠೇವಿನ ವ್ಯವಹಾರ ಕೈಗೊಂಡಿರುವುದಿಲ್ಲ.
8	ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್.	ಪಿಗ್ಮಿ ವ್ಯವಹಾರ ಕೈಗೊಳ್ಳದೇ ಇರುವುದರಿಂದ ಕಮಿಷನ್ ಪ್ರಶ್ನೆ ಉದ್ಭವಿಸುವುದಿಲ್ಲ.
9	ಠೇವಣಾತಿಗಳನ್ನು ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳನ್ನು ಪಾಲಿಸಿರುವರೇ?	ಠೇವಣಿಗಳನ್ನು ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಸಹಕಾರ ಸಂಸ್ಥೆಗಳಿಗೆ ಆದಾಯ ತೆರಿಗೆ ವಿನಾಯ್ತಿ ಇರುವುದರಿಂದ ಆದಾಯ ತೆರಿಗೆ ನಿಯಮಗಳನ್ನು ಪಾಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.
10	ನಗದು ಮೀಸಲು ಮತ್ತು ಪ್ರವಾಹಿ ಧನ ಮಿತಿ ಕಾಯ್ದುಕೊಂಡು ರಿಜಿಸ್ಟರ್ ಬರೆದಿಡಲಾಗಿದೆಯೇ?	ರಿಜಿಸ್ಟರ್ ಬರೆದಿಟ್ಟಿರುವುದಿಲ್ಲ ಆದರೆ ನಗದು ಮೀಸಲು ಮತ್ತು ಪ್ರವಾಹಿ ಧನ ಮಿತಿ ಕಾಯ್ದುಕೊಂಡಿರುತ್ತಾರೆ.
11	**ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು:-** [ಠೇವಣಿ ಸಂಗ್ರಹಣೆಯಲ್ಲಿ ಗಮನಿಸಲಾದ ನ್ಯೂನತೆಗಳಿದ್ದಲ್ಲಿ ವಿವರಗಳೊಂದಿಗೆ ನಮೂದಿಸಿ ವಿಮರ್ಷಿಸುವುದು]	1) ಅಲ್ಲದೆ ಕನಿಷ್ಟ ಸೇವಾ ವ್ಯವಹಾರವಿರುವ ಮಿತಿಗಳನ್ನು ಸದಸ್ಯರುಗಳಿಗೆ ಅರಿವು ಮೂಡಿಸುವುದರ ಮೂಲಕ ಸಂಸ್ಥೆಯ ದುಡಿಯುವ ಬಂಡವಾಳವನ್ನು ಹೆಚ್ಚಿಸಿಕೊಳ್ಳುವುದು.
		2) ಪ್ರಸಕ್ತ ಸಾಲಿನ ಠೇವಣಿ ಸಂಗ್ರಹಣೆ ತೃಪ್ತಿಕರವಾಗಿರುತ್ತದೆ. ಹೀಗೆ ಪ್ರತಿ ವರ್ಷ ಠೇವಣಿಗಳನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ತನ್ನ ದುಡಿಯುವ ಬಂಡವಾಳವನ್ನು ಹೆಚ್ಚಿಸಿಕೊಳ್ಳತಕ್ಕದ್ದು.

14.5 ಹೊರಗಿನಿಂದ ಪಡೆದ ಸಾಲಗಳು:

	ಸಂಘವು ಹೊರಗಿನಿಂದ ಸಾಲ ಪಡೆಯಲು ಉಪನಿಯಮದಲ್ಲಿ ಇರುವ ಅವಕಾಶ ಹಾಗೂ ಮಿತಿಯ ಬಗ್ಗೆ ವಿಮರ್ಷೆ	**ಸಾಲ ಪಡೆಯುವ ಸಾಮರ್ಥ್ಯತೆ :** ಉಪನಿಯಮ 21 ರಂತೆ ಸಂಸ್ಥೆಯು ಉಪವಿಧಿಗಳಲ್ಲಿನ ಉದ್ದೇಶಗಳನ್ನು ಪೂರೈಸಲು ಆಡಳಿತ ಮಂಡಳಿಯು ಕಾಲಕಾಲಕ್ಕೆ

MENEZES & ASSOCIATES
BANGALORE-94
CHARTERED ACCOUNTANTS

		ನಿರ್ಣಯಿಸಿದಂತೆ ಸಾಲವನ್ನು ಪಡೆಯಬಹುದಾಗಿದೆ. ಸದಸ್ಯರಿಂದ ಹಾಗೂ ನಾಮಮಾತ್ರ ಸದಸ್ಯರಿಂದ ಠೇವಣಿಗಳನ್ನು ಸ್ವೀಕರಿಸಬಹುದು. ಬಾಂಡ್‌ಗಳನ್ನು ಬಿಡುಗಡೆ ಮಾಡಬಹುದು ಹಾಗೂ ಡಿಬೆಂಚರ್‌ಗಳನ್ನು ಬಿಡುಗಡೆ ಮಾಡಬಹುದು. ಆದರೆ ಠೇವಣಿ, ಸಾಲ, ಬಾಂಡ್‌ಗಳು ಮತ್ತು ಡಿಬೆಂಚರ್‌ಗಳಿಂದ ಪಡೆಯುವ ಸಾಲದ ಮೊಬಲಗು ಮಹಾಮಂಡಲದ ಷೇರು ಧನ, ಆಪದ್ಧನ ಮತ್ತು ಕಟ್ಟಡ ನಿಧಿಯ 20ರಷ್ಟು ಸಂಚಿತ ನಫೆಯನ್ನು ಕಳೆದು ಬರುವ ಮೊಬಲಗಿಂತ ಮೀರಿರಬಾರದು. ವರದಿ ಸಾಲಿನಾಖ್ಯೈರಿಗೆ ಸಂಸ್ಥೆಯು ಪಡೆದಿರುವ ಸಾಲ ಹಾಗೂ ಸಂಗ್ರಹಿಸಿರುವ ಠೇವಣಿಗಳ ಮೊತ್ತವು ಮೇಲ್ಕಂಡ ಮಿತಿಯಲ್ಲೇ ಇರುವುದನ್ನು ಗಮನಿಸಲಾಗಿದೆ.
1 ಎ]	**ಬ್ಯಾಂಕಿನಿಂದ ಪಡೆದ ಸಾಲಗಳು:** ಬ್ಯಾಂಕಿನ ಹೆಸರು ಮತ್ತು ಶಾಖೆ	ವಸತಿ ಮಹಾಮಂಡಲವು ಈ ಕೆಳಗೆ ವಿವರಿಸಿದ ವಿವಿಧ ಸಂಸ್ಥೆಗಳಿಂದ ಸಾಲಗಳನ್ನು ಪಡೆದಿದ್ದು ದಿನಾಂಕ: 31–3–2020ರ ಅಂತ್ಯಕ್ಕೆ ರೂ. 10,50,00,000/– ಗಳು ಬಾಕಿ ಇರುತ್ತದೆ.

ಕ್ರ.ಸಂ.	ಸಾಲದ ವಿವರ	ಸಾಲು ಪ್ರಾರಂಭಕ್ಕೆ	ಸಾಲ ಪಡೆದಿದ್ದು	ಸಾಲ ಮರುಪಾವತಿ	ವರ್ಷಾಂತ್ಯಕ್ಕೆ ಬಾಕಿ
1	ಜೀವ ವಿಮಾ ಸಂಸ್ಥೆ ಸಾಲ	15,00,00,000	–	4,50,00,000	10,50,00,000
	ಒಟ್ಟು	**15,00,00,000**	–	**4,50,00,000**	**10,50,00,000**

ಬಿ]	ಹೊರಗಿನಿಂದ ಪಡೆದ ವಿವಿಧ ಸಾಲದ ವಿವರ:	**ಜೀವ ವಿಮಾ ಸಂಸ್ಥೆ ಸಾಲ :** ಸಂಸ್ಥೆಯು ಹಿಂದಿನ ಸಾಲುಗಳಲ್ಲಿ ಜೀವ ವಿಮಾ ಸಂಸ್ಥೆಯಿಂದ ಹಾಗೂ ರಾಷ್ಟ್ರೀಯ ವಸತಿ ಬ್ಯಾಂಕಿನಿಂದ ಸಾಲಗಳನ್ನು ಪಡೆದಿದ್ದು, ಹಿಂದಿನ ಸಾಲಿನಲ್ಲಿಯೇ ರಾಷ್ಟ್ರೀಯ ವಸತಿ ಬ್ಯಾಂಕ್ ಸಾಲ ಚುಕ್ತಾ ಗೊಂಡಿರುತ್ತದೆ. ಆದರೆ ಬೇಬಾಕಿ ಪತ್ರ ಹಿಂದಿನ ಸಾಲಿನ ಲೆಕ್ಕಪರಿಶೋಧನಾ ಸಾಲಿನ ವೇಳೆಯಲ್ಲಿ ತಿಳಿಸಿದ್ದರೂ ಪಡೆದಿರುವುದಿಲ್ಲ. ಸಾಲ ಪಡೆಯುವ ಸಂದರ್ಭದಲ್ಲಿ ಸದರಿ ಸಂಸ್ಥೆಯೊಂದಿಗೆ ಒತ್ತೆ ಇಟ್ಟಿರುವ ಆಸ್ತಿ ಪತ್ರಗಳನ್ನು ವಾಪಸ್ಸು ಪಡೆಯಲು ಕ್ರಮ ಅಗತ್ಯವಾಗಿರುತ್ತದೆ. ವರದಿ ಸಾಲಿನಲ್ಲಿ ಜೀವ ವಿಮಾ ಸಂಸ್ಥೆಯಿಂದ ತಾನು ಪಡೆದಿರುವ ಸಾಲಕ್ಕೆ ರೂ. 1,30,45,686/– ಬಡ್ಡಿ ಪಾವತಿಸಲ್ಪಟ್ಟಿರುತ್ತದೆ.
		ಜೀವ ವಿಮಾ ಸಂಸ್ಥೆಗೆ ಬಾಕಿ ಇರುವ ಸಾಲದ ವಿವಿಧ 15 ಖಾತೆಗಳಿದ್ದು, ಪ್ರತಿ ಸಾಲದ ಖಾತೆಯ ಸಂಬಂಧ ಅಸಲು ಮತ್ತು ಬಡ್ಡಿ ಮರುಪಾವತಿ ಮೊಬಲಗನ್ನು ನಿಗದಿ ಪಡಿಸಿದ್ದು, ಅದರಂತೆ ದ್ವೈವಾರ್ಷಿಕ ಅವಧಿಯಲ್ಲಿ ಅಂದರೆ ಜುಲೈ ಮತ್ತು ಜನವರಿ ಮಾಹೆಗಳಲ್ಲಿ ಕಂತು ಪಾವತಿಸಬೇಕಾಗಿರುತ್ತದೆ. ಮೇಲ್ಕಂಡ ಸಾಲದ ಕುಳುವಾರು ತಯಾರಿಸಿದ್ದು, ವರದಿಗೆ ಅಲಾಯಿದ ಲಗತ್ತಿಸಿದೆ. ಸಂಸ್ಥೆಯು ಹಿಂದಿನ ಸಾಲಿನಲ್ಲಿ ಜೀವ ವಿಮಾ ಸಂಸ್ಥೆಗೆ ರೂ. 15,91,644/–ಗಳ ಬಡ್ಡಿ ಕಾಯ್ದಿರಿಸಿಕೊಂಡಿರುತ್ತದೆ.
ಸಿ]	ಪಡೆದ ಸಾಲಗಳಲ್ಲಿ ಸುಸ್ತಿ ಸಾಲದ ವಿವರ	ಸಂಸ್ಥೆಯು ತಾನು ಪಡೆದಿರುವ ಸಾಲಗಳಿಗೆ ಸಂಬಂಧಿಸಿದಂತೆ ವರ್ಷಾಂತ್ಯಕ್ಕೆ ಯಾವುದೇ ಬಾಬ್ತು ಸುಸ್ತಿಯಾಗಿರುವುದಿಲ್ಲ.
ಡಿ]	ಸಾಲಗಳ ಮೇಲೆ ಪಾವತಿಸಿರುವ ಬಡ್ಡಿ [ನಿಖರತೆ ಬಗ್ಗೆ ಪರಿಶೀಲಿಸಿ ವಿಮರ್ಷಿಸುವುದು] ಸಾಲಾಂತ್ಯ ದಿ: 31.3.2020 ಕ್ಕೆ ಪಾವತಿಗೆ ಬಾಕಿ ಇರುವ ಬಡ್ಡಿ, ಈ ಬಡ್ಡಿಗೆ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸುವುದು.	ಸಾಲಗಳ ಮೇಲೆ ಪಾವತಿಸಿರುವ ಬಡ್ಡಿ ಹಾಗೂ ಪಾವತಿಸಬೇಕಾದ ಬಡ್ಡಿಯ ಬಗ್ಗೆ ನಿಖರತೆಯನ್ನು ಲೆಕ್ಕ ವಿಭಾಗದಲ್ಲಿ ಆಗಿಂದ್ದಾಗ್ಗೆ ಪರಿಶೀಲನೆಯಾಗುತ್ತಿರುವುದನ್ನು ಗಮನಿಸಲಾಗಿದೆ.

MENEZES & ASSOCIATES
BANGALORE-94
CHARTERED ACCOUNTANTS

2	ಸಂಘ ಸಂಸ್ಥೆಗಳಿಂದ ಪಡೆದ ಸಾಲಗಳ ವಿವರ: [ಸಾಲಾಂತ್ಯ ದಿ: 31.3.2020ಕ್ಕೆ ದೃಢೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ಹಾಗೂ ಈ ಸಾಲಗಳ ಸುಸ್ತಿ ಬಗ್ಗೆ ವಿಮರ್ಷೆ ನೀಡುವುದು]	ಸಾಲಾಂತ್ಯಕ್ಕೆ ಪಾವತಿಸಲು ಬಾಕಿ ಇರುವ ಸಾಲದ ಬಗ್ಗೆ ಜೀವ ವಿಮಾ ಸಂಸ್ಥೆಯಿಂದ ದೃಢೀಕರಣ ಪತ್ರ ಪಡೆದು ಹಾಜರುಪಡಿಸಿದ್ದು, ಆಸ್ತಿ-ಜವಾಬ್ದಾರಿ ತಃಖ್ತೆ ಮೊಬಲಗಿಗೆ ತಾಳೆ ಇರುತ್ತದೆ. ಬಾರೋಯಿಂಗ್ ರಿಜಿಸ್ಟರ್ ಬರೆದಿಡಲಾಗಿದೆ. ಹಿಂದಿನ ಸಾಲಿನಲ್ಲಿ ರಾಷ್ಟ್ರೀಯ ವಸತಿ ಬ್ಯಾಂಕ್‌ನಿಂದ ಪಡೆದ ಸಾಲವು ಪೂರ್ತಿಯಾಗಿ ಮರುಪಾವತಿಸಿರುತ್ತಾರೆ. ಮೇಲ್ಕಂಡ ಸಂಸ್ಥೆಗಳಿಂದ ವರ್ಷಾಂತ್ಯಕ್ಕೆ ಬೇಬಾಕಿ ಪತ್ರವನ್ನು ತರಿಸಿಡಲು ಕ್ರಮ ತೆಗೆದುಕೊಳ್ಳತಕ್ಕದ್ದು.
3	ಸರ್ಕಾರದ ಸಾಲಗಳು: {ಸರ್ಕಾರದಿಂದ ಪಡೆದಿರುವ ವಿವಿಧ ಸಾಲಗಳ ವರ್ಗವಾರು ವಿವರ, ಪಡೆದ ಸಾಲಗಳ ವಿನಿಯೋಗದ ಬಗ್ಗೆ ಹಾಗೂ ಸಾಲಾಂತ್ಯ ದಿ: 31.3.2020ಕ್ಕೆ ಬಾಕಿ ಇರುವ ಮೊತ್ತಕ್ಕೆ ದೃಢೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ವಿಮರ್ಷೆ]	ಸಂಸ್ಥೆಯು ಸರ್ಕಾರದಿಂದ ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ. ಹೀಗಾಗಿ ಸದರಿ ಪ್ರಶ್ನೆಗಳಿಗೆ ಹೆಚ್ಚಿನ ವ್ಯಾಖ್ಯಾನ ಇರುವುದಿಲ್ಲ.

15) ಸಹಾಯಧನಗಳು :

	ಸರ್ಕಾರದಿಂದ ಪಡೆದ ಸಹಾಯಧನ ಕುರಿತಂತೆ ವಿವರಣೆ :	
	1) ಮಂಜೂರಾದ ಮೊತ್ತ ಹಾಗೂ ಉದ್ದೇಶ, ಉಪಯೋಗಿಸಿದ ರೀತಿ ಇತ್ಯಾದಿ ವಿವರಣೆ. [ಮಂಜೂರಾಗಿರುವ ಎಲ್ಲಾ ರೀತಿಯ ಸಹಾಯ ಧನದ ಬಗ್ಗೆ ಪೂರ್ಣವಾಗಿ ವಿವರಣೆ ನೀಡುವುದು]	ಸಂಸ್ಥೆಯು ಸರ್ಕಾರದಿಂದ ಯಾವುದೇ ವಿಧವಾದ ಸಹಾಯಧನ ಪಡೆದಿರುವುದಿಲ್ಲ. ಹೀಗಾಗಿ ಮಂಜೂರಾತಿ ಮೊತ್ತ, ಉದ್ದೇಶ ಹಾಗೂ ಉಪಯೋಗಿಸಿದ ರೀತಿಯ ಬಗ್ಗೆ ವಿಮರ್ಷೆ ಇರುವುದಿಲ್ಲ.
	2) ಸಂಘವು ವರದಿ ಸಾಲಿನಲ್ಲಿ ಕೇಂದ್ರ / ರಾಜ್ಯ ಸರ್ಕಾರಗಳಿಂದ ಬಡ್ಡಿ ಸಹಾಯ ಧನವನ್ನು ಪಡೆದಿರುತ್ತದೆಯೇ? ಪಡೆದಿದ್ದಲ್ಲಿ ಅದು ಸರ್ಕಾರದ ಆದೇಶಕ್ಕನು ಗುಣವಾಗಿ ದೆಯೇ? ವಿವರಗಳನ್ನು ನಮೂದಿಸುವುದು (ಅನ್ವಯವಾಗುವಲ್ಲಿ ಮಾತ್ರ)	ಸಂಸ್ಥೆಯು ವರದಿ ಸಾಲಿನಲ್ಲಿ ಕೇಂದ್ರ/ರಾಜ್ಯ ಸರ್ಕಾರಗಳಿಂದ ಬಡ್ಡಿ ಸಹಾಯ ಧನವನ್ನು ಪಡೆದಿರುವುದಿಲ್ಲ.
16)	**ಇತರೆ ಜವಾಬ್ದಾರಿಗಳು :**	[ಇತರೆ ಜವಾಬ್ದಾರಿ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಷಿಸುವುದು]

ಕ್ರ.ಸಂ.	ವಿವರ	ಮೊಬಲಗು
1	ಡಿವಿಡೆಂಡ್ ಖಾತೆ	27,22,151-64
2	ಸಾಲಗಳ ಅಮಾನತ್ತು ಖಾತೆ	36,43,616-84
3	ಸಂಘಗಳ ಠೇವಣಿ ಮೇಲೆ ಪಾವತಿಸಬೇಕಾದ ಬಡ್ಡಿ	4,46,839-50
4	ಷೇರು ಅಮಾನತ್ತು	10,76,525-50
5	ಸಿಬ್ಬಂದಿ ಭವಿಷ್ಯನಿಧಿ ಖಾತೆ	1,59,602-00
6	ಅರ್ನೆಸ್ಟ್ ಮನಿ ಡಿಪಾಜಿಟ್	10,000-00
7	ರಿಟೆನ್‌ಷನ್ ಮನಿ ಡಿಪಾಜಿಟ್	6,82,52,380-00
8	ಕೆರೆ ಅಭಿವೃದ್ಧಿ ಶುಲ್ಕ	1,61,29,455-70
9	ನಿವೇಶನ ಮುಂಗಡ ಅಮಾನತ್ತು ಖಾತೆ	2,51,000-00
10	ಬಾಡಿಗೆ ಮುಂಗಡ	45,00,000-00
11	ಬಿಡ್ ಡಿಪಾಜಿಟ್	42,32,000-00
12	ಅಮಾನತ್ತು ಖಾತೆ (ಸಾಮಾನ್ಯ)	78,585-00
13	ವ್ಯವಸ್ಥಾಪಕ ನಿರ್ದೇಶಕರ ಕೆಜಿಐಡಿ, ಜಿ.ಪಿ.ಐ ಇತರೆ	720-00
14	ಸಿಬ್ಬಂದಿ ಖಾತರಿ ಠೇವಣಿ	5,07,598-00
15	ಸಿಬ್ಬಂದಿ ವೃತ್ತಿ ತೆರಿಗೆ	4,200-00
16	ಸಹಕಾರ ಸಪ್ತಾಹ ವಂತಿಕೆ	19,102-24
	ಒಟ್ಟು ರೂ.	**10,20,33,776-42**

MENEZES & ASSOCIATES BANGALORE-94 CHARTERED ACCOUNTANTS

16.1)	**ಲಾಭಾಂಶ ಖಾತೆ (ಡಿವಿಡೆಂಡ್) : ರೂ. 27,22,151-64** ಪ್ರಾರಂಭ ಶಿಲ್ಕು ರೂ. 24,88,238-64 ಗಳಿದ್ದು, ವರದಿ ಸಾಲಿನಲ್ಲಿ 2018-19ನೇ ಸಾಲುಗಳ ಲಾಭ ವಿಲೇವಾರಿಯಿಂದ ರೂ. 53,30,075/- (10%) ಗಳು ಬಂದಿದ್ದು 2018-19ನೇ ಸಾಲಿನಲ್ಲಿ ರೂ. 50,96,162/- ಗಳು ಪಾವತಿಯಾಗಿದ್ದು, ಸಾಲಾಂತ್ಯಕ್ಕೆ ರೂ. 27,22,151-64 ಪಾವತಿಯಾಗಲು ಬಾಕಿ ಇರುತ್ತದೆ.
2)	**ಸಾಲಗಳ ಅಮಾನತ್ತು ಖಾತೆ : ರೂ. 36,43,616-84** ಸಾಲಾಂತ್ಯಕ್ಕೆ ಸದರಿ ಖಾತೆಯಲ್ಲಿ ರೂ. 36,43,616-84 ಹೊಂದಾಣಿಕೆಗಾಗಿ ಬಾಕಿ ಇದ್ದು, ಈ ಬಾಬ್ತು ಕುಳುವಾರು ತಯಾರಿಸಿದ್ದು, ಆಸ್ತಿ-ಜವಾಬ್ದಾರಿ ತಃಖ್ತೆ ಮೊಬಲಗಿಗಿಂತ ರೂ. 70-03 ಕಡಿಮೆ ಇರುತ್ತದೆ. ಸದರಿ ವ್ಯತ್ಯಾಸವನ್ನು ಸರಿಪಡಿಸಲು ಕ್ರಮ ಅಗತ್ಯ. ಸದರಿ ವ್ಯತ್ಯಾಸ ಹಿಂದಿನ ಸಾಲುಗಳಿಂದ ಮುಂದುವರೆದಿರುತ್ತದೆ. ಸದಸ್ಯ ಸಂಘಗಳು ಸದಸ್ಯರ ಪರವಾಗಿ ವಸತಿ ಮಹಾಮಂಡಲದಲ್ಲಿ ವೈಯುಕ್ತಿಕವಾಗಿ ನಿರ್ವಹಿಸುತ್ತಿರುವ ಸಾಲದ ಖಾತೆಗಳಿಗೆ ಕೆಲವೊಮ್ಮೆ ಅವರ ಬಾಕಿಗಿಂತ ಹೆಚ್ಚಿಗೆ ಪಾವತಿಸುತ್ತಿದ್ದು, ಅಂತಹ ಮೊಬಲಗನ್ನು ಸಾಲದ ಅಮಾನತ್ತು ಲೆಕ್ಕಕ್ಕೆ ವರ್ಗಾಯಿಸಿರುತ್ತಾರೆ. ಈ ಬಾಬ್ತನ್ನು ಚುಕ್ತಾಪಡಿಸಿಕೊಳ್ಳಲು ಸಂಬಂಧಪಟ್ಟ ಸಂಘಗಳೊಂದಿಗೆ ಪತ್ರ ವ್ಯವಹಾರ ನಡೆಸತಕ್ಕದ್ದು. ಈ ಬಗ್ಗೆ ಕುಳುವಾರು ತಯಾರಿಸಿದ್ದು, ಸಾಲು ಪ್ರಾರಂಭಕ್ಕೆ 25 ಪ್ರಕರಣಗಳಿದ್ದು, ಸಾಲದ ಅಮನತ್ತು ಲೆಕ್ಕಗಳನ್ನು ಆ ವರ್ಷದ ಅಂತ್ಯಕ್ಕೆ ಚುಕ್ತಾಪಡಿಸಿಕೊಳ್ಳಲು ಕ್ರಮ ಅಗತ್ಯವಾಗಿರುತ್ತದೆ.
3)	**ಷೇರು ಅಮಾನತ್ತು ಖಾತೆ : ರೂ. 10,76,525-50** ಸಾಲಾಂತ್ಯಕ್ಕೆ ಸದರಿ ಖಾತೆಯಲ್ಲಿ ರೂ. 10,76,525-50 ಗಳು ಹೊಂದಾಣಿಕೆಗೆ ಬಾಕಿ ಇರುತ್ತದೆ. ಸದಸ್ಯರಿಗೆ ಸಾಲ ನೀಡಿದಾಗ ಸಾಲದ ನಿಯಮಾವಳಿ ರೀತ್ಯಾ ಶೇ. 5 ರಂತೆ ಷೇರು ಮೊಬಲಗನ್ನು ಹಿಡಿಯುತ್ತಿದ್ದು, ಈ ಬಾಬ್ತು ಒಂದು ಷೇರಿಗಿಂತ ಕಡಿಮೆ ಇರುವ ಮೊಬಲಗನ್ನು ಸಾಲಾಂತ್ಯಕ್ಕೆ ಷೇರು ಅಮಾನತ್ತು ಖಾತೆಗೆ ವರ್ಗಾಯಿಸಲಾಗುತ್ತಿದೆ. ವರದಿ ಸಾಲಿನಲ್ಲಿ ಷೇರು ಅಮಾನತ್ತು ಖಾತೆಗೆ ರೂ. 5,63,855-50 ಗಳು ಜಮಾ ಆಗಿದ್ದು, ಇದೇ ಸಾಲಿನಲ್ಲಿ ರೂ. 5,85,905-50 ಚುಕ್ತಾ ಆಗಿರುತ್ತದೆ. ಹೀಗಾಗಿ ದಿನಾಂಕ: 31-03-2020 ರ ಅಂತ್ಯಕ್ಕೆ ಷೇರು ಅಮಾನತ್ತು ಖಾತೆ ರೂ. 10,76,525-50 ಗಳು ಜವಾಬ್ದಾರಿಯಡಿಯಲ್ಲಿ ಮುಂದುವರೆದಿರುತ್ತದೆ. ವ್ಯತ್ಯಾಸ ಇರುವ ಷೇರುಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಸಂಸ್ಥೆಗಳಿಗೆ ತಿಳುವಳಿಕೆ ಪತ್ರವನ್ನು ಸಂಸ್ಥೆಯವರು ನೀಡಿದ್ದು, ಅದಕ್ಕೆ ಸಂಬಂಧಿಸಿದಂತೆ ಬಹಳಷ್ಟು ಪ್ರಕರಣಗಳಲ್ಲಿ ಪ್ರತಿಕ್ರಿಯೆ ಬಂದಿರುವುದಿಲ್ಲ. ಉಪನಿಯಮ 9 ರಂತೆ ಪೂರ್ಣ ಮುಖ ಬೆಲೆಯ ಷೇರಿನ ಮೇಲಿನ ಷೇರು ಲಾಭಾಂಶ ಘೋಷಿಸಬಹುದಾಗಿದೆ.
4)	**ಸಿಬ್ಬಂದಿ ಭವಿಷ್ಯ ನಿಧಿ ಖಾತೆ : ರೂ. 1,59,602/-** ಸಂಸ್ಥೆಯು ತನ್ನ ಸಿಬ್ಬಂದಿಯನ್ನು ಸಂಗ್ರಹಿಸಿದ ಭವಿಷ್ಯ ನಿಧಿ ಬಾಬ್ತನ್ನು ಸಂಘದ ವಂತಿಕೆಯೊಂದಿಗೆ ಆಗಿಂದಾಗ್ಗೆ ಭವಿಷ್ಯ ನಿಧಿ ಪ್ರಾದೇಶಿಕ ಕಛೇರಿಗೆ ಪಾವತಿಸುವ ಕ್ರಮ ಇಟ್ಟಿದ್ದು, ವರ್ಷಾಂತ್ಯಕ್ಕೆ ಸದರಿ ಕಛೇರಿಗೆ ಪಾವತಿಸಲು ಸಾಧ್ಯವಾಗದೇ ಇರುವ ರೂ. 1,59,602/- ಗಳನ್ನು ಜವಾಬ್ದಾರಿ ಕಡೆ ಮುಂದುವರೆಸಲಾಗಿದೆ. ಸದರಿ ಬಾಬ್ತನ್ನು ಸಾಲು ಕಳೆದ ನಂತರ ಅಂದರೆ ದಿನಾಂಕ: 06-05-2020 ರಂದು ಪಾವತಿಸಿ ಸದರಿ ಲೆಕ್ಕವನ್ನು ಖೈದು ಮಾಡಿಕೊಂಡಿರುತ್ತಾರೆ.
5)	**ಸಿಬ್ಬಂದಿ ವೃತ್ತಿ ತೆರಿಗೆ :** ಮಾರ್ಚಿ ಮಾಹೆಯ ಸಿಬ್ಬಂದಿ ವೇತನ ಪಾವತಿಸುವಾಗ ಕಟಾಯಿಸಿಕೊಂಡಿದೆ ಎನ್ನಲಾದ ರೂ. 4,200/- ಗಳು ದಿನಾಂಕ: 31-3-2020ಕ್ಕೆ ಇಲಾಖೆಗೆ ಪಾವತಿಸಲು ಬಾಕಿ ಇದ್ದು, ಜವಾಬ್ದಾರಿ ಕಡೆ ಮುಂದುವರೆದಿರುತ್ತದೆ.

MENEZES & ASSOCIATES BANGALORE 94 REGISTERED ACCOUNTANTS

6)	**ಸಂಘಗಳ ಠೇವಣಿ ಮೇಲೆ ಪಾವತಿ ಮಾಡಬೇಕಾದ ಬಡ್ಡಿ ಅಮಾನತ್ : ರೂ. 4,46,839–50** ಠೇವಣಿಗಳ ಮೇಲೆ ಬಡ್ಡಿ ಕಾದಿರಿಸಿದ್ದ ರೂ. 4,46,839–50ಗಳು ಹಿಂದಿನ ಸಾಲುಗಳಿಂದ ಯಾವುದೇ ಬದಲಾವಣೆ ಇಲ್ಲದೆ ಮುಂದುವರೆದಿರುತ್ತದೆ. ಲೆಕ್ಕಪರಿಶೋಧನಾ ವೇಳೆಯಲ್ಲಿ ನೀಡಿರುವ ಸಮಜಾಯಿಷಿಯಂತೆ ಈ ಬಾಬ್ತು ವಿವಿಧ ಸಂಘಗಳಿಗೆ ಸೇರಬೇಕಾಗಿದ್ದು, ಅವರಿಗೆ ಬಡ್ಡಿಯನ್ನು ಚೆಕ್ ಮುಖಾಂತರ ನೀಡಿದ್ದರೂ, ಚೆಕ್ಕನ್ನು ನಗದೀಕರಿಸಿಕೊಳ್ಳದೆ ಇರುವುದರಿಂದ ರಿವರ್ಸ್ ಎಂಟ್ರಿಯಾಗಿ ಜವಾಬ್ದಾರಿಯಲ್ಲಿ ಮುಂದುವರೆದಿರುತ್ತದೆ. ಮೇಲ್ಕಂಡ ಬಾಬ್ತಿಗೆ ಸಂಬಂಧಿಸಿದಂತೆ ಸಂಬಂಧಪಟ್ಟವರಿಗೆ ಪತ್ರ ನೀಡಿ ಈ ಲೆಕ್ಕವನ್ನು ಖೈದುಪಡಿಸಿಕೊಳ್ಳತಕ್ಕದ್ದು.
7)	**ಅರ್ನೆಸ್ಟ್ ಮನಿ ಡಿಪಾಜಿಟ್ (ಇ.ಎಂ.ಡಿ): ರೂ. 10,000/–** ಅರ್ನೆಸ್ಟ್ ಮನಿ ಡಿಪಾಜಿಟ್ ಬಾಬ್ತು ಬಹುಹಿಂದಿನ ಸಾಲುಗಳಿಂದ ಯಾವುದೇ ಬದಲಾವಣೆಯಿಲ್ಲದೆ ವರದಿ ಸಾಲಿನಾಖೈರಿಗೂ ಮಂದುವರೆದಿದೆ. ಹಿಂದಿನ ವರದಿಗಳಲ್ಲಿ ತಿಳಿಸಿರುವಂತೆ ಕಛೇರಿ ಕೆಲಸಗಳನ್ನು ಕಂಪ್ಯೂಟರಿಕರಣಗೊಳಿಸಲು ಪ್ರೋಸಸ್‌ವೇರ್ ಸಿಸ್ಟಮ್ ಇವರಿಗೆ ನೀಡಿದ್ದು, ಸದರಿಯವರಿಂದ ರೂ. 10,000/– ಇ.ಎಂ.ಡಿ. ಪಡೆಯಲಾಗಿದೆ. ಸದರಿ ಕಂಪನಿಯವರ ಗಣಕೀಕರಣ ಸಂಬಂಧ ದಾವೆ ಹೂಡಿದ್ದು, ಈ ಪ್ರಕರಣದಲ್ಲಿ ತೀರ್ಪಿನ ನಂತರ ಕ್ರಮವಿಡುವುದು. ಪ್ರಕರಣದ ಸದ್ಯದ ಸ್ಥಿತಿಗತಿ ಮಾಹಿತಿ ಪಡೆದು ಮುಂದಿನ ಲೆಕ್ಕಪರಿಶೋಧನಾ ವೇಳೆಯಲ್ಲಿ ಹಾಜರುಪಡಿಸಲು ಕ್ರಮ ಅಗತ್ಯ.
8)	**ರಿಟೆನ್‌ಷನ್ ಮನಿ ಡಿಪಾಜಿಟ್ : 6,82,52,380/–** ಸಂಸ್ಥೆಯು ಡೆವಲಪರ್‌ರೊಂದಿಗೆ ದಿನಾಂಕ: 02–05–2006ರ ಕರಾರಿನ ಕಂಡಿಕೆ ಸಂಖ್ಯೆ 5(vi)(c) ಪ್ರಕಾರ ಡೆವಲಪರ್‌ಗೆ ಪಾವತಿಸುವ ಹಣದಲ್ಲಿ ಶೇಕಡ 5 ರಷ್ಟು ರಿಟೆನ್‌ಷನ್ ಕಡಿತಗೊಳಿಸಿ 12 ತಿಂಗಳ ನಿರ್ವಹಣಾ ಅವಧಿ ಪೂರ್ಣಗೊಂಡ ನಂತರ ಡೆವಲಪರ್ಸ್‌ಗೆ ಪಾವತಿಸಬೇಕಾಗುತ್ತದೆ. ಹಿಂದಿನ ವರದಿಗಳ ರೀತ್ಯ ರಿಟೆನ್‌ಷನ್ ಮನಿ ಡಿಪಾಜಿಟ್ ರೂ. 211,56,43,836/– ಗಳನ್ನು ಡೆವಲಪರ್‌ರವರಿಂದ ಈ ಕೆಳಗಿನ ವಿವರಣೆಯಂತೆ ಕಡಿತಗೊಳಿಸಿಕೊಂಡಿರುತ್ತಾರೆ. 1 ನೇ ಯೋಜನೆಗೆ ಡೆವಲಪರ್‌ಗೆ ಪಾವತಿಸಿದ ಹಣ — 168,20,47,522 2 2ನೇ ಯೋಜನೆಗೆ ಡೆವಲಪರ್‌ಗೆ ಪಾವತಿಸಿದ ಹಣ — 44,20,00,000 **ಒಟ್ಟು ಪಾವತಿಸಿದ ಮೊತ್ತ — 212,40,47,522** ಮೇಲ್ಕಂಡ ವರದಿಗೆ ಶೇಕಡ 5 ರಂತೆ ಕಡಿತಗೊಂಡ ರಿಟೆನ್‌ಷನ್ ಬಾಬ್ತು ರೂ. 10,57,82,192/– ಗಳಿದ್ದು, ನಂತರ ಕ್ರಮೇಣ ವರ್ಷಗಳಲ್ಲಿ ಈ ಬಾಬ್ತಿನಲ್ಲಿ ಡೆವಲಪರ್‌ಗೆ ಮರುಪಾವತಿ ಮಾಡಿ ಹಿಂದಿನ ಸಾಲಿನ ಅಂತ್ಯಕ್ಕೆ ರೂ. 8,42,02,380/– ಇದ್ದು ವರದಿ ಸಾಲಿನಲ್ಲಿ ದಿನಾಂಕ: 11–07–2019 ರಂದು ರೂ. 1 ಕೋಟಿ ಹಾಗೂ 21–9–2019 ರಂದು ರೂ. 59,50,000/– ಅಂದರೆ 2019–20ನೇ ಸಾಲಿನಲ್ಲಿ ಈ ಬಾಬ್ತಿನಲ್ಲಿ ರೂ. 1,59,50,000/–ಗಳ ಪಾವತಿಸಲಾಗಿರುತ್ತದೆ. ಉಳಿಕೆ ರೂ. 6,82,52,380/– ಗಳು ರಿಟೆನ್‌ಷನ್ ಮನಿ ಡಿಪಾಜಿಟ್ ಖಾತೆಯಲ್ಲಿ ಹಾಗೆಯೇ ಮುಂದುವರೆದಿರುತ್ತದೆ. ದಿನಾಂಕ: 31–3–2020ಕ್ಕೆ ಡೆವಲಪರ್‌ಗೆ ಎರಡೂ ಯೋಜನೆಗಳಿಂದ ರೂ. 211,56,43,836/– ಗಳನ್ನು ಪಾವತಿಸಿದ್ದು, ಶೇಕಡ 5 ರಂತೆ ರೂ. 10,57,82,192/–ಗಳ ರಿಟೆನ್‌ಷನ್ ಡಿಪಾಜಿಟ್‌ನಲ್ಲಿರಬೇಕಾಗಿದ್ದು, ರೂ. 6,82,52,380/– ಗಳು ಇರುತ್ತದೆ. ವ್ಯತ್ಯಾಸದ ಹಣವನ್ನು ಡೆವಲಪರ್‌ನಿಂದ ಜಮಾ ಪಡೆಯತಕ್ಕದ್ದು.

MENEZES & ASSOCIATES BANGALORE-94 CHARTERED ACCOUNTANTS

9) **ಕೆರೆ ಅಭಿವೃದ್ಧಿ ಶುಲ್ಕ : ರೂ. 1,61,29,455–70**

ನಿವೇಶನ ಪಡೆದ ಸದಸ್ಯರಿಂದ, ಚದರಡಿಯಿಂದಕ್ಕೆ ರೂ.5/– ರಂತೆ, ಕೆರೆ ಅಭಿವೃದ್ಧಿ ಶುಲ್ಕ ವಸೂಲಿ ಮಾಡುತ್ತಿದ್ದು, ದಿನಾಂಕ: 31–3–2020ರ ಅಂತ್ಯಕ್ಕೆ ನಿವೇಶನ ಪಡೆದ ಸದಸ್ಯರಿಂದ ರೂ. 1,61,29,455–70 ವಸೂಲು ಮಾಡಲಾಗಿದೆ.

ಹಿಂದಿನ ವರದಿಗಳಂತೆ ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಘನ ಸರ್ಕಾರದ ಆದೇಶದಂತೆ ಕೆರೆ ಅಭಿವೃದ್ಧಿ ಶುಲ್ಕ ರೂ. 1,34,38,482/– ಗಳನ್ನು ಸರ್ಕಾರಕ್ಕೆ ಬಡಾವಣೆ ಅಭಿವೃದ್ಧಿದಾರರು ಪಾವತಿಸಿದ್ದು ಕ್ರಯಪತ್ರ ನಿಬಂಧನೆ ಹಾಗೂ ಷರತ್ತುಗಳನ್ವಯ ನಿವೇಶನ ಖರೀದಿದಾರರುಗಳಿಂದ ಚದರಡಿಗೆ ರೂ. 5/– ಗಳಂತೆ ಕೆರೆ ಅಭಿವೃದ್ಧಿ ಶುಲ್ಕ ವಸೂಲಿ ಮಾಡಲು ನಿರ್ಣಯಿಸಲಾಗಿದೆ. ಸದರಿ ನಿರ್ಣಯದ ಅನುಸಾರ ಈಗಾಗಲೇ ನಿವೇಶನ ಪಡೆದ ಸದಸ್ಯರುಗಳಿಗೆ ನೋಟೀಸ್ ಜಾರಿ ಮಾಡಿದ್ದು, ಸಾಲಾಂತ್ಯಕ್ಕೆ ನಿವೇಶನ ಪಡೆದ ಸದಸ್ಯರಿಂದ ರೂ. 3,03,343/– ವಸೂಲು ಮಾಡಲಾಗಿದೆ. ಲೆಕ್ಕಪರಿಶೋಧನಾ ವೇಳೆಯಲ್ಲಿ ಪಡೆದ ಸಮಜಾಯಿಷಿಯಂತೆ ಬಡಾವಣೆಯಲ್ಲಿ ಉಳಿದ ಕೆರೆ ಅಭಿವೃದ್ಧಿ ಶುಲ್ಕ ಮೊಬಲಗನ್ನು ಬಾಕಿ ಇರುವ ಸದಸ್ಯರಿಂದ ವಸೂಲಾತಿ ಪ್ರಕ್ರಿಯೆ ಮುಂದುವರೆದಿದೆ.

10) **ಬಾಡಿಗೆ ಮುಂಗಡ: ರೂ. 45,00,000/–**

ಸಂಸ್ಥೆಯು ತನ್ನ ಕಛೇರಿಯ ಆವರಣವನ್ನು ಹೊರತುಪಡಿಸಿ ಮುಂಭಾಗದಲ್ಲಿ 14000 ಚದರ ಅಡಿಯ 3 ಅಂತಸ್ತಿನ ಒಂದು ಕಟ್ಟಡವನ್ನು ಹೊಂದಿದ್ದು, ಸದರಿ ಕಟ್ಟಡವನ್ನು ಮೆ॥ ವ್ಯಾಲ್ಯೂ ಪಾಯಿಂಟ್ ಸಿಸ್ಟಮ್ಸ್ ಪ್ರೈ ಲಿ., ರವರೊಂದಿಗೆ ಮಾಹೆಯಾನ ರೂ. 7,28,000/– ಗಳ ಬಾಡಿಗೆ ಮೇರೆಗೆ ನೊಂದಣಿ ರಹಿತ ದಿನಾಂಕ: 31–10–2018 ರಂದು ಲೀಜ್ ಡೀಡ್ ಮಾಡಿಸಿಕೊಂಡು ಲೀಜ್ ದಿನಾಂಕದಿಂದ 10 ವರ್ಷಗಳ ಅವಧಿಗೆ ಕರಾರು ಮಾಡಿಕೊಂಡಿರುತ್ತಾರೆ. ಕರಾರಿನಲ್ಲಿ ವಿಧಿಸಿರುವ ಷರತ್ತುಗಳಲ್ಲಿ ಒಂದಾದ ಶೇಕಡ 15 ರಂತೆ 3 ವರ್ಷಕ್ಕೊಮ್ಮೆ ಬಾಡಿಗೆ ಹೆಚ್ಚಳ ಮಾಡಿಕೊಳ್ಳಲು ಅವಕಾಶ ಮಾಡಿಕೊಂಡಿರುತ್ತಾರೆ.

11) **ನಿವೇಶನ ಮುಂಗಡ ಅಮಾನತ್ತು ಖಾತೆ: ರೂ. 2,51,000/–**

ಹಿಂದಿನ ವರದಿಗಳಲ್ಲಿ ವಿವರಿಸಿರುವಂತೆ ಈ ಕೆಳಕಂಡ ಸದಸ್ಯರು ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದು, ಪ್ರಾರಂಭಿಕ ಠೇವಣಿಯನ್ನು ಪಾವತಿಸಿದ್ದು, ನಂತರ ನಿಗದಿತ ಸಮಯದಲ್ಲಿ ಕಂತುಗಳನ್ನು ಹಾಗೂ ಪೂರ್ಣ ಮೊತ್ತವನ್ನು ಪಾವತಿ ಮಾಡದೆ ಇರುವ ಬಾಬ್ತುಗಳನ್ನು ನಿವೇಶನ ಅಮಾನತ್ತು ಖಾತೆಗೆ ವರ್ಗಾಯಿಸಲಾಗಿದೆ.

1	ಶ್ರೀಮತಿ ಅಂಬುಜಾ	2,01,000
2	ಶ್ರೀಮತಿ ಸುನಿತಾರಾವ್	50,000
	ಒಟ್ಟು ರೂ.	**2,51,000**

ಸಂಸ್ಥೆಯು ಸದರಿಯವರಿಗೆ ಚೆಕ್ ಮುಖಾಂತರ ಮುಂಗಡವನ್ನು ವಾಪಸ್ ಮಾಡಿದ್ದು ನಿವೇಶನದಾರರ ಚೆಕ್‌ಗಳನ್ನು ಸ್ವೀಕೃತ ಮಾಡಿಕೊಂಡಿರುವುದಿಲ್ಲವೆಂದು ಲೆಕ್ಕಪರಿಶೋಧನಾ ವೇಳೆಯಲ್ಲಿ ಸಂಸ್ಥೆಯ ಸಿಬ್ಬಂದಿ ಸಮಜಾಯಿಷಿ ನೀಡಿರುತ್ತಾರೆ.

12) **ಸಹಕಾರ ಸಪ್ತಾಹ ವಂತಿಗೆ : ರೂ. 19,102–24**

ಸಾಲು ಪ್ರಾರಂಭಕ್ಕೆ ಸಹಕಾರ ಸಪ್ತಾಹ ವಂತಿಕೆ ಶಿರೋನಾಮದಡಿ ರೂ. 50,000/– ಗಳಿದ್ದು, ವರದಿ ಸಾಲಿನಲ್ಲಿ ಮತ್ತೆ ರೂ. 95,000/– ಗಳು ಜಮಾ ಬಂದಿರುತ್ತದೆ. ಈ ಒಟ್ಟು ಮೊಬಲಗಿನ ಪೈಕಿ ವರದಿ ಸಾಲಿನಲ್ಲಿ ರೂ. 1,25,897–76 ಗಳು ವೆಚ್ಚವಾಗಿದ್ದು, ಉಳಿದ ರೂ. 19,102–24 ಗಳು ದಿನಾಂಕ: 31–03–2020ಕ್ಕೆ ಜವಾಬ್ದಾರಿ ಕಡೆ ಮುಂದುವರೆದಿರುತ್ತದೆ.

13) **ಬಿಡ್ ಡಿಪಾಜಿಟ್: ರೂ. 42,32000/–**

ಹಿಂದಿನ ಸಾಲುಗಳಲ್ಲಿ ವಿವರಿಸಿರುವಂತೆ ಈ ಕೆಳಕಂಡ ವಿವರದಂತೆ 2 ಪ್ರಕರಣಗಳಿಂದ ರೂ. 42,32,000/–ಗಳ ಬಿಡ್ ಡಿಪಾಜಿಟ್‌ನ

MENEZES & ASSOCIATES BANGALORE-94 CHARTERED ACCOUNTANTS

	ಶಿರೊನಾಮದಡಿಯಲ್ಲಿ ಮುಂದುವರೆದಿರುತ್ತದೆ.
	ಹಿಂದಿನ ಸಾಲುಗಳ ಬಾಬ್ತು: ಹಿಂದಿನ ಸಾಲುಗಳಲ್ಲಿ ಕೆಲ ಸದಸ್ಯರು ಮಹಾಮಂಡಲದಲ್ಲಿ ಸಾಲ ಪಡೆದು ಸುಸ್ತಿಯಾಗಿರುವ ಪ್ರಕರಣಗಳಲ್ಲಿ ಅಡಮಾನ ಮಾಡಿದ ಆಸ್ತಿಯನ್ನು ಹರಾಜು ಹಾಕುವ ಸಂದರ್ಭದಲ್ಲಿ ಆಸ್ತಿ ಖರೀದಿ ಆಸಕ್ತರಿಂದ ಸಂಸ್ಥೆ ಪಡೆದ ಬಿಡ್ ಡಿಪಾಜಿಟ್ ಈ ರೀತಿ ಇರುತ್ತದೆ.
	1 ಶ್ರೀ ಸೂರಜ್ ತಿವಾರಿ 21,27,000 2 ಶ್ರೀ ಬಿ.ಎಸ್.ರಾಮಸ್ವಾಮಿ 21,05,000 ಒಟ್ಟು ರೂ. **42,32,000**
	ಸಂಸ್ಥೆಯು ನೇರ ಸದಸ್ಯರಾಗಿದ್ದ ಶ್ರೀ ಮನೋಜ್ ಕುಮಾರ್ ರವರು ನಿವೇಶನ ಖರೀದಿಗಾಗಿ ಸಂಸ್ಥೆಯಲ್ಲಿ 2004 ಡಿಸೆಂಬರ್‌ನಲ್ಲಿ ಸಾಲ ಪಡೆದು ಸುಸ್ತಿಯಾಗಿದ್ದು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ ನ್ಯಾಯಾಲಯ, ಮಲ್ಲೇಶ್ವರಂ, ಬೆಂಗಳೂರಿನಲ್ಲಿ ದಾವಾ ದಾಖಲಿಸಿದ್ದು, ಸದರಿ ಆಸ್ತಿಯನ್ನು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಲು ಡಿಕ್ರಿ ಆದೇಶವಾಗಿರುತ್ತದೆ. ತದನಂತರ 2013ನೇ ಸೆಪ್ಟೆಂಬರ್‌ನಲ್ಲಿ ಹರಾಜು ನಿಗದಿಪಡಿಸಿದ್ದು, ಹರಾಜಿನಲ್ಲಿ ರೂ. 21,27,000/– ಗಳಿಗೆ ಆಸ್ತಿಯನ್ನು ತಮ್ಮ ಹೆಸರಿಗೆ ನಿಲ್ಲಿಸಿಕೊಂಡಿದ್ದು, ಈ ಮಧ್ಯೆ ಶ್ರೀ ಜಿ.ಆರ್. ಮೋಹನ್ ಎಂಬುವವರು ಈ ನಿವೇಶನದ ಬಗ್ಗೆ 2011ನೇ ರಿಂದಲೇ ಉಚ್ಚ ನ್ಯಾಯಾಲಯದಲ್ಲಿ ದಾವಾ ದಾಖಲಿಸಿರುತ್ತಾರೆ. ಆ ಸಮಯದಲ್ಲಿ ಸಂಸ್ಥೆಯು ಇದನ್ನು ಗಮನಿಸಿರುವುದು ಕಂಡು ಬರುತ್ತದೆ. ಲೆಕ್ಕಪರಿಶೋಧನಾ ವೇಳೆಯಲ್ಲಿ ತಿಳಿದುಬಂದ ಮಾಹಿತಿಯಂತೆ ಪ್ರಕರಣ ಟೆಂಡರ್‌ದಾರರ ಪರವಾಗಿ ಆಗಿರುತ್ತದೆ. ಮೇಲ್ಕಂಡ ರೀತಿಯಲ್ಲೇ ಶ್ರೀಮತಿ ಆರ್.ಪುಷ್ಪಲತಾ ಎಂಬ ಸದಸ್ಯರು ಮೇಲ್ಕಂಡ ಸರ್ವೆ ಸಂಖ್ಯೆಯಲ್ಲಿಯೇ ಅದೇ ರೀತಿ ವಿವಾದಕ್ಕೆ ಒಳಗಾಗಿದ್ದು, ಸದರಿ ಪ್ರಕರಣ ಸಹ 2019–20ನೇ ಸಾಲಿನಲ್ಲಿ ಬಿಡ್‌ದಾರರ ಪರವಾಗಿಯೇ ಆಗಿರುತ್ತದೆ. ಬಿಡ್ ಮೊತ್ತ ರೂ. 21,05,000/–ಗಳು ಇರುತ್ತದೆ. ಮೇಲ್ಕಂಡ ಎರಡು ಪ್ರಕರಣಗಳಿಂದ ಹೂಡಿರುವ ಮೊತ್ತ ರೂ. 42,32,000/– ಗಳನ್ನು ಸೂಕ್ತ ಜಮಾ ಖರ್ಚಿನೊಂದಿಗೆ ಚುಕ್ತಾಪಡಿಸಿಕೊಳ್ಳಲು ಕ್ರಮ ಅಗತ್ಯ.
14)	**ಅಮಾನತ್ತು ಖಾತೆ (ಸಾಮಾನ್ಯ): ರೂ. 78,585/–** ದಿನಾಂಕ: 31–3–2020 ಸಂಸ್ಥೆಯಲ್ಲಿ ಈ ಕೆಳಗಿನ ವಿವರಣೆಯಂತೆ ರೂ. 78,585/–ಗಳ ಸಾಮಾನ್ಯ ಅಮಾನತ್ತು ಬಾಬ್ತು ಹಿಂದಿನಿಂದಲೂ ಜವಾಬ್ದಾರಿಯಲ್ಲಿ ಮುಂದುವರೆದಿರುತ್ತದೆ. ಹಿಂದಿನ ವರದಿಗಳಂತೆ, ಸಂಸ್ಥೆಯ ಮಾಜಿ ಉದ್ಯೋಗಿ ಶ್ರೀ ಕೆ.ವೈ.ತಟ್ಟಿಮನಿಯವರು ಕರ್ತವ್ಯದಲ್ಲಿದ್ದಾಗ ಲೋಪ ಎಸಗಿದ್ದಾರೆ ಎಂಬ ಆರೋಪದಿಂದಾಗಿ ಸೇವಾ ಸವಲತ್ತುಗಳನ್ನು ತಡೆಹಿಡಿಯಲಾಗಿರುವ ರೂ 78,585/– ಗಳ ಬಾಬ್ತು ದಿನಾಂಕ:31–3–2020ರವರೆಗೂ ಮುಂದುವರೆದಿದ್ದು, ಸಮಾಪನಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದ, ಹಿರಿಯೂರು ಟೌನ್ ಗೃಹ ನಿರ್ಮಾಣ ಸಹಕಾರ ಸಂಘದ ಲೆಕ್ಕಪರಿಶೋಧನೆಯಾಗಿದ್ದು, ಅವರು ಕಾರ್ಯ ನಿರ್ವಹಿಸಿದ ಅವಧಿಯಲ್ಲಿ ರೂ.48,562/–ಗಳ ಹಣ ದುರುಪಯೋಗವಾಗಿರುವುದಾಗಿ ತಿಳಿಸಿ ಸದರಿ ಮೊಬಲಗನ್ನು ಸದರಿಯವರಿಂದ ವಸೂಲಿ ಮಾಡಲು ಲೆಕ್ಕಪರಿಶೋಧಕರು ವರದಿ ನೀಡಿರುತ್ತಾರೆ. ವರದಿಯಂತೆ 31–3–2010ರಿಂದ 31–1–2020ರವರೆಗೆ ಬಡ್ಡಿಯೊಂದಿಗೆ ಕಡಿತಗೊಳಿಸಿ ರೂ. 27,454/– ಗಳನ್ನು ಚೆಕ್ ಮೂಲಕ ಪಾವತಿಸಿ ಉಳಿಕೆ ಮೊಬಲಗು ರೂ. 51,131/– ಗಳನ್ನು ಸಂಘಕ್ಕೆ ಹಿಂದಿರುಗಿಸಲು ಕ್ರಮವಿರಿಸಲಾಗುತ್ತಿದೆ.
15)	**ವ್ಯವಸ್ಥಾಪಕ ನಿರ್ದೇಶಕರ ವೇತನ ಕಡಿತ ಬಾಬ್ತು:** ಕಾರ್ಯ ನಿರ್ವಹಣಾಧಿಕಾರಿಗಳ ವೇತನದಲ್ಲಿ ಕಟಾಯಿಸಲಾಗಿದೆ ಎನ್ನಲಾದ ರೂ. 720/– ಗಳು ಜಿ.ಐ.ಎಸ್. ಬಾಬ್ತು ಹಿಂದಿನಿಂದಲೂ ಮುಂದುವರೆದಿದ್ದು, ವರ್ಷಾಂತ್ಯಕ್ಕೆ ಸಂಬಂಧಪಟ್ಟ ಶೀರ್ಷಿಕೆಯಲ್ಲಿ ಪಾವತಿಯಾಗದ ಪ್ರಯುಕ್ತ

MENEZES & ASSOCIATES BANGALORE-94 CHARTERED ACCOUNTANTS

	ವರ್ಷಾಂತ್ಯಕ್ಕೆ ಜವಾಬ್ದಾರಿ ಕಡೆ ಮುಂದುವರೆಸಲಾಗಿದೆ. ಅನಗತ್ಯವಾದ ಜವಾಬ್ದಾರಿಗಳನ್ನು ಚುಕ್ತಾ ಮಾಡಿಕೊಳ್ಳಲು ಕ್ರಮ ಅಗತ್ಯವಾಗಿರುತ್ತದೆ.
16)	**ಸಿಬ್ಬಂದಿ ನಗದು ಭದ್ರತಾ ಠೇವಣಿ: ರೂ. 5,07,598/–** ದಿನಾಂಕ: 31–3–2020ಕ್ಕೆ ಸಂಘದ ಸಿಬ್ಬಂದಿಯಿಂದ ನಗದು ಭದ್ರತೆ ರೂಪದಲ್ಲಿ ಪಡೆದ ರೂ. 5,07,598/– ಗಳು ಸಂಸ್ಥೆಯ ವ್ಯವಹಾರದಲ್ಲಿ ಮುಂದುವರೆದಿರುತ್ತದೆ. ಸೇವಾ ನಿಯಮ 83 ರಂತೆ ಸಂಸ್ಥೆಯ ಸಿಬ್ಬಂದಿಯಿಂದ ನಗದು ಭದ್ರತೆ ಹಾಗೂ ನಂಬಿಕೆ ಖಾತ್ರಿ ಪಡೆಯಬೇಕಾಗಿದ್ದು, ಇದು ಹಿಂದಿನ ಸಾಲಿನಲ್ಲಿ ಪ್ರತಿಯೊಂದು ಸಿಬ್ಬಂದಿಯಿಂದ ಸೇವಾ ನಿಯಮದಲ್ಲಿ ಸೂಚಿಸಿರುವ ಮೊಬಲಗುಗಳನ್ನು ಸಿಬ್ಬಂದಿ ಖಾತರಿ ಠೇವಣಿಯಾಗಿ ಪಡೆದಿರುತ್ತಾರೆ. ಸೇವಾ ನಿಯಮಗಳಂತೆ ವಿವಿಧ ಸಿಬ್ಬಂದಿಗಳಿಗೆ ವಿವಿಧ ನಂಬಿಕೆ ಖಾತರಿ ಮೊಬಲಗನ್ನು ಪಡೆಯುವ ಕ್ರಮವಿಡುವುದು.
	ಅವಕಾಶಗಳು : ದಿನಾಂಕ: 31–3–2020ಕ್ಕೆ ಸಂಸ್ಥೆಯು ಈ ಕೆಳಕಂಡ ವಿವಿಧ ಬಾಬ್ತುಗಳಿಗೆ ರೂ. 5,80,24,105–99 ಗಳನ್ನು ಕಾದಿರಿಸಿಕೊಂಡಿರುತ್ತದೆ.
i)	**ಜೀವ ವಿಮಾ ಸಂಸ್ಥೆ ಸಾಲದ ಮೇಲೆ ಪಾವತಿಸಲು ಬಾಕಿ ಇರುವ ಬಡ್ಡಿ : ರೂ. 15,91,644–00** ಜೀವ ವಿಮಾ ಸಾಲದ ಮೇಲೆ ಜನವರಿ 2020ರ ಅಂತ್ಯದವರೆಗೆ ಬಡ್ಡಿ ಪಾವತಿಸಲಾಗಿದೆ, ಫೆಬ್ರವರಿ ಮತ್ತು ಮಾರ್ಚಿ 2020ರ ಮಾಹೆಗಳಿಗೆ (60 ದಿನಗಳಿಗೆ ಸಂಬಂಧಿಸಿದಂತೆ) ಪಾವತಿಸಬೇಕಾದ ಬಡ್ಡಿ ರೂ. 15,91,644/– ಗಳನ್ನು ಕಾದಿರಿಸಲಾಗಿದೆ. ವರ್ಷಾಂತ್ಯಕ್ಕೆ ಪಾವತಿಸಬೇಕಾಗಿರುವ ಈ ಬಾಬ್ತಿಗೆ ಸೂಕ್ತವಾಗಿ ಲೆಕ್ಕಾಚಾರ ಹಾಕಿ ಅವಕಾಶ ಕಲ್ಪಿಸಿಕೊಳ್ಳಲಾಗಿರುತ್ತದೆ. ಈ ಬಾಬ್ತು 04 ಪ್ರಕರಣಗಳಿಂದ ಕೂಡಿದ ಬಾಬ್ತು ಆಗಿರುತ್ತದೆ. ಸದರಿ ಬಾಬ್ತಿಗೆ ಪ್ರತ್ಯೇಕ ಪಟ್ಟಿ ತಯಾರಿಸಿದ್ದು, ವರದಿಗೆ ಲಗತ್ತಿಸಿದೆ.
ii)	**ನಿರ್ದೇಶಕರುಗಳಿಗೆ ನೆನಪಿನ ಕಾಣಿಕೆ ಬಾಬ್ತು ಕಾದಿರಿಸಿದ್ದು: ರೂ. 2,50,000/–** ಸರ್ಕಾರದ ಆದೇಶ ಸಂಖ್ಯೆ: ಸಿಒ 201 ಸಿಎಲ್‌ಎಂ 2010 ದಿನಾಂಕ: 13–1–2011ರಲ್ಲಿ ಶೃಂಗ ಮಟ್ಟದ ಸಹಕಾರ ಸಂಸ್ಥೆಗಳ ಪ್ರತಿ ಆಡಳಿತ ಮಂಡಳಿ ಸದಸ್ಯರಿಗೆ ನೆನಪಿನ ಕಾಣಿಕೆ ನೀಡುವ ಮೌಲ್ಯವನ್ನು 25 ನಿರ್ದೇಶಕರುಗಳಿಗೆ ತಲಾ ರೂ. 10,000/– ಗಳಂತೆ ನಿಗದಿಪಡಿಸಿಕೊಂಡಿದ್ದು, ಸದರಿ ಅವಕಾಶದಂತೆ 2019–20ನೇ ಸಾಲಿಗೆ ರೂ. 2,50,000/– ಗಳನ್ನು ಕಾದಿರಿಸಿಕೊಳ್ಳಲಾಗಿದೆ. ಈ ಬಾಬ್ತು ಹಿಂದಿನ ಸಾಲುಗಳಿಂದ ಯಥಾವತ್ತಾಗಿ ಮುಂದುವರೆದಿರುತ್ತದೆ.
iii)	**ಕಂಟಿನ್‌ಜೆಂಟ್ ಲಿಯಬಲಿಟಿ ಕಾದಿರಿಸಿದ್ದು : ರೂ. 4,41,46,314/–** ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರವಾಗಿ ತಿಳಿಸಿರುವಂತೆ 2007–08, 2008–09, 2010–11 ಮತ್ತು 2011–12ನೇ ಸಾಲುಗಳಿಗೆ ಸಂಬಂಧಿಸಿದಂತೆ ಕಡತಗಳನ್ನು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಸಂಸ್ಥೆಯ ಲೆಕ್ಕಪತ್ರಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸಿದ್ದು, ಆದಾಯ ತೆರಿಗೆ ಸೆಕ್ಷನ್ 80ಪಿ(2)(ಆ)(i) ರೀತ್ಯಾ ವಿನಾಯ್ತಿ ಲಭ್ಯವಿಲ್ಲವೆಂದು ತಿಳಿಸಿ ರೂ. 95,41,690/– ಗಳ ಆದಾಯ ತೆರಿಗೆಯನ್ನು 30 ದಿನಗಳೊಳಗಾಗಿ ಪಾವತಿಸಲು ನೋಟೀಸ್ ನೀಡಿರುತ್ತಾರೆ. ನಂತರ ವಿವಿಧ ಕಾರಣಗಳಿಂದಾಗಿ ಪ್ರಕರಣ ಮತ್ತಷ್ಟು ಜಟಿಲವಾಗಿ ದಿನಾಂಕ: 30–06–2015 ರಂದು ಸಂಸ್ಥೆಯು ಸಲ್ಲಿಸಿದ ಮೇಲ್ಮನವಿ ಮಹಾಮಂಡಲದ ಪರವಾಗಿ ತೀರ್ಪಾಗಿದ್ದು, ಅದೇ ಸಾಲಿನಲ್ಲಿ ಆದಾಯ ತೆರಿಗೆ ಇಲಾಖೆಯವರಿಂದ ಸಂಸ್ಥೆಯವರಿಗೆ ರೂ. 1,09,03,686/– ಗಳು ಮರು ಪಾವತಿಯಾಗಿರುತ್ತದೆ. ತದಾನಂತರ 2017–18ನೇ ಸಹಕಾರಿ ವರ್ಷದಲ್ಲಿ 2014–15ನೇ ಸಾಲಿಗೆ ಸಂಬಂಧಿಸಿದಂತೆ ರೂ. 1,49,57,420/– ಗಳನ್ನು ಪಾವತಿ ಮಾಡಲು ತಗಾದೆ ಕಳುಹಿಸಿರುತ್ತಾರೆ. ಮೇಲ್ಕಂಡ ತೀರ್ಪಿನ ವಿರುದ್ಧ ಸಂಘವು ನ್ಯಾಯಾಲದಲ್ಲಿ ಪ್ರಕರಣ

MENEZES & ASSOCIATES BANGALORE-94 REGISTERED ACCOUNTANTS

	ದಾಖಲಿಸಿದ್ದು, ಪ್ರಕರಣ ವಿಚಾರಣಾ ಹಂತದಲ್ಲಿರುತ್ತದೆ. ಆದಾಯ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ಪಾವತಿಸಬೇಕಾದ ಮೊಬಲಗಿನ ಬಗ್ಗೆ ಸ್ಪಷ್ಟ ಚಿತ್ರಣ ಇಲ್ಲದೆ ಇರುವುದರಿಂದ ಯಾವುದೇ ಸಂದರ್ಭ ಎದುರಿಸಲು ರೂ. 4,41,46,314/– ಗಳನ್ನು ಕಂಟಿನ್‌ಜೆಂಟ್ ಲಿಯಬಲಿಟಿ ಶಿರೋನಾಮದಡಿ ದಿನಾಂಕ: 31–03–2020ಕ್ಕೆ ಮುಂದುವರೆದಿರುತ್ತದೆ.
iv)	**ಸಿಬ್ಬಂದಿ ಬೋನಸ್/ಎಕ್ಸ್‌ಗ್ರೇಷಿಯಾ : ರೂ. 6,08,890/–** ಸಿಬ್ಬಂದಿ ಎಕ್ಸ್‌ಗ್ರೇಷಿಯಾ ಬಾಬ್ತು ದಿನಾಂಕ: 31–3–2020ಕ್ಕೆ ಮಹಾಮಂಡಲದಲ್ಲಿ ಸಿಬ್ಬಂದಿ ಬೋನಸ್/ ಎಕ್ಸ್‌ಗ್ರೇಷಿಯಾ ಪಾವತಿಸಲು ರೂ. 6,08,890/– ಗಳನ್ನು ಕಾದಿರಿಸಿಕೊಂಡಿದ್ದು ಸದರಿ ಬಾಬ್ತು ಹಿಂದಿನ ಸಾಲುಗಳಿಂದ ಯಾವುದೇ ಬದಲಾವಣೆ ಇಲ್ಲದೆ ಮುಂದುವರೆದಿರುತ್ತದೆ. ಒಂದು ವೇಳೆ ಸದರಿ ಬಾಬ್ತು ನೈಜ ಜವಾಬ್ದಾರಿ ಅಲ್ಲದಿದ್ದರೆ ಅದನ್ನು ಸರ್ವ ಸದಸ್ಯರ ಒಪ್ಪಿಗೆ ಮೇರೆಗೆ ಆಪದ್ಧನಕ್ಕೆ ವರ್ಗಾಯಿಸಿಕೊಳ್ಳತಕ್ಕದ್ದು.
v)	**ಲೆಕ್ಕಪರಿಶೋಧನಾ ಶುಲ್ಕ ಕಾದಿರಿಸಿದ್ದು : ರೂ. 7,00,000/–** ದಿನಾಂಕ: 31–3–2020ರ ಅಂತ್ಯಕ್ಕೆ 2019–20ನೇ ಸಾಲಿನ ಲೆಕ್ಕಪರಿಶೋಧನಾ ಶುಲ್ಕವಾಗಿ ರೂ. 7.00 ಲಕ್ಷಗಳನ್ನು ಕಾದಿರಿಸಿಕೊಳ್ಳಲಾಗಿದೆ. ಸದರಿ ಬಾಬ್ತನ್ನು ಲೆಕ್ಕಪರಿಶೋಧನಾ ವರದಿ ಬಿಡುಗಡೆಗೊಂಡ ನಂತರ ಸನ್ನದು ಲೆಕ್ಕಪರಿಶೋಧಕರಿಗೆ ಪಾವತಿಸಿ ಈ ಲೆಕ್ಕವನ್ನು ಖೈದು ಮಾಡಿಕೊಳ್ಳತಕ್ಕದ್ದು.
vi)	**ಠೇವಣಾತಿಗಳ ಮೇಲೆ ಬಡ್ಡಿ: ರೂ. 65,60,172–44** ದಿನಾಂಕ: 31–03–2020ಕ್ಕೆ ಮಹಾಮಂಡಲವು ಸಂಗ್ರಹಿಸಿರುವ ಠೇವಣಿಗಳ ಮೇಲೆ ರೂ 65,60,172–44 ಗಳನ್ನು ಹೆಚ್ಚುವರಿ ಬಡ್ಡಿಗಾಗಿ ಕಾದಿರಿಸಿಕೊಂಡಿರುತ್ತದೆ.
vii)	**ಬ್ಯಾಂಕ್ ಖಾತೆಗಳ ಕರಡು ನಿಧಿ ಖಾತೆ: ರೂ. 1,77,085–55** ಸಂಸ್ಥೆಯು ಹಿಂದಿನ ಸಾಲುಗಳಲ್ಲಿ ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಚಾಲ್ತಿ ಖಾತೆಯಲ್ಲಿ ಹಣ ತೊಡಗಿಸಿದ್ದು, ಸದರಿ ಬ್ಯಾಂಕಿನ ಆರ್ಥಿಕ ಪರಿಸ್ಥಿತಿ ಸರಿ ಇಲ್ಲದೇ ಇರುವುದರಿಂದ ಈ ಬ್ಯಾಂಕಿನಿಂದ ಬರಬೇಕಾಗಿರುವ ರೂ. 1,77,085–55 ಗಳಿಗೆ ಹಿಂದಿನ ಸಾಲುಗಳಲ್ಲೇ ಲಾಭ–ನಷ್ಟ ತಃಖ್ತೆಗೆ ವರ್ಗಾಯಿಸಿ ಅಷ್ಟೆ ಮೊಬಲಗನ್ನು ಕಾಯ್ದಿರಿಸಲಾಗಿದೆ. ಮೇಲ್ಕಂಡ ಮೊಬಲಗು ಸಂಸ್ಥೆಗೆ ಬಂದ ನಂತರ ಈ ಬಾಬ್ತನ್ನು ಆದಾಯ ಖಾತೆಗೆ ವರ್ಗಾಯಿಸತಕ್ಕದ್ದು.
	ಮೇಲ್ಕಂಡ ಬಾಬ್ತುಗಳು ಹಿಂದಿನ ಸಾಲುಗಳಿಂದ ಯಾವುದೇ ಬದಲಾವಣೆಯಿಲ್ಲದೆ ಮುಂದುವರೆದಿರುತ್ತದೆ. ಸದರಿ ಸಂಸ್ಥೆಗಳೊಂದಿಗೆ ಸತತವಾಗಿ ಸಂಪರ್ಕ ಇಟ್ಟುಕೊಂಡು ಈ ಬಾಬ್ತುಗಳನ್ನು ಜಮಾ ಹಿಡಿಯುವ ಕ್ರಮ ಅಗತ್ಯವಾಗಿರುತ್ತದೆ. ಈ ಮೊಬಲಗುಗಳು ಸಂಸ್ಥೆಗೆ ಜಮಾ ಬಂದ ನಂತರ ಸದರಿ ಬಾಬ್ತನ್ನು ಲಾಭ ನಷ್ಟದ ಖಾತೆಗೆ ವರ್ಗಾಯಿಸುವುದು.
i)	**ಸದಸ್ಯರ ನಿವೇಶನ ಮತ್ತು ಫ್ಲಾಟ್ ಮುಂಗಡ: ರೂ. 204,54,00,553–61** **ನಿವೇಶನ ಮುಂಗಡ (1ನೇ ಯೋಜನೆ): ರೂ. 164,69,37,347–13**
	ಉಪ ನಿಯಮ 5(I)(ಅ) ಪ್ರಕಾರ ಮಹಾಮಂಡಲವು ತನ್ನ ಸ್ವಂತ ಬಂಡವಾಳದಿಂದ ಅಥವಾ ಹೊರಗಡೆಯಿಂದ ತಂದ ಸಾಲದಿಂದ ವಸತಿ ಯೋಜನೆಗೆ ಜಮೀನನ್ನು ಖರೀದಿಸಲು ಮತ್ತು ಅಭಿವೃದ್ಧಿಪಡಿಸಲು ಮತ್ತು ಬಡಾವಣೆಯಲ್ಲಿ ನಿವೇಶನಗಳನ್ನು ವಿಂಗಡಣೆ ಮಾಡಲು, ಫ್ಲಾಟ್‌ಗಳನ್ನು ಕಟ್ಟಲು, ನಿವೇಶನಗಳನ್ನು ಮತ್ತು ಫ್ಲಾಟ್‌ಗಳನ್ನು ಹೊಂದಲು ಮತ್ತು ನಾಮಮಾತ್ರ ಸದಸ್ಯತ್ವ ನೀಡಿ ಬಿಡಿ ವ್ಯಕ್ತಿಗಳಿಗೆ ನಿವೇಶನಗಳನ್ನು ಮತ್ತು ಫ್ಲಾಟ್‌ಗಳನ್ನು ಹಂಚಲು ಕಾರ್ಯಭಾರಿ ಆಗಿ ವರ್ತಿಸಲು ಅವಕಾಶವಿರುತ್ತದೆ. ಉಪನಿಯಮದ ಅವಕಾಶದಂತೆ, ನಿವೇಶನ ಬಡಾವಣೆ ಅಭಿವೃದ್ಧಿ ಯೋಜನೆಯನ್ನು ಕೈಗೊಂಡಿದ್ದು, ಯೋಜನೆಯ ಪ್ರಗತಿ ಮತ್ತು ಗಮನಿಸಿದ ಅಂಶಗಳ ಬಗ್ಗೆ ಹಿಂದಿನ ಸಾಲುಗಳ ವರದಿಗಳಲ್ಲಿ ವಿವರಿಸಲಾಗಿದೆ. ಮುಂದುವರೆದಂತೆ ದಿನಾಂಕ: 16–1–2009ರ ಆಡಳಿತ ಮಂಡಳಿ ಸಭೆಯಲ್ಲಿ ಸದಸ್ಯರಿಗೆ ಚದರಡಿಯೊಂದಕ್ಕೆ 20X30

MENEZES & ASSOCIATES
BANGALORE-94
CHARTERED ACCOUNTANTS

ಅಡಿಗಳ ಅಳತೆಯ ನಿವೇಶನಕ್ಕೆ ರೂ.340/–, 30X50 ಅಡಿಗಳ ಅಳತೆಯ ನಿವೇಶನಕ್ಕೆ ರೂ. 375/– ಹಾಗೂ 40X60 ಅಡಿಗಳ ಅಳತೆಯ ನಿವೇಶನಕ್ಕೆ ರೂ.385/– ನಿಗದಿಗೊಳಿಸಲು ಹಾಗೂ ಅಭಿವೃದ್ಧಿದಾರರಿಗೆ 20X30 ಅಳತೆಯ ನಿವೇಶನಕ್ಕೆ ರೂ. 340/– ಹಾಗೂ 30X50 ಮತ್ತು 40X60 ಅಳತೆಯ ನಿವೇಶನಕ್ಕೆ ರೂ.355/–ಪಾವತಿಸಲು ನಿರ್ಣಯಿಸಲಾಗಿತ್ತು, ಹಾಗೂ ದಿನಾಂಕ: 8–11–2010ರಂದು ಬಡಾವಣೆ ಅಭಿವೃದ್ಧಿದಾರರು ಸಂಸ್ಥೆಗೆ ಪತ್ರ ನೀಡಿ, ಸಂಸ್ಥೆಯು 217 ಹೆಚ್ಚುವರಿ ನಿವೇಶನಗಳಿಗೆ ಬೇಡಿಕೆ ಸಲ್ಲಿಸಿರುವುದರಿಂದ, ಇತ್ತೀಚೆಗೆ ಜಮೀನಿನ ಬೆಲೆಗಳು ತುಂಬಾ ದುಬಾರಿಯಾಗಿರುವುದರಿಂದ ಹಾಗೂ ಬಡಾವಣೆ ನಿರ್ಮಾಣ ವೆಚ್ಚಗಳು ಹೆಚ್ಚಾಗಿರುವುದರಿಂದ, ಚದರಡಿಯೊಂದಕ್ಕೆ ರೂ. 50/– ಗಳ ಹೆಚ್ಚುವರಿ ದರ ನೀಡಲು ಕೋರಿಕೆ ಸಲ್ಲಿಸಿದ್ದು, ಈ ಬಗ್ಗೆ ದಿನಾಂಕ: 17–11–2010ರ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಸದಸ್ಯರಿಗೆ ನೀಡುವ ನಿವೇಶನ ಬೆಲೆಯಲ್ಲಿ ಯಾವುದೇ ಹೆಚ್ಚಳ ಮಾಡದೆ ಸಂಸ್ಥೆಯ ಲಾಭಾಂಶದಲ್ಲಿ ಕಡಿಮೆ ಮಾಡಿ 30X50ಅಡಿ ಅಳತೆಯ ನಿವೇಶನಕ್ಕೆ ಚದರಡಿ ಯೊಂದಕ್ಕೆ ರೂ. 5/– ಗಳು ಹೆಚ್ಚಿಗೆ ಹಾಗೂ 40X60 ಅಡಿ ಅಳತೆಯ ನಿವೇಶನಕ್ಕೆ ಚದರಡಿಯೊಂದಕ್ಕೆ ರೂ. 370/– (ರೂ. 15/– ಹಚ್ಚಿಗೆ)ನ್ನು ಅಭಿವೃದ್ಧಿದಾರರಿಗೆ ನೀಡಲು ನಿರ್ಣಯಿಸಲಾಗಿತ್ತು. ಇದರಿಂದಾಗಿ 30X50 ಅಡಿ ಅಳತೆಯ ನಿವೇಶನದಲ್ಲಿ ಸಂಸ್ಥೆಗೆ ಪ್ರಾಪ್ತವಾಗುತ್ತಿದ್ದ ಲಾಭ ಚದರಡಿಯೊಂದಕ್ಕೆ ರೂ. 20/– ಗಳ ಬದಲು ರೂ. 15/– ಹಾಗೂ 40X60 ಅಡಿ ಅಳತೆಯ ನಿವೇಶನದಲ್ಲಿ ಚದರಡಿಯೊಂದಕ್ಕೆ ರೂ. 30/– ಗಳಿಗೆ ಬದಲು ರೂ. 15/– ಲಾಭ ಪ್ರಾಪ್ತವಾಗುತ್ತದೆ. ಪರಿಷ್ಕೃತ ದರದ ಬಗ್ಗೆ ದಿನಾಂಕ: 18–4–2010ರಂದು ಪರಿಷ್ಕೃತ ಕರಾರು ಮಾಡಿಕೊಳ್ಳಲಾಗಿತ್ತು.

ದಿನಾಂಕ: 2–5–2006ರ ಕರಾರಿನ ಕಂಡಿಕೆ 5(iv)ರಲ್ಲಿ ಸಂಸ್ಥೆಗೆ ಪಡೆಯಬೇಕಾದ ಮೂಲೆ ನಿವೇಶನಗಳ ಸಂಖ್ಯೆ ಮತ್ತು ಬೆಲೆಯನ್ನು ಸಂಸ್ಥೆ ಮತ್ತು ಡೆವಲಪರ್‌ರವರು ನಂತರದ ದಿನಗಳಲ್ಲಿ ಚರ್ಚಿಸಿ, ಒಪ್ಪಿದಂತೆ ನಿಗದಿಗೊಳಿಸಲು ಅವಕಾಶ ಮಾಡಿಕೊಳ್ಳಲಾಗಿದೆ. ದಿನಾಂಕ: 16–6–2009ರ ಪತ್ರದಲ್ಲಿ ಮೂಲೆ ನಿವೇಶನಗಳಿಗೆ ಚದರಡಿಯೊಂದಕ್ಕೆ ರೂ.710/– ಗಳನ್ನು ನೀಡಲು ಡೆವಲಪರ್‌ರವರು ಕೋರಿದ್ದು, ಈ ಬಗ್ಗೆ ದಿನಾಂಕ: 27–6–2009 ರಂದು ನಡೆದ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಮಧ್ಯಂತರ ನಿವೇಶನ ಬೆಲೆಯ ಒಂದೂವರೆ ಪಟ್ಟು ಅಂದರೆ 1000 ಚದರಡಿವರೆಗಿನ ಮೂಲೆ ನಿವೇಶನವನ್ನು ಚದರಡಿಯೊಂದಕ್ಕೆ ರೂ. 510/– ರಂತೆ, 1001 ರಿಂದ 2000 ಚದರಡಿಯವರೆಗಿನ ಮೂಲೆ ನಿವೇಶನವನ್ನು ಚದರಡಿಯೊಂದಕ್ಕೆ ರೂ. 562.50 ರಂತೆ, 2001 ಚದರಡಿಗೂ ಮೇಲ್ಪಟ್ಟು ಮೂಲೆ ನಿವೇಶನವನ್ನು ಚದರಡಿಯೊಂದಕ್ಕೆ ರೂ. 577.50 ರಂತೆ ಖರೀದಿಸಿ ಸದಸ್ಯರಿಗೆ ಮಾರಾಟ ಮಾಡಲು ನಿರ್ಣಯಿಸಲಾಗಿತ್ತು, ಹಾಗೂ ನಿವೇಶನ ಬೆಲೆಯ ಮೇಲೆ ಶೇ.1 ರಷ್ಟು ಮೊಬಲಗನ್ನು ಸಂಸ್ಥೆಯು ಸೇವಾ ಶುಲ್ಕವೆಂದು ಡೆವಲಪರ್‌ರವರಿಂದ ಪಡೆಯಲು ನಿರ್ಣಯಿಲಾಗಿದೆ. ಮಧ್ಯಂತರ ನಿವೇಶನಕ್ಕೆ ಹಣ ಪಾವತಿಸಿದ ಸದಸ್ಯರು ಮೂಲೆ ನಿವೇಶನ ಖರೀದಿಸಲು ಇಚ್ಛಿಸಿದಲ್ಲಿ ಅಂತಹವರಿಗೆ ಮೂಲೆ ನಿವೇಶನಕ್ಕೆ ತಗಲುವ ವ್ಯತ್ಯಾಸದ ಮೊಬಲಗನ್ನು ಪಾವತಿಸಿ, ಮೂಲೆ ನಿವೇಶನ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಹಾಗೂ ನಂತರ ಉಳಿದ ಮೂಲೆ ನಿವೇಶನಗಳನ್ನು ಹೊಸದಾಗಿ ನಿವೇಶನ ಕೋರಿ ಅರ್ಜಿ ಸಲ್ಲಿಸಿದವರಿಗೆ ಸದಸ್ಯತ್ವ ನೀಡಿ ನಿವೇಶನ ಹಂಚಿಕೆ ಮಾಡಲು ಕ್ರಮವಿಡಲಾಗಿದೆ. 2019–20ನೇ ಸಾಲಿಗೆ ಈ ಹಿಂದೆ ನಿಗದಿಪಡಿಸಿಕೊಂಡಿರುವ ವಿವಿಧ ದರಗಳೇ ತಹಲ್‌ವರೆವಿಗೂ ಚಾಲ್ತಿಯಲ್ಲಿರುತ್ತದೆ. ಸಭೆಗಳ ನಡವಳಿಕೆಗಳಂತೆ ಸದಸ್ಯರು ನಿವೇಶನಕ್ಕಾಗಿ ಭಾಗಶಃ ಪಾವತಿ ಮಾಡಿರುವಂತಹ ಪ್ರಕರಣಗಳಲ್ಲಿ ನಿಗದಿಗೊಳಿಸಿರುವ ದರಕ್ಕಿಂತ ಚದರಡಿಯೊಂದಕ್ಕೆ ರೂ. 50/– ಗಳು ಹೆಚ್ಚಿಗೆ ಪಾವತಿಸಲಾಗುತ್ತಿದೆ.

ಸದಸ್ಯರಿಂದ ಒಂದನೇ ಯೋಜನೆ ಬಾಬ್ತು ದಿನಾಂಕ: 17–6–2006ರಿಂದ ನಿವೇಶನ ಮುಂಗಡ ಸ್ವೀಕರಿಸಿದ್ದು, ದಿನಾಂಕ: 31–3–2020ಕ್ಕೆ 2459 ಸದಸ್ಯರಿಂದ ರೂ. 164,69,37,347–13 ಗಳು ಸಂಗ್ರಹಣೆಯಾಗಿದ್ದು, ವರದಿ ಸಾಲಿನಲ್ಲಿ ಈ

MENEZES & ASSOCIATES BANGALORE-94 CHARTERED ACCOUNTANTS

	ಬಾಬ್ತಿಗೆ ರೂ. 17,89,213 ಗಳು ಜಮಾ ಆಗಿದ್ದು, ಇದೇ ಅವಧಿಯಲ್ಲಿ ರೂ. 23,01,507–92 ವಾಪಸ್ಸಾಗಿರುತ್ತದೆ. ವರದಿ ಸಾಲಿನಲ್ಲಿ ಈ ಹಿಂದೆ ನಿವೇಶನ ಪಡೆಯುವುದಕ್ಕಾಗಿ ಪಾವತಿಸಿದ್ದ ಇಬ್ಬರು ಸದಸ್ಯರು ನಿವೇಶನಗಳ ಮುಂಗಡವನ್ನು ವಾಪಸ್ಸು ಪಡೆದಿರುತ್ತಾರೆ.

ದಿನಾಂಕ 31-3-2020 ಕ್ಕೆ ಇದ್ದಂತೆ ನಿವೇಶನ ಮುಂಗಡ ವಿವರ (ಒಂದನೇ ಯೋಜನೆ)

ಕಂತು	20 x 30		30 x 50		40 x 60		ಒಟ್ಟು	
	ಸದಸ್ಯರು	ಮೊಬಲಗು	ಸದಸ್ಯರು	ಮೊಬಲಗು	ಸದಸ್ಯರು	ಮೊಬಲಗು	ಸದಸ್ಯರು	ಮೊಬಲಗು
1	0	0	2	2,98,000–00	0	0	2	2,98,000–00
2	2	1,89,250–00	11	34,37,692–00	2	9,23,000–00	15	45,49,942–00
3	3	5,13,565–00	25	1,10,36,824–25	12	81,69,173–65	40	1,97,19,562–90
4	5	9,56,951–00	12	59,95,315–00	14	1,21,65,327–00	31	1,91,17,593–00
ಪೂರ್ಣ ಮೊತ್ತ ಪಾವತಿಸಿದವರು	45	98,21,919–00	168	10,47,12,235–48	43	5,11,65,588–75	256	165699743–23
ನೊಂದಣಿಯಾದ ನಿವೇಶನಗಳು	426	10,49,26,250–13	976	56,46,01,471–51	712	76,79,82,152–36	2114	143,75,09,874–00
ಸಿಬ್ಬಂದಿ ನಿವೇಶನ ಮುಂಗಡ	0	0	0	0			1	42,632–00
ಒಟ್ಟು	481	11,64,07,935–13	1194	69,00,81,538–24	783	84,04,05,241–76	2459	164,69,37,347–13

ಒಂದನೇ ಯೋಜನೆ ಬಾಬ್ತು ದಿನಾಂಕ: 31–3–2020ರ ಅಂತ್ಯಕ್ಕೆ 2459 ಜನ ಸದಸ್ಯರು ವಿವಿಧ ಅಳತೆಯ ನಿವೇಶನಗಳಿಗೆ ನಿವೇಶನ ಮುಂಗಡ ಪಾವತಿಸಿರುತ್ತಾರೆ. ಈ ಪೈಕಿ ದಿನಾಂಕ: 31–3–2020ಕ್ಕೆ ಪೂರ್ಣ ಮೊಬಲಗನ್ನು 2370 ಸದಸ್ಯರು ಮಾತ್ರ ಪಾವತಿಸಿರುತ್ತಾರೆ. ವಿವಿಧ ಅಳತೆಯ ನಿವೇಶನಗಳಿಗೆ ಸಂಬಂಧಿಸಿದಂತೆ ನಿವೇಶನ ಮುಂಗಡದ ಪ್ರತ್ಯೇಕ ಕುಳುವಾರು ತಯಾರಿಸಿರುತ್ತದೆ. ಒಂದನೇ ಯೋಜನೆ ಬಾಬ್ತು ಈವರೆಗೆ ವಿವಿಧ ಅಳತೆಯ 2459 ನಿವೇಶನಗಳನ್ನು ಹಂಚಲಾಗಿದೆ ಹಾಗೂ 2114 ಸದಸ್ಯರಿಗೆ ವಿವಿಧ ಅಳತೆಯ ನಿವೇಶನಗಳನ್ನು ನೊಂದಣಿ ಮಾಡಿಕೊಡಲಾಗಿದೆ. ವರದಿ ಸಾಲಿನಲ್ಲಿ 54 ನಿವೇಶನಗಳು ನೊಂದಣಿಯಾಗಿದ್ದು, ಈ ಪೈಕಿ 37 ಮಧ್ಯಂತರ ಹಾಗೂ 17 ಮೂಲೆ ನಿವೇಶನಗಳಾಗಿರುತ್ತವೆ.

ವರದಿ ಸಾಲಿನಲ್ಲಿ ನೊಂದಣಿಯಾದ ವಿವಿಧ ಅಳತೆಯ 54 ನಿವೇಶನಗಳ ಸಂಕ್ಷಿಪ್ತ ತಃಖ್ತೆಯನ್ನು ವರದಿಗೆ ಲಗತ್ತಿಸಿದೆ. ಮೇಲೆ ತಿಳಿಸಿದಂತೆ 37 ಮಧ್ಯಂತರ ನಿವೇಶನದ ಖರೀದಿ ಮತ್ತು ಮಾರಾಟ ದರದ ವ್ಯತ್ಯಾಸದ ಮೊಬಲಗನ್ನು ಹಾಗೂ 17 ಮೂಲೆ ನಿವೇಶನದ ಮಾರಾಟ ಬೆಲೆಯ ಮೇಲಿನ ಶೇಕಡ 1 ರಷ್ಟು ಹಾಗೂ ಮಧ್ಯಂತರ ನಿವೇಶನಕ್ಕೆ ವಿವಿಧ ದರದಲ್ಲಿ ಸೇವಾ ಶುಲ್ಕವನ್ನು ನಿಗದಿಪಡಿಸಿದ್ದು ಇದರಿಂದ ಸೇವಾ ಶುಲ್ಕವನ್ನು ಒಟ್ಟು ರೂ. 7,69,905–92 ಗಳನ್ನು ಪ್ರತ್ಯೇಕವಾದ ಶಿರೋನಾಮದಡಿ ನಿವೇಶನ ಅಭಿವೃದ್ಧಿ ಖಾತೆಯಲ್ಲಿ ತೋರಿಸಲಾಗಿದೆ. ನಿವೇಶನ ಹಂಚಿಕೆ ಸಂಬಂಧವಾಗಿ ವ್ಯವಸ್ಥಾಪಕ ನಿರ್ದೇಶಕರನ್ನು ಕೇಳಲಾಗಿ ಬಡಾವಣೆ ಅಭಿವೃದ್ಧಿದಾರರೊಂದಿಗೆ ಮಾಡಿಕೊಂಡ ಕರಾರಿನಂತೆ ಪೂರ್ಣ ಮೊತ್ತ ಪಾವತಿಸಿದ ಎಲ್ಲಾ ಸದಸ್ಯರಿಗೂ ನಿವೇಶನ ಹಂಚಿಕೆ ಮಾಡಲಾಗುವುದು ಎಂದು ತಿಳಿಸಿರುತ್ತಾರೆ. ಪೂರ್ಣ ನಿವೇಶನ ಮುಂಗಡ ಪಾವತಿಸಿದ ಎಲ್ಲಾ ಸದಸ್ಯರಿಗೂ ನಿವೇಶನ ನೀಡುವುದು ಸಂಸ್ಥೆಯ ಜವಾಬ್ದಾರಿಯಾಗಿ ರುತ್ತದೆ. 1ನೇ ಯೋಜನೆಯ ಬಾಬ್ತಿಗೆ ಸಂಬಂಧಿಸಿದಂತೆ ಕುಳುವಾರು ಪಟ್ಟಿ ತಯಾರಿಸಿದ್ದು, ತಾಳೆ ಇರುತ್ತದೆ. ಸದರಿ ಬಾಬ್ತಿನ ಸಂಕ್ಷಿಪ್ತ ಪಟ್ಟಿಯನ್ನು ವರದಿಗೆ ಲಗತ್ತಿಸಿದೆ. ಒಂದನೇ ಯೋಜನೆ ಪ್ರಾರಂಭವಾಗಿ ದಿನಾಂಕ: 31–3–2020ಕ್ಕೆ ಸುಮಾರು 14 ವರ್ಷ ಕಳೆದಿದ್ದರೂ ಈ ಯೋಜನೆ ಮುಕ್ತಾಯ ತಲುಪಿರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಕರಾರಿಗೊಳಪಟ್ಟ ಜಮೀನುಗಳಲ್ಲಿ ಕೆಲವು ಪ್ರಕರಣಳಲ್ಲಿ ಉದ್ಭವವಾದ ವಿವಾದಗಳು ತಕರಾರು, ಭೂ ಮಾಲೀಕರ ಹೆಚ್ಚಿನ ಬೇಡಿಕೆಗಳು ಹಾಗೂ ವಿವಿಧ

MENEZES & ASSOCIATES BANGALORE-94 CHARTERED ACCOUNTANTS

ನ್ಯಾಯಾಲಯಗಳಲ್ಲಿ ಹೂಡಿರುವ ದಾವೆಗಳ ವಿಚಾರಣೆ ಪೂರ್ಣಗೊಂಡಿಲ್ಲದೇ ಇರುವುದು.

ದಿನಾಂಕ: 31-3-2020ಕ್ಕೆ ವಿವಿಧ ವಿಸ್ತೀರ್ಣಗಳ ನಿವೇಶನದಾರರ ಅಕಾಂಕ್ಷಿಗಳ ಪ್ರಕರಣಗಳ ಸಂಖ್ಯೆ, ನೊಂದಣಿಯಾಗಿರುವ ಸಂಖ್ಯೆ, ನೊಂದಣಿಗೆ ಬಾಕಿ ಇರುವ ಪ್ರಕರಣಗಳ ಸಂಕ್ಷಿಪ್ತ ವಿವರಣ ಪಟ್ಟಿ ಹೀಗಿರುತ್ತದೆ.

ಕ್ರ.ಸಂ	ವಿವರ	20X30	30X50	40X60	ಒಟ್ಟು
1	ನಿವೇಶನ ಆಕಾಂಕ್ಷಿಗಳ ಪ್ರಕರಣಗಳ ಸಂಖ್ಯೆ	482	1195	784	**2459**
2	ನೋಂದಣಿಯಾದ ನಿವೇಶನಗಳ ಸಂಖ್ಯೆ	411	942	707	**2114**
3	ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ	71	253	77	**345**

ಒಂದನೇ ಯೋಜನೆಗೆ ಸಂಬಂಧಿಸಿದಂತೆ ಮೇಲ್ಕಂಡ ವಿವರದಂತೆ ವಿವಿಧ ವಿಸ್ತೀರ್ಣಗಳ ಒಟ್ಟು 345 ಪ್ರಕರಣಗಳು ಬಾಕಿ ಇದ್ದು, ಇವರುಗಳಿಗೆ ಆದಷ್ಟು ಬೇಗ ನಿವೇಶನಗಳನ್ನು ನೋಂದಾಯಿಸಿ ಒಂದನೇ ಯೋಜನೆಗೆ ತೆರೆ ಎಳೆಯಲು ಸೂಕ್ತವಾಗಿರುತ್ತದೆ.

ii) ನಿವೇಶನ ಮುಂಗಡ (2ನೇ ಯೋಜನೆ) :ರೂ. 39,62,06,788/-

ಹಿಂದಿನ ವರದಿಗಳಲ್ಲಿ ವಿವರವಾಗಿ ತಿಳಿಸಿರುವಂತೆ ದಿನಾಂಕ: 17-2-2010ರಲ್ಲಿ (ವಿಷಯ-9) ನಡೆದ ಆಡಳಿತ ಮಂಡಳಿ ಸಭೆಯಲ್ಲಿ ವಸತಿ ಮಹಾಮಂಡಲದಿಂದ ರಚಿತವಾಗಿರುವ ನಿವೇಶನಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಮಹಾಮಂಡಲವು ಅಭಿವೃದ್ಧಿ ಪಡಿಸುತ್ತಿರುವ ಒಂದನೇ ಯೋಜನೆಯ ಆಕ್ಕಪಕ್ಕದಲ್ಲಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಬಡಾವಣೆ ಅಭಿವೃದ್ಧಿಪಡಿಸುವ ಯೋಜನೆಯನ್ನು, ಮೈಸೂರು ರಸ್ತೆ, ಹೊಸೂರು ರಸ್ತೆ, ಬಳ್ಳಾರಿ ರಸ್ತೆ, ತುಮಕೂರು ರಸ್ತೆಗಳಲ್ಲಿ ಬೆಂಗಳೂರು ಮಹಾನಗರ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಔಟ್‌ಲೈನ್ ಡೆವಲಪ್‌ಮೆಂಟ್ ಪ್ಲಾನ್‌ನಲ್ಲಿ ವಸತಿ ಉದ್ದೇಶಕ್ಕೆ ಗುರುತಿಸಲಾಗಿರುವ ಪ್ರದೇಶಗಳಲ್ಲಿ ಬಡಾವಣೆ ಅಭಿವೃದ್ಧಿಪಡಿಸಿ ನಿವೇಶನಗಳನ್ನು ಹಂಚುವ ಬಗ್ಗೆ ಬಡಾವಣೆ ನಿರ್ಮಾಣ ಮಾಡುತ್ತಿರುವವರಿಂದ ವಿವರಗಳಿರುವ ಅರ್ಜಿಗಳನ್ನು ಆಹ್ವಾನಿಸಿ 2 ದಿನ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲು ಹಾಗೂ ಬಂದ ಅರ್ಜಿಗಳನ್ನು ಪರಿಶೀಲನೆ ನಡೆಸಿ ಮುಂದಿನ ಆಡಳಿತ ಮಂಡಳಿಗೆ ಮಂಡಿಸಲು ನಿರ್ಣಯಿಸಲಾಗಿದೆ. ಐದು ಬಡಾವಣೆ ಅಭಿವೃದ್ಧಿದಾರರಿಂದ ಅರ್ಜಿಗಳ ಸಲ್ಲಿಕೆಯಾಗಿದ್ದು, ಸದರಿ ಅರ್ಜಿಗಳನ್ನು ದಿನಾಂಕ: 20-5-2010ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ವಿವರವಾಗಿ ಚರ್ಚಿಸಿದ್ದು, ಅಭಿವೃದ್ಧಿದಾರರೊಂದಿಗೆ ಚರ್ಚೆ ನಡೆಸಿ ಕನಿಷ್ಟ ದರ (ರೂ.650/-) ನಮೂದಿಸಿದ ಶ್ರೀ ಲಕ್ಷ್ಮಣ್ ಇವರಿಂದ ಚದರಡಿಯೊಂದಕ್ಕೆ ರೂ. 585/- ರಂತೆ 1000 ಮಧ್ಯಂತರ ನಿವೇಶನಗಳನ್ನು ಖರೀದಿಸಲು (ಸುಮಾರು 100 ಎಕರೆ ಜಮೀನಿನಲ್ಲಿ ಅಭಿವೃದ್ಧಿಪಡಿಸಿದ ವಾಸಯೋಗ್ಯ ನಿವೇಶನಗಳನ್ನು) ಹಾಗೂ ವಿವಿಧ ಅಳತೆಯ ನಿವೇಶನಗಳನ್ನು ಬಿಡಿ ವ್ಯಕ್ತಿಗಳಿಗೆ ನಾಮಮಾತ್ರ ಸದಸ್ಯರಾಗಿ ಮಾಡಿಕೊಂಡು ಚದರಡಿಯೊಂದಕ್ಕೆ ರೂ. 600/- ಗಳ ಬೆಲೆಯಲ್ಲಿ ಮಾರಾಟ ಮಾಡಲು ನಿರ್ಣಯಿಸಲಾಗಿದೆ ಹಾಗೂ ಈ ಸಂಬಂಧ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಂಡು, ಕರಾರು ಮಾಡಿಕೊಳ್ಳುವ ಸಮಯದಲ್ಲಿ ಅಭಿವೃದ್ಧಿದಾರರಿಗೆ ಅವಶ್ಯಕ ಮುಂಗಡ ನೀಡಲು ಅಧ್ಯಕ್ಷರಿಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿ ನಿರ್ಣಯಿಸಲಾಗಿದೆ. ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಅರ್ಜಿಗಳನ್ನು ನೀಡಿ, ಸಂಘಗಳ ಮೂಲಕ ಸಲ್ಲಿಕೆಯಾದ ಅರ್ಜಿಗಳನ್ನು ಪರಿಗಣಿಸಿ ನಿವೇಶನ ಮೊತ್ತ ಪೂರ್ಣ ಪಾವತಿಯಾಗಿ, ನಿವೇಶನ ಹಂಚಿಕೆಯಾಗಿ ನೊಂದಣಿಯಾದ ನಂತರ ನಿವೇಶನ ಬೆಲೆಯ ಶೇಕಡ 0.5 ರಷ್ಟು ಸೇವಾ ಶುಲ್ಕವನ್ನು ಪ್ರೋತ್ಸಾಹ ಧನದ ರೂಪದಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ನೀಡಲು ಸಹ ನಿರ್ಣಯಿಸಲಾಗಿದೆ. ಸದರಿ ನಿರ್ಣಯದಂತೆ ದಿನಾಂಕ: 11-6-2010ರಲ್ಲಿ ಅಭಿವೃದ್ಧಿದಾರರೊಡನೆ ಕರಾರು ಮಾಡಿಕೊಂಡು ರೂ. 30.00ಲಕ್ಷ ಮುಂಗಡ ಹಣ ಪಾವತಿಸಲಾಗಿದೆ. ನಂತರ ಬಡಾವಣೆಯಲ್ಲಿ ಕಲ್ಪಿಸಬೇಕಾಗಿರುವ ಸೌಲಭ್ಯಗಳನ್ನು ಕರಾರಿನಲ್ಲಿ ನಮೂದಿಸಲಾಗಿದೆ. ಬಡಾವಣೆ ಅಭಿವೃದ್ಧಿ ಕೆಲಸದ ಪ್ರಗತಿಯನ್ನು ಆದರಿಸಿ ಹಣ ಪಾವತಿಗೆ ಅವಕಾಶ ಮಾಡಿಕೊಳ್ಳಲಾಗಿದೆ. ಕರಾರಿನನ್ವಯ ಅಭಿವೃದ್ಧಿದಾರರಿಗೆ ಪಾವತಿಸಿದ ಒಟ್ಟು ನಿವೇಶನ ಮೊತ್ತದ ಶೇಕಡ 5 ರಷ್ಟು ಹಣವನ್ನು ರಿಟೆನ್‌ಷನ್ ಮನಿಯಾಗಿ ಹಿಡಿದುಕೊಳ್ಳಲು ಹಾಗೂ ಸದರಿ ಹಣವನ್ನು 6 ತಿಂಗಳ ನಿರ್ವಹಣಾ ಅವಧಿ ಪೂರ್ಣಗೊಂಡ ನಂತರ ಪಾವತಿಸಲು ಅವಕಾಶ ಮಾಡಿಕೊಳ್ಳಲಾಗಿದೆ. ಕರಾರಿನ ದಿನಾಂಕದಿಂದ 24 ತಿಂಗಳ ಒಳಗೆ ಬಡಾವಣೆಯನ್ನು ಅಭಿವೃದ್ಧಿಪಡಿಸಿ ಪೂರ್ಣಗೊಳಿಸುವ ಷರತ್ತನ್ನು ವಿಧಿಸಲಾಗಿದೆ ಹಾಗೂ

ಬಡಾವಣೆಯಲ್ಲಿ ಬರುವ ರಸ್ತೆ, ಉದ್ಯಾನವನ, ನಾಗರೀಕ ಸೌಲಭ್ಯದ ಸ್ಥಳಗಳನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಹಸ್ತಾಂತರಿಸಬೇಕಾಗಿರುತ್ತದೆ. ಅಭಿವೃದ್ಧಿದಾರರು ನಿವೇಶನವನ್ನು ಹಸ್ತಾಂತರಿಸುವವರೆಗೆ ಪಾವತಿಸಬೇಕಾದ ಆದಾಯ ತೆರಿಗೆ ಸೇರಿದಂತೆ ವಿವಿಧ ತೆರಿಗೆಗಳು, ಇತರೆ ವೆಚ್ಚಗಳು ಮತ್ತು ಸೆಸ್ ಇವುಗಳನ್ನು ಪಾವತಿಸಲು ಬದ್ಧರಾಗಿರುತ್ತಾರೆ.

ದಿನಾಂಕ: 25–5–2010ರಂದು ಪ್ರಕಟಣೆ ನೀಡಿ ವ್ಯಕ್ತಿಗಳಿಂದ ಮತ್ತು ಸಹಕಾರ ಸಂಘಗಳ ಮುಖಾಂತರ ನಿವೇಶನ ಆಕಾಂಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ನಾಲ್ಕು ಸಮ ಕಂತುಗಳಲ್ಲಿ ಚದರಡಿಯೊಂದಕ್ಕೆ ರೂ.600/– ಗಳಂತೆ ಹಣ ಪಾವತಿಸಲು ತಿಳಿಸಲಾಗಿರುತ್ತದೆ. (ದಿನಾಂಕ: 30–6–2010, 30–8–2010, 30–10–2010 ಮತ್ತು 31–12–2010) ಅನಿವಾರ್ಯ ಕಾರಣಗಳಿಂದ ಉಂಟಾಗುವ ಹೆಚ್ಚುವರಿ ನಿವೇಶನ ಬೆಲೆಯನ್ನು ಅರ್ಜಿದಾರರು ಪಾವತಿಸಬೇಕಾಗಿರುತ್ತದೆ. ನಿವೇಶನ ನೊಂದಣಿ ಶುಲ್ಕವನ್ನು ಹಾಗೂ ಸರ್ಕಾರ ವಿಧಿಸುವ ಶುಲ್ಕವನ್ನು ಅರ್ಜಿದಾರರೇ ಭರಿಸಬೇಕಾಗಿರುತ್ತದೆ.

ದಿನಾಂಕ: 31–12–2018ರ ಆಡಳಿತ ಮಂಡಳಿ ನಿರ್ಣಯದಂತೆ ದಿನಾಂಕ: 11–06–2010ರ ಕರಾರಿನಂತೆ ಹಾಲಿ ಸಂಸ್ಥೆಯಲ್ಲಿ ಜಮೀನು ಖರೀದಿ ದರ ಹಾಗೂ ಅಭಿವೃದ್ಧಿ ಸಾಮಾಗ್ರಿಗಳು ಹಾಗೂ ಕಾಮಗಾರಿ ವೆಚ್ಚಗಳು ದುಬಾರಿಯಾಗಿದ್ದರಿಂದ ಎರಡನೇ ಯೋಜನೆಯ 30x50, ಹಾಗೂ 40x60 ಅಳತೆಯ ನಿವೇಶನದ ಒಟ್ಟು ಮೊತ್ತದಲ್ಲಿ ಲಾಭಾಂಶ ಪ್ರತಿ ಚದರಡಿಗೆ ರೂ. 5/– ರಂತೆ ಮಹಾಮಂಡಲಕ್ಕೆ ನಿಗದಿಪಡಿಸಿಕೊಂಡು ಚದರಡಿಗೆ ರೂ. 995/– (ಪೂರ್ಣ ಮೊತ್ತ ಪಾವತಿಸಿದ ಸದಸ್ಯರುಗಳಿಗೆ) ಹಾಗೂ ರೂ. 1195/– ಗಳನ್ನು (ಅಪೂರ್ಣ ಮೊತ್ತ ಪಾವತಿಸಿದ ಸದಸ್ಯರುಗಳಿಗೆ) ನಿಗದಿಪಡಿಸಲು ಹಾಗೂ 30x50, ಹಾಗೂ 40x60 ಅಳತೆಯ ನಿವೇಶನಗಳಿಗೆ ಪ್ರತಿ ಚದರಡಿಗೆ ಈ ಹಿಂದೆ ಪಾವತಿಸಿದ ಮೊತ್ತವು ಸೇರಿಸಿ ಪೂರ್ಣ ಮೊತ್ತ ಪಾವತಿಸಿದ ಸದಸ್ಯರಿಗೆ ರೂ. ರೂ. 1,000/– ಗಳಂತೆ ಹಾಗೂ ಭಾಗಶಃ ಪಾವತಿಸಿದ ಸದಸ್ಯರಿಗೆ ರೂ. 1,200/– ಗಳನ್ನು ದರ ಹೆಚ್ಚಳ ಮಾಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿರುತ್ತದೆ.

2ನೇ ಯೋಜನೆಯ ಸಂಸ್ಥೆಯ ಮಟ್ಟದಲ್ಲಿ ಪ್ರಾರಂಭವಾಗಿ 10 ವರ್ಷ ಕಳೆದಿದ್ದು, ಲೆಕ್ಕಪರಿಶೋಧನಾ ವೇಳೆಯಲ್ಲಿ ನಿವೇಶನ ಅಭಿವೃದ್ಧಿ ಕಾರ್ಯ ಪುನಃ ಪ್ರಾರಂಭವಾಗಿರುವುದಾಗಿ ಕಂಡು ಬಂದಿರುತ್ತದೆ. ಈ ಬಗ್ಗೆ ಸದರಿ ವಿಷಯವನ್ನು ಆಡಳಿತ ಮಂಡಳಿಯವರು ಗಂಭೀರವಾಗಿ ಪರಿಗಣಿಸಿ ಸೂಕ್ತ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಂಸ್ಥೆಗೆ ಮುಂಗಡ ಪಾವತಿಸಿರುವ ಸದಸ್ಯರಿಗೆ ನಿವೇಶನ ಹಂಚುವ ಕ್ರಮ ತೆಗೆದುಕೊಳ್ಳತಕ್ಕದ್ದು.

ದಿನಾಂಕ 31–3–2020 ಕ್ಕೆ ಇದ್ದಂತೆ ನಿವೇಶನ ಮುಂಗಡ ವಿವರ (ಎರಡನೇ ಯೋಜನೆ)

ಕಂತು	30 x 50		40 x 60		ಒಟ್ಟು	
	ಸದಸ್ಯರು	ಮೊಬಲಗು	ಸದಸ್ಯರು	ಮೊಬಲಗು	ಸದಸ್ಯರು	ಮೊಬಲಗು
1	13	33,36,500–00	15	5,18,102–00	28	85,22,602–00
2	18	87,75,500–00	11	90,58,000–00	29	1,78,33,500–00
3	14	98,70,300–00	4	45,70,000–00	18	1,44,40,300–00
ಪೂರ್ಣ ಮೊತ್ತ ಪಾವತಿ	188	18,72,46,381–00	106	16,81,64,005–00	294	35,54,10,386–00
ಒಟ್ಟು	**233**	**20,92,28,681–00**	**136**	**18,69,78,107–00**	**369**	**39,62,06,788–00**

ಎರಡನೇ ಯೋಜನೆಗೆ ಹಣ ಪಾವತಿಸಿದ ಸದಸ್ಯರ ನಿವೇಶನ ಮುಂಗಡದ ಕುಳುವಾರು ತಯಾರಿಸಿದ್ದು, ಆಸ್ತಿ–ಜವಾಬ್ದಾರಿ ತಃಖ್ತೆ ಮೊಬಲಗಿಗೆ ತಾಳೆ ಇರುತ್ತದೆ. ಎರಡನೇ ಯೋಜನೆಗೆ ಸಂಬಂಧಿಸಿದಂತೆ ಒಟ್ಟು 369 ಸದಸ್ಯರು ಹಣ ಪಾವತಿಸಿದ್ದು, ಉಳಿದ ಸದಸ್ಯರಿಂದಲೂ ಸಹ ವ್ಯತ್ಯಾಸದ ಮೊತ್ತ ವಸೂಲು ಮಾಡತಕ್ಕದ್ದು. ಈ ಬಗ್ಗೆ ಪ್ರತ್ಯೇಕ ವಿವರಗಳನ್ನು ವರದಿಗೆ ಲಗತ್ತಿಸಿದೆ. ಸಂಸ್ಥೆಯ ಎರಡನೇ ಯೋಜನೆಗೆ ಸಂಬಂಧಿಸಿದಂತೆ ವರದಿ ಸಾಲಿನಾಖ್ಯೆರಿಗೆ ಒಟ್ಟು 369 ನಿವೇಶನ ಆಕಾಂಕ್ಷಿಗಳಿದ್ದು, ಈ ಪೈಕಿ 294 ಸದಸ್ಯರು ಪೂರ್ಣ ಹಣ ಪಾವತಿಸಿರುತ್ತಾರೆ.

ವರದಿ ಸಾಲಿನಲ್ಲಿ ಮೇಲ್ಕಂಡ ಯೋಜನೆಗೆ ಸಂಬಂಧಿಸಿದಂತೆ ಯಾವೊಂದು ನಿವೇಶನವನ್ನು ಸದಸ್ಯರಿಗೆ ನೊಂದಣಿ ಮಾಡಿಕೊಟ್ಟಿರುವುದಿಲ್ಲ. ಆದರೆ ಲೆಕ್ಕಪರಿಶೋಧನಾ ವೇಳೆಗೆ 128 ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಿದ್ದು, ಈ ಪೈಕಿ 39 ನಿವೇಶನದಾರರಿಗೆ ನಿವೇಶನವನ್ನು ನೊಂದಣಿ ಮಾಡಿಕೊಡಲಾಗಿದೆ.

MENEZES & ASSOCIATES
BANGALORE-94
CHARTERED ACCOUNTANTS

2.	**ಫ್ಲಾಟ್ ಮುಂಗಡ: ರೂ. 7,36,685/-** ದಿನಾಂಕ: 31-3-2020ಕ್ಕೆ ಫ್ಲಾಟ್ ಮುಂಗಡ ಬಾಬ್ತು ಎಂದು 7,36,685/- ಗಳು ಹಿಂದಿನ ಸಾಲುಗಳಿಂದ ಯಾವುದೇ ಬದಲಾವಣೆಯಿಲ್ಲದೆ ಮುಂದುವರೆದಿರುತ್ತದೆ. 2009-10ನೇ ಸಾಲಿನ ವರದಿಯಲ್ಲಿ ವಿವರವಾಗಿ ವಿವರಿಸಿರುವಂತೆ, ವಸತಿ ಮಹಾಮಂಡಲ ದವರು ದಿವ್ಯಾ ಬಿಲ್ಡರ್ಸ್‌ರವರೊಂದಿಗೆ ಒಪ್ಪಂದ ಮಾಡಿಕೊಂಡು 55 ಫ್ಲಾಟ್‌ಗಳನ್ನು ಚದರಡಿಯೊಂದಕ್ಕೆ ರೂ. 1,600/- ಗಳಿಗೆ ಖರೀದಿಸಿ ಸದಸ್ಯರಿಗೆ ರೂ. 1,750/- ಗಳಿಗೆ ಮಾರಾಟ ಮಾಡಲು ತೀರ್ಮಾನಿಸಿ ಅದರಂತೆ ಮಹಾಮಂಡಲದಲ್ಲಿ ಸದಸ್ಯರಾಗಿದ್ದ 50 ಜನರಿಗೆ ಹಾಗೂ ಬಿಲ್ಡರ್ ರವರಿಂದ 5 ಜನರಿಗೆ ಒಟ್ಟು 55 ಜನ ಸದಸ್ಯರಿಗೆ ಫ್ಲಾಟ್‌ಗಳನ್ನು ನೊಂದಣಿ ಮಾಡಿಸಿರುತ್ತಾರೆ. ಬಿಲ್ಡರ್‌ರಿಂದ ನೊಂದಣಿಯಾದ 5 ಜನರಿಗೆ ಯಾವುದೇ ಸೇವಾ ಶುಲ್ಕ ವಸೂಲು ಮಾಡಿರುವುದಿಲ್ಲ. ಈ ವ್ಯವಹಾರದಿಂದಾಗಿ ಫ್ಲಾಟ್ ಯೋಜನೆ ಕಾರ್ಯಕ್ರಮ ಮಹಾಮಂಡಲದ ಹಂತದಲ್ಲಿ ಮುಕ್ತಾಯವಾಗಿರುತ್ತದೆ. ಆದರೆ ಕೆಲ ಸದಸ್ಯರು ಫ್ಲಾಟ್ ಮೌಲ್ಯಕ್ಕಿಂತ ಹೆಚ್ಚಾಗಿ ಪಾವತಿಸಿದ್ದ 28 ಜನ ಸದಸ್ಯರ ಬಾಬ್ತು ಹಾಗೂ ಇನ್ನಿಬ್ಬರು ಭಾಗಷಃ ಪಾವತಿಸಿದ ಒಟ್ಟು ಮೊಬಲಗು ರೂ. 7,36,685/- ಗಳು ಜವಾಬ್ದಾರಿಯಡಿಯಲ್ಲಿ ಮುಂದುವರೆಸಲಾಗಿದೆ. ಸದರಿ ಬಾಬ್ತಿಗೆ ಕುಳುವಾರು ತಯಾರಿಸಿದ್ದು ತಾಳೆಯಿರುತ್ತದೆ. ತಾಳೆಯಿರುವ ಕುಳುವಾರನ್ನು ವರದಿಗೆ ಲಗತ್ತಿಸಿದೆ. ಹಿಂದಿನ ವರದಿಗಳನ್ನು ವಿವರವಾಗಿ ಪರಿಶೀಲಿಸಿದಾಗ ಹಾಗೂ ಸಿಬ್ಬಂದಿಯವರು ನೀಡಿದ ಸಮಜಾಯಿಷಿಗಳ ಮೇಲೆ ಸದರಿ ಬಾಬ್ತು ಹೆಚ್ಚುವರಿ ತೆರಿಗೆಗಾಗಿ (+ತೆರಿಗೆ) ಫ್ಲಾಟ್ ಆಕಾಕ್ಷಿಗಳಿಂದ ಸಂಗ್ರಹಿಸಿದ ಬಾಬ್ತು ಆಗಿರುತ್ತದೆ. ಹಿಂದಿನ ವರದಿಗಳಲ್ಲಿ ತಿಳಿಸಿರುವಂತೆ ಫ್ಲಾಟನ್ನು ಪಡೆದ ಸದಸ್ಯರು ಬಿಲ್ಡರ್ಸ್ ಹಾಗೂ ಸಂಸ್ಥೆಯ ಮೇಲೆ ಸರಿಯಾಗಿ ಕಾಮಗಾರಿ ನಡೆಸಿಲ್ಲವೆಂದು, ಬೆಂಗಳೂರು ಜಲಮಂಡಳಿ ನೀರಿಗೆ ಹಣ ಪಾವತಿ ಮಾಡದೆ ಇರುವುದು ಹಾಗೂ ಲಿಫ್ಟ್ ಸರಿಯಾಗಿ ಕಾರ್ಯ ನಿರ್ವಹಿಸದೆ ಇರುವ ಬಗ್ಗೆ ಜಿಲ್ಲಾ ಗ್ರಾಹಕರ ವೇದಿಕೆ, ಬೆಂಗಳೂರು ರವರ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ 1186/2012ರಲ್ಲಿ ದೂರನ್ನು ದಾಖಲಿಸಿರುತ್ತಾರೆ. ಮೇಲ್ಕಂಡ ದೂರಿನ ಬಗ್ಗೆ ವರದಿ ಸಾಲಿನಲ್ಲಿ ದಿನಾಂಕ: 12-5-2017 ರಲ್ಲಿ ಒಂದು ಜಿಲ್ಲಾ ಗ್ರಾಹಕರ ವೇದಿಕೆ ಆದೇಶ ಹೊರಡಿಸಿ ದಿವ್ಯಾ ಬಿಲ್ಡರ್ಸ್ ರವರಿಗೆ ಕಾಲಾವಕಾಶ ನೀಡಿ ಆರ್ಥಿಕ ಪರಿಹಾರವನ್ನು ನೀಡುವಂತೆಯೂ ಸಹ ಸೂಚಿಸಿರುತ್ತಾರೆ. ಮೇಲ್ಕಂಡ ತೀರ್ಪಿನ ವಿರುದ್ಧ ದಿವ್ಯಾ ಬಿಲ್ಡರ್ಸ್ ರವರು ಜಿಲ್ಲಾ ಗ್ರಾಹಕರ ವೇದಿಕೆ ವಿರುದ್ಧ ಕರ್ನಾಟಕ ರಾಜ್ಯ ಗ್ರಾಹಕರ ಆಯೋಗ, ಬೆಂಗಳೂರು ಇವರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಮೇಲ್ಮನವಿ ಸಂಖ್ಯೆ 2075/2017 ಆಗಿರುತ್ತದೆ. ಮೇಲ್ಕಂಡ ಅಂಶವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಮೇಲ್ಕಂಡ ಮನವಿ ಬಗ್ಗೆ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಮಾಹಿತಿ ಇರುವುದಿಲ್ಲ.
3)	**ನಿವೇಶನ ಅಭಿವೃದ್ಧಿ ಖಾತೆ: ರೂ. 7,49,827/-** ಹಿಂದಿನ ಸಾಲಿನಲ್ಲಿ ಒಂದನೇ ಯೋಜನೆಯಡಿಯ 1 ರಿಂದ 5ನೇ ಹಂತಗಳವರೆವಿಗೂ 29 ಮಧ್ಯಂತರ ಹಾಗೂ 10 ಮೂಲೆ ನಿವೇಶನಗಳನ್ನು ನೊಂದಾವಣೆ ಮಾಡಿದ್ದು, ಇದರಿಂದ ಬಂದ ರೂ.7,49,827/- ಗಳ ಜೊತೆಗೆ ವರದಿ ಸಾಲಿನಲ್ಲಿ 37 ಮಧ್ಯಂತರ ಹಾಗೂ 17 ಮೂಲೆ ನಿವೇಶನಗಳನ್ನು ನೊಂದಣಿ ಮಾಡಿದ್ದರಿಂದ ಬಂದ ಆದಾಯ ರೂ 7,69,905-92 ಒಟ್ಟು ರೂ. 15,19,733-48 ಆದಾಯವಾಗಿ ಪರಿಗಣಿಸದೆ ನಿವೇಶನ ಅಭಿವೃದ್ಧಿ ಖಾತೆಯಲ್ಲಿ ಜವಾಬ್ದಾರಿ ಅಡಿ ತೋರಿಸಲಾಗಿದೆ. ಈ ಬಗ್ಗೆ ದಿನಾಂಕ:19-08-2019 ರ ಆಡಳಿತ ಮಂಡಳಿ ಹಾಗೂ 23-09-2019 ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ಉಪನಿಯಮ ಸಂಖ್ಯೆ 61 ನಿವ್ವಳ ಲಾಭ(xii) "ನಿವೇಶನ ಅಭಿವೃದ್ಧಿ ನಿಧಿ" ವಸತಿ ಮಹಾಮಂಡಲವು ಪ್ರಾಯೋಜಿಸಿರುವ ಬಡಾವಣೆಯಲ್ಲಿನ ನಿವೇಶನಗಳ ನೋಂದಣಿಯಿಂದ ವರ್ಷಂ ಪ್ರತಿ ಗಳಿಸುವ ಲಾಭವನ್ನು ನಿವೇಶನ ಅಭಿವೃದ್ಧಿ ನಿಧಿಗೆ ವರ್ಗಾಯಿಸುವುದೆಂದು ನಿರ್ಣಯವಾಗಿದ್ದು, ಅದರಂತೆ ಕ್ರಮವಿರಿಸಿದೆ.

20) ಲಾಭ ವಿಂಗಡಣೆ

1)	ಹಿಂದಿನ ಸಾಲಿನ ಕ್ರೋಢೀಕೃತ ಲಾಭ	ಹಿಂದಿನ ಸಾಲಿನ ಕ್ರೋಢೀಕೃತ ಲಾಭ ರೂ. 1,02,57,058-63 ಗಳು.
2)	ಲಾಭ ವಿಂಗಡನೆಗೆ ಮಹಾ ಸಭೆಯ ಒಪ್ಪಿಗೆ ಪಡೆಯಲಾಗಿದೆಯೆ? ಅದು ಕ.ಸ.ಸಂಘಗಳ ಕಾಯ್ದೆ ಕಲಂ 57	(ಅ) ಲಾಭ ವಿಂಗಡಣೆಗೆ ಮಹಾಸಭೆಯ ಒಪ್ಪಿಗೆ ಪಡೆಯಲಾಗಿದೆ. (ಆ) ಲಾಭ ವಿಂಗಡಣೆಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 57 ಹಾಗೂ ಉಪನಿಯಮ 61 ರನ್ವಯ ಮಾಡಿಕೊಳ್ಳಲಾಗಿದೆ.

MENEZES & ASSOCIATES BANGALORE-94 CHARTERED ACCOUNTANTS

	ಹಾಗೂ ಸಂಘದ ಉಪ ನಿಯಮ 61ರನ್ವಯ ಮಾಡಿಕೊಳ್ಳಲಾಗಿದೆಯೇ?	
3)	ಘೋಷಣೆಯಾದ ಲಾಭಾಂಶ ಹಂಚಿಕೆಯಾಗಿದೆಯೆ?	ಘೋಷಣೆಯಾದ ಲಾಭಾಂಶ ಹಂಚಿಕೆಯಾಗುತ್ತಿದೆ.
4)	ವಿತರಣೆಯಾಗದ ಲಾಭಾಂಶದ ಮೊತ್ತ	ವಿತರಣೆಯಾಗದ ಲಾಭಾಂಶ ರೂ. 27,22,151-64 ಗಳಿರುತ್ತದೆ.
5)	ಮೂರು ವರ್ಷ ಮೀರಿದ ಅಸ್ವೀಕೃತ ಲಾಭಾಂಶದ ಮೊತ್ತ	ಮೂರು ವರ್ಷ ಮೀರಿದ ಅಸ್ವೀಕೃತ ಲಾಭಾಂಶದ ಲೆಕ್ಕವನ್ನು ಪ್ರತ್ಯೇಕವಾಗಿ ನಿರ್ವಹಿಸಿರುವುದಿಲ್ಲ.

21) ನಗದು ಶಿಲ್ಕು ಪರಿಶೀಲನೆ

ಪರಿಶೀಲನೆಯ ಕಛೇರಿ	ದಿನಾಂಕ	ನಗದು(ರೂ)	ಹಾಜರಾಗಿದ್ದ ಸಿಬ್ಬಂದಿ
ಕೇಂದ್ರ ಕಛೇರಿ	31-3-2020	5,37,931	ಶ್ರೀಮತಿ ಎಸ್.ಶೋಭಾದೇವಿ, ನಗದು ಗುಮಾಸ್ತರು (ಪ್ರಭಾರ), ನಗದು ಪುಸ್ತಕದಲ್ಲಿ ನಗದು ಗುಮಾಸ್ತರ ಸಹಿಯೊಂದಿಗೆ ಸಹಾಯಕ ವ್ಯವಸ್ಥಾಪಕರು (ಆಂತರಿಕ ಲೆಕ್ಕಪರಿಶೋಧಕರು), ವ್ಯವಸ್ಥಾಪಕರು (ಲೆಕ್ಕ), ಪ್ರಧಾನ ವ್ಯವಸ್ಥಾಪಕರ ಸಹಿಗಳನ್ನು ಮಾಡುತ್ತಿರುತ್ತಾರೆ. ಉಪನಿಯಮ 48(3)ರಂತೆ ಮಹಾಮಂಡಳದ ನಗದು ಶಿಲ್ಕು ಮತ್ತು ಸಮೀಕರಣ ತಃಖ್ತೆಯನ್ನು ಆಗಿಂದಾಗ್ಗೆ ಖಜಾಂಚಿಗಳು ಪರಿಶೀಲಿಸಲು ಕ್ರಮವಿಡುವುದು. ಸಂಸ್ಥೆಯ ನಗದು ತಿಜೋರಿ ಜವಾಬ್ದಾರಿ ಕೇವಲ ನಗದು ಗುಮಾಸ್ತರ ಜವಾಬ್ದಾರಿಯಲ್ಲಿ ಮಾತ್ರ ಇರುತ್ತದೆ. ನಗದು ಗುಮಾಸ್ತರ ಜೊತೆಗೆ ಮತ್ತೊಬ್ಬರ ಸಿಬ್ಬಂದಿಯನ್ನು ಜಂಟಿ ಜವಾಬ್ದಾರಿಯನ್ನಾಗಿಸಲು ಕ್ರಮ ಅಗತ್ಯ.

1)	ಪರಿಶೀಲಿಸಿದ ನಗದು ಸಾಲಾಖ್ಯೆರಿನ ನಗದಿನೊಂದಿಗೆ ಹೊಂದಾಣಿಕೆಯಾಗುತ್ತಿದೆಯೇ?	ಪರಿಶೀಲಿಸಿದ ನಗದು ಹೊಂದಾಣಿಕೆಯಾಗಿರುತ್ತದೆ.
2)	ಸಂಘದ ಉಪನಿಯಮಗಳಲ್ಲಿ ನಗದು ಶಿಲ್ಕು ಜವಾಬ್ದಾರಿ ಹಾಗೂ ಮಿತಿಯನ್ನು ನಿಗದಿಪಡಿಸಿ ದ್ದಾರೆಯೆ? ಎಷ್ಟು?	ಸಂಘದ ಉಪ ನಿಯಮಗಳಲ್ಲಿ ನಗದು ಶಿಲ್ಕು ಜವಾಬ್ದಾರಿ ಮಿತಿಯನ್ನು ಆಡಳಿತ ಮಂಡಳಿಯ ತೀರ್ಮಾನದಂತೆ ನಗದು ಶಿಲ್ಕಿನ ಮಿತಿ 10 ಲಕ್ಷ ಇರತಕ್ಕದ್ದು.
3)	ಅನಾವಶ್ಯಕವಾಗಿ ನಗದು ಶಿಲ್ಕು ಮುಂದುವರಿಸಿದ್ದಲ್ಲಿ ವಿವರಣೆ ನೀಡಿ.	ವರದಿ ಸಾಲಿನಲ್ಲಿ ಆಡಳಿತ ಮಂಡಳಿ ನಿಗದಿಪಡಿಸಿರುವ ನಗದು ಶಿಲ್ಕಿನ ಮಿತಿಯನ್ನು ಮೀರಿದ ಉದಾಹರಣೆಗಳು ಇರುವುದಿಲ್ಲ. ಲೆಕ್ಕಪರಿಶೋಧನಾ ಸಮಯದಲ್ಲಿ ದಿನಾಂಕ: 07-05-2020 ರಂದು ನಗದು ಶಿಲ್ಕು ಪರಿಶೀಲಿಸಲಾಗಿ ಷೆಡ್ಯೂಲ್‌ನಲ್ಲಿ ಇರುವ ಬ್ಯಾಲೆನ್ಸ್ ರೂ. 8,70,037/- ಗಳಿಗೆ ತಾಳೆಯಾಗಿರುತ್ತದೆ.
4)	ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಲಾಗಿದೆಯೆ?	ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಲಾಗಿದೆ. ಸಂಸ್ಥೆಯು ಸಾಗಾಣಿಕೆಯಲ್ಲಿರದ ನಗದಿಗೆ ರೂ. 10.00 ಲಕ್ಷಗಳಿಗೆ ಹಾಗೂ ತಿಜೋರಿಯಲ್ಲಿರುವ ಶಿಲ್ಕು ರೂ. 8.00 ಲಕ್ಷಗಳಿಗೆ ಇತರೆ ರೂ. 2.00 ಲಕ್ಷಗಳಿಗೆ ವಿಮೆ ಮಾಡಿಸಲಾಗಿರುತ್ತದೆ. ವಿಮಾ ಅವಧಿ ದಿನಾಂಕ: 7-2-2021ರವರೆಗೆ ಜಾರಿಯಲ್ಲಿರುತ್ತದೆ. ವಿಮಾ ಮಾಡಿಸಿರುವ ಮಿತಿಗಿಂತ ಹೆಚ್ಚಾಗಿ ನಗದು ಶಿಲ್ಕು ಇಟ್ಟುಕೊಂಡಲ್ಲಿ ಸಂಬಂಧಪಟ್ಟ ಸಿಬ್ಬಂದಿಯವರೆ ಜವಾಬ್ದಾರರಾಗಿರುತ್ತಾರೆ.
5)	ನಗದು ಶಿಲ್ಕನ್ನು ಕಾಲಕಾಲಕ್ಕೆ ಅಧಿಕೃತರು ಪರೀಕ್ಷಿಸಿದ್ದಾರೆಯೆ?	ನಗದು ಶಿಲ್ಕನ್ನು ಕಾಲಕಾಲಕ್ಕೆ ಅಧಿಕೃತ ಸಿಬ್ಬಂದಿಯಿಂದ ಪರಿಶೀಲನೆ ಆಗುತ್ತಿರುವುದಿಲ್ಲ. ವರದಿ ಸಾಲಿನ ಅಂತ್ಯಕ್ಕೆ ಅಂದರೆ ದಿನಾಂಕ: 31-03-2020 ಕ್ಕೆ ಸಂಸ್ಥೆಯಲ್ಲಿ ರೂ. 5,37,931/- ಗಳು ನಗದು ಶಿಲ್ಕು ಅಖೈರು ಶಿಲ್ಕು ಆಗಿರುತ್ತದೆ. ಈ ಬಾಬ್ತು ವರ್ಷಾಂತ್ಯದಲ್ಲಿ ಸಂಸ್ಥೆಯ ಖಜಾಂಚಿಗಳಿಂದ ಜಡ್ತಿಯಾಗಿರುತ್ತದೆ. ಸಂಸ್ಥೆಯಲ್ಲಿ ವರ್ಷಾಂತ್ಯಕ್ಕೆ ಇರುವ ನಗದು ಶಿಲ್ಕು ಹಾಗೂ ದಾಸ್ತಾನನ್ನು ಕಡ್ಡಾಯವಾಗಿ ಇಲಾಖಾಧಿಕಾರಿಗಳಿಂದಾಗಲೀ ಇಲ್ಲವೇ ಆಡಳಿತ ಮಂಡಳಿಯವರಿಂದಾಗಲೀ ಪರಿಶೀಲಿಸಲ್ಪಡಬೇಕಾಗಿರುವ ಹಿನ್ನೆಲೆಯಲ್ಲಿ ಸಂಸ್ಥೆಯ ಖಜಾಂಚಿಗಳಿಂದ ವರ್ಷಾಂತ್ಯಕ್ಕೆ ಪರಿಶೀಲಿಸಿ ಕ್ರಮವಿರಿಸಲಾಗಿರುತ್ತದೆ.

MENEZES & ASSOCIATES BANGALORE-94 CHARTERED ACCOUNTANTS

		ಸಂಸ್ಥೆಯಿಂದ ಹೊರಗಡೆ ತೆಗೆದುಕೊಂಡು ಹೋದಾಗ ಅಥವಾ ತೆಗೆದುಕೊಂಡು ಬರುವಾಗ್ಗೆ ರೂ. 10.00 ಲಕ್ಷಗಳವರೆಗಿನ ಬಾಬ್ತಿಗೆ ಹಾಗೂ ಸಂಸ್ಥೆಯ ತಿಜೋರಿಯಲ್ಲಿರುವ ರೂ. 8.00 ಲಕ್ಷಗಳ ವರೆಗಿನ ಮೊಬಲಿಗೆ ವಿಮೆ ಇಳಿಸಿರುತ್ತಾರೆ. ಹಾಗೂ ಕೌಂಟರ್‌ನ ವ್ಯತ್ಯಾಸಗಳಿಗೆ ರೂ. 2.00 ಲಕ್ಷಗಳಿಗೆ ವಿಮೆ ಇಳಿಸಿರುತ್ತಾರೆ. ವಿಮೆ ವಾಯಿದೆ ದಿನಾಂಕ: 07-02-2021ರವರೆಗೆ ಚಾಲ್ತಿಯಲ್ಲಿರುತ್ತದೆ.

(22) ಬ್ಯಾಂಕ್ ಖಾತೆಗಳಲ್ಲಿ ಶಿಲ್ಕು :

ದಿನಾಂಕ: 31-3-2020ಕ್ಕೆ ವಿವಿಧ ಬ್ಯಾಂಕುಗಳಲ್ಲಿ ಒಟ್ಟು ರೂ. **2,05,41,755-80** ಗಳಿದ್ದು ವಿವರ ಹೀಗಿರುತ್ತದೆ.

	ಬ್ಯಾಂಕುಗಳಲ್ಲಿ ಶಿಲ್ಕು : ರೂ. 2,05,41,755-80
	ಮಹಾಮಂಡಲವು ದೈನಂದಿನ ವ್ಯವಹಾರ ನಡೆಸಲು 09 ವಿವಿಧ ಬ್ಯಾಂಕ್ ಶಾಖೆಗಳಲ್ಲಿ ಚಾಲ್ತಿ ಹಾಗೂ ಉಳಿತಾಯ ಖಾತೆಗಳನ್ನು ಹೊಂದಿದ್ದು, ದಿನಾಂಕ: 31-3-2020ರ ಅಂತ್ಯಕ್ಕೆ ರೂ. 2,05,41,755-80 ಗಳಿರುತ್ತದೆ. ವರ್ಷಾಂತ್ಯಕ್ಕೆ ಇರುವ ಶಿಲ್ಕಿನ ಬಗ್ಗೆ ವಿವಿಧ ಬ್ಯಾಂಕುಗಳಿಂದ ದೃಢೀಕರಣ ಪತ್ರ ಪಡೆದಿದ್ದು, ದೃಢೀಕರಣ ಪತ್ರದಲ್ಲಿನ ಮೊಬಲಗು ಸಮನ್ವಯ ತಃಖ್ತೆಗೆ ಒಳಪಟ್ಟು, ಆಸ್ತಿ - ಜವಾಬ್ದಾರಿ ಮೊಬಲಗಿಗೆ ತಾಳೆ ಇರುತ್ತದೆ. ವಿವಿಧ ಬ್ಯಾಂಕುಗಳ ಸಮನ್ವಯ ತಃಖ್ತೆಯ ಸಂಕ್ಷಿಪ್ತ ಪಟ್ಟಿಯನ್ನು ವರದಿಗೆ ಲಗತ್ತಿಸಿದೆ. ಸಹಕಾರ ಬ್ಯಾಂಕನ್ನು ಹೊರತುಪಡಿಸಿ, ಐ.ಡಿ.ಬಿ.ಐ. ಬ್ಯಾಂಕ್, ಕೆನರಾ ಬ್ಯಾಂಕ್, ಮತ್ತು ಹೆಚ್.ಡಿ.ಎಫ್.ಸಿ. ಬ್ಯಾಂಕ್ ಹಾಗೂ ಯಸ್ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆಯನ್ನು ಹೊಂದಿರುತ್ತದೆ. ಸಹಕಾರ ಕಾಯಿದೆ ಕಲಂ 58ರ ಪ್ರಕಾರ ಬ್ಯಾಂಕ್ /ಸಂಸ್ಥೆಗಳಲ್ಲಿ ಹೂಡಿಕೆ ಮಾಡಲು ಕ್ರಮವಿಡುವುದು. ಅಮಾನತ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿರುವ ಬಾಕಿ ರೂ. 1,77,055-55 ಗಳನ್ನು ಸಂಸ್ಥೆಗೆ ಜಮಾ ಪಡೆಯಲು ಬ್ಯಾಂಕಿನೊಂದಿಗೆ ವ್ಯವಹರಿಸಿ ಈ ಲೆಕ್ಕವನ್ನು ಸಹ ಖೈದುಪಡಿಸಿಕೊಳ್ಳಲು ಕ್ರಮ ಅಗತ್ಯ. ದಿನಾಂಕ: 31-3-2020ರ ಅಂತ್ಯಕ್ಕೆ ವಿವಿಧ ಬ್ಯಾಂಕುಗಳಲ್ಲಿನ ಶಿಲ್ಕು ಈ ಕೆಳಕಂಡಂತೆ ಇರುತ್ತದೆ.

ವಿವಿಧ ಬ್ಯಾಂಕ್‌ಗಳಲ್ಲಿ ಶಿಲ್ಕು

ಕ್ರ.ಸಂ	ಬ್ಯಾಂಕ್‌ಗಳ ಹೆಸರು	ಖಾತೆ	ಆಸ್ತಿ-ಜವಾಬ್ದಾರಿ ರೀತ್ಯಾ	ದೃಢೀಕರಣ ರೀತ್ಯಾ	ಸಮನ್ವಯ
1	ಕ.ರಾ.ಸ. ಅಪೆಕ್ಸ್ ಬ್ಯಾಂಕ್, ಕೇಂದ್ರ ಕಛೇರಿ.	ಚಾಲ್ತಿ ಖಾತೆ	1,49,43,406-56	1,51,73,893-56	(+) 2,47,978 (-) 17,491
2	ಅಮಾನತ್ ಕೋ ಆಪರೇಟಿವ್ ಬ್ಯಾಂಕ್	ಚಾಲ್ತಿ ಖಾತೆ	1,77,085-55	1,77,085-55	-
3	ಕೆನರಾ ಬ್ಯಾಂಕ್, ಬಸವನಗುಡಿ ಶಾಖೆ	ಚಾಲ್ತಿ ಖಾತೆ	14,29,260-08	26,61,116-08	(+) 12,48,077 (-) 16,221
4	ಬಿ.ಡಿ.ಸಿ.ಸಿ. ಬ್ಯಾಂಕ್, ಬೆಂಗಳೂರು	ಚಾಲ್ತಿ ಖಾತೆ	9,084-00	9,184-00	(+) 100
5	ಕ.ರಾ.ಸ. ಅಪೆಕ್ಸ್ ಬ್ಯಾಂಕ್, ಜಯನಗರ ಶಾಖೆ	ಚಾಲ್ತಿ ಖಾತೆ	27,28,304-36	83,67,118-36	(+) 56,39,084 (-) 270
6	ಕ.ರಾ.ಸ. ಅಪೆಕ್ಸ್ ಬ್ಯಾಂಕ್, ಅಶೋಕ ಪಿಲ್ಲರ್ ಶಾಖೆ.	ಚಾಲ್ತಿ ಖಾತೆ	2,63217-36	6,38,777-36	(+) 3,75,560
7	ಹೆಚ್.ಡಿ.ಎಫ್.ಸಿ. ಬ್ಯಾಂಕ್ ಬೆಂಗಳೂರು	ಚಾಲ್ತಿ ಖಾತೆ	7,942-55	7,942-55	-
8	ಐ.ಡಿ.ಬಿ.ಐ. ಬ್ಯಾಂಕ್ ಬೆಂಗಳೂರು	ಉಳಿತಾಯ ಖಾತೆ	8,20,700-96	11,58,939-56	3,38,238-60
9	ಯಸ್ ಬ್ಯಾಂಕ್, ಬೆಂಗಳೂರು	ಉಳಿತಾಯ ಖಾತೆ	1,62,754-38	1,62,754-38	-
	ಒಟ್ಟು ರೂ.		**2,05,41,755-80**	**2,83,56,811-40**	



ಮೇಲ್ಕಂಡ ಬ್ಯಾಂಕುಗಳ ಶಿಲ್ಕು ಬಾಬ್ತು ಕ್ರ.ಸಂ. (1), (3), (4), (5), (6), (8)ರ ಬಾಬ್ತುಗಳು ಸಮನ್ವಯಕ್ಕೆ ಒಳಪಟ್ಟು ತಾಳೆಯಿರುತ್ತದೆ. ಸಮನ್ವಯದಲ್ಲಿ ಉಳಿಕೆ ಕ್ರಮ ಸಂ. (2), (7) ಹಾಗೂ 9ನೇ ಬಾಬ್ತುಗಳು ನೇರವಾಗಿ ದೃಢೀಕರಣ ಪತ್ರಕ್ಕೆ ತಾಳೆ ಇರುತ್ತದೆ. ದೃಢೀಕರಣ ಹಾಗೂ ಸಮನ್ವಯದ ಬಗ್ಗೆ ಪ್ರತ್ಯೇಕ ಪಟ್ಟಿ ತಯಾರಿಸಿದ್ದು ಸದರಿ ಪಟ್ಟಿಯನ್ನು ವರದಿಗೆ ಲಗತ್ತಿಸಿದೆ.

ದೈನಂದಿನ ವ್ಯವಹಾರಕ್ಕೆ ಬೇಕಾಗುವ ಮೊಬಲಗನ್ನು ಹೊರತುಪಡಿಸಿ ಉಳಿದ ಹೆಚ್ಚುವರಿ ಹಣವನ್ನು ಚಾಲ್ತಿ ಅಥವಾ ಉಳಿತಾಯ ಖಾತೆಯಲ್ಲಿ ಇರಿಸುವ ಬದಲಾಗಿ ಕಾಲಾವಧಿ ಠೇವಣಿಯಲ್ಲಿ ತೊಡಗಿಸುವುದು ಸೂಕ್ತ. ಇದರಿಂದ ಸಂಸ್ಥೆಯ ಹಣವನ್ನು ನ್ಯಾಯೋಚಿತವಾಗಿ ಹಾಗೂ ಲಾಭದಾಯಕವಾಗಿ ಹೂಡಿಕೆ ಮಾಡಿದಂತಾಗುತ್ತದೆ. ಮೇಲ್ಕಂಡ ಖಾತೆಗಳ ಪೈಕಿ ಅಮಾನತ್ ಕೋ ಆಪರೇಟಿವ್ ಬ್ಯಾಂಕ್ ಚಾಲ್ತಿ ಲೆಕ್ಕದಲ್ಲಿರುವ ರೂ. 1,77,085–55 ಗಳು ಹಿಂದಿನ 7–8 ವರ್ಷಗಳಿಂದ ಸ್ಥಗಿತವಾಗಿರುತ್ತದೆ. ಈ ಬಗ್ಗೆ ಸೂಕ್ತವಾಗಿ ಕರಡು ನಿಧಿಯನ್ನು ಸೃಷ್ಟಿಸಿಕೊಂಡಿರುತ್ತದೆ. ಬ್ಯಾಂಕ್ ಠೇವಣಿಗಳ ಮೇಲೆ ವರದಿ ಸಾಲಿನಲ್ಲಿ ಬಡ್ಡಿಯ ರೂಪದಲ್ಲಿ ಆದಾಯವಾಗಿ ಸಂಘಕ್ಕೆ ರೂ. 2,06,722/– ಗಳು ಜಮಾ ಬಂದಿರುತ್ತದೆ. ಸಮನ್ವಯ ಪಟ್ಟಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅನೇಕ ಬಾಬ್ತುಗಳು ಬಹು ಹಿಂದಿನಿಂದಲೂ ಸಮನ್ವಯಗೊಳ್ಳದೇ ಮುಂದುವರೆದಿರುತ್ತವೆ. ಈ ಬಗ್ಗೆ ಹಿಂದಿನ ಹಲವಾರು ವರ್ಷಗಳಲ್ಲಿ ಆಕ್ಷೇಪಿಸಿದ್ದರೂ ಯಾವುದೇ ಕ್ರಮವಿಡದಿರುವುದು ಕಂಡು ಬಂದಿರುತ್ತದೆ.

ಇತರೆ ಠೇವಣಾತಿಗಳು : ರೂ. 75,79,666/–

ವರ್ಷಾಂತ್ಯಕ್ಕೆ ಸಂಸ್ಥೆಯಲ್ಲಿ ರೂ. 75,79,666/– ಗಳ ಇತರೆ ಠೇವಣಿಗಳು ಇರುತ್ತವೆ. ವಿವಿಧ ಇಲಾಖೆಗಳು ನೀಡಿದ ಸೇವೆಗಳಿಗೆ ನಿಯಮಾನುಸಾರ ಮಾಡಬೇಕಾದ ಠೇವಣಿಗಳನ್ನು ಮಾಡಿದ್ದು, ಸದರಿ ಠೇವಣಿ ಮೊಬಲಗು ದಿನಾಂಕ: 31–3–2020ಕ್ಕೆ ಸದರಿ ಬಾಬ್ತುಗಳು ಹಿಂದಿನ ಸಾಲುಗಳಿಂದ ಮುಂದುವರೆದಿದ್ದು, ವಿವರ ಈ ಕೆಳಕಂಡಂತಿರುತ್ತದೆ.

1	ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಠೇವಣಿ	2,63,620–00
2	ಮೀಟರ್ ಠೇವಣಿ ವಿದ್ಯುಚ್ಛಕ್ತಿ ಇಲಾಖೆ	1,68,580–00
3	ದೂರವಾಣಿ ಠೇವಣಿ	8,000–00
4	ಆದಾಯ ತೆರಿಗೆ ಮುಂಗಡ ಠೇವಣಿ	71,39,466–00
	ಒಟ್ಟು ರೂ.	**75,79,666–00**

ಮೇಲ್ಕಂಡ ಠೇವಣಿಗಳ ಪೈಕಿ ಮೊದಲು 3 ಬಾಬ್ತುಗಳ ಹಿಂದಿನ ಸಾಲಿನಿಂದ ಯಥಾವತ್ತಾಗಿ ಮುಂದುವರೆದಿರುತ್ತದೆ

ಆದಾಯ ತೆರಿಗೆ ಮುಂಗಡ ಠೇವಣಿ: ರೂ. 71,39,466/–

1) ಹಿಂದಿನ ಸಾಲಿನಲ್ಲಿ ದಿನಾಂಕ: 23–2–2018ರಂದು ಆದಾಯ ತೆರಿಗೆ ಅಧಿಕಾರಿ Ward-5(2)(3) ರವರು ಸಂಸ್ಥೆಗೆ ತಿಳುವಳಿಕೆ ಪತ್ರ ನೀಡಿ 2014–15ನೇ ಸಾಲಿನ (AY 2015-16) ಸಂಬಂಧಿಸಿದಂತೆ ರೂ.1,49,57,420/–ಗಳ ತೆರಿಗೆ ಪಾವತಿಸುವಂತೆ ಸೂಚಿಸಿರುತ್ತಾರೆ.

ಈ ಸಂಬಂಧ ಆದಾಯ ತೆರಿಗೆ ಇಲಾಖೆಗೆ ಮೇಲ್ಮನವಿಯನ್ನು ಸಲ್ಲಿಸಲು ಸಂಸ್ಥೆಯು ತೀರ್ಮಾನಿಸಿರುತ್ತದೆ. ಮೇಲ್ಮನವಿ ಸಲ್ಲಿಸುವ ಮುಂಚೆ ಆದಾಯ ತೆರಿಗೆ ತಗಾದೆಯ ಮೊತ್ತದ ಮೇಲೆ ಶೇಕಡ 20 ರಂತೆ ಠೇವಣಿ ಇಡಬೇಕಾಗಿದ್ದು, ಅದರಂತೆ 2018–19ನೇ ಸಾಲಿನಲ್ಲಿ ಈ ಕೆಳಕಂಡ ವಿವರದಂತೆ ಆದಾಯ ತೆರಿಗೆ ಠೇವಣಿಯಾಗಿ ಇಟ್ಟಿರುತ್ತದೆ.

1	ಆದಾಯ ತೆರಿಗೆ ಶೇಕಡ 20 ರಂತೆ	29,12,621
2	ಎಜುಕೇಷನ್ ಸೆಸ್	87,379
	ಒಟ್ಟು ರೂ.	**30,00,000**

MENEZES & ASSOCIATES BANGALORE-94 CHARTERED ACCOUNTANTS

		ಮೇಲ್ಮನವಿ ತೀರ್ಮಾನವಾದ ನಂತರ ಈ ಮುಂಗಡ ಆದಾಯ ತೆರಿಗೆ ಠೇವಣಿಯನ್ನು ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಚುಕ್ತಾ ಮಾಡಕೊಳ್ಳತಕ್ಕದ್ದು.
		2) ದಿನಾಂಕ: 31-03-2020ಕ್ಕೆ ಆದಾಯ ತೆರಿಗೆ ಇಲಾಖೆಗೆ ಮುಂಗಡವಾಗಿ ಪಾವತಿಸಿದ ರೂ 71,39,466/- ಗಳಿಗೆ ವಿವರ ಹೀಗಿರುತ್ತದೆ.
		1 ಹಿಂದಿನ ಸಾಲಿನದು — 30,00,000 2 2019-20ನೇ ಸಾಲಿನ — 41,39,466 ಒಟ್ಟು ರೂ. — **71,39,466**
		ವರದಿ ಸಾಲಿನಲ್ಲಿ ಅಂದರೆ ದಿನಾಂಕ: 04-02-2020 ರಂದು ಆದಾಯ ತೆರಿಗೆ ಇಲಾಖೆಯಿಂದ 2017-18 (A-Y) ಕ್ಕೆ ಸಂಬಂಧಿಸಿದಂತೆ ಪ್ರಕರಣ ಸಂಖ್ಯೆ TBA/COM/F/17/2019-20/ 1024672660/(1) ರೂ. 2,06,97,332/- ಗಳ ಆದಾಯ ತೆರಿಗೆ ಬಾಕಿ ಬಾಬ್ತು ಪಾವತಿಸಲು ಸೂಚಿರುತ್ತದೆ. ಈ ಸಂಬಂಧ ಕಾನೂನುಗಾರರ ಸಲಹೆ ಪಡೆದು ಆದಾಯ ತೆರಿಗೆ ತಗಾದೆ ಮೇಲೆ ಶೇಕಡ 20 ರಂತೆ ರೂ. 41,39,466/- ಗಳನ್ನು ಮುಂಗಡವಾಗಿ ಪಾವತಿಸಿ ಮೇಲ್ಮನವಿ ಸಲ್ಲಿಸಿರುತ್ತಾರೆ.
2)	ಬ್ಯಾಂಕಿನವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ಉಳಿಕೆ ಶಿಲ್ಕು ತಾಳೆಯಾಗಿರುತ್ತದೆಯೆ?	ಬ್ಯಾಂಕುಗಳವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ / ಸಮನ್ವಯ ಪಟ್ಟಿಗೆ ಒಳಪಟ್ಟು ತಾಳೆಯಿರುತ್ತದೆ.
3)	ಸಾಲಾಖೈರಿಗೆ ಅಂತರವಿರುವ ಬ್ಯಾಂಕ್ ಖಾತೆಗಳ ಕುರಿತು ಸಮನ್ವಯ ಪಟ್ಟಿ ತಯಾರಿಸಿ ಬ್ಯಾಂಕ್ ಪಾಸು ಪುಸ್ತಕಕ್ಕೆ ತಾಳೆ ನೋಡಲಾಗಿದೆಯೇ	ಸಾಲಾಖೈರಿಗೆ ಅಂತರವಿರುವ ಬ್ಯಾಂಕ್ ಖಾತೆಗಳ ಕುರಿತು ಸಮನ್ವಯ ಪಟ್ಟಿ ತಯಾರಿಸಿದ್ದು ಬ್ಯಾಂಕ್ ಪಾಸ್ ಪುಸ್ತಕಕ್ಕೆ ತಾಳೆ ನೋಡಲಾಗಿದೆ.
4)	ಸಹಕಾರೇತರಬ್ಯಾಂಕುಗಳಲ್ಲಿ ವ್ಯವಹಾರ ನಡೆಸಲು ಸಹಕಾರ ಸಂಘಗಳ ಕಾಯಿದೆ ಕಲಂ 58 (ಇ) ಪ್ರಕಾರ ಮಂಜೂರಾತಿ ಪಡೆದಿದೆಯೇ ?	ಸಹಕಾರೇತರ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸಲು ಸಹಕಾರ ಸಂಘಗಳ ಕಾಯಿದೆ ಕಲಂ 58(ಇ) ಪ್ರಕಾರ ಮಂಜೂರಾತಿ ಪಡೆಯಲಾಗಿರುತ್ತದೆ.
5)	ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಿವರ	ಅಮಾನತ್ ಕೋ ಆಪರೇಟಿವ್ ಬ್ಯಾಂಕ್ ಖಾತೆ ನಿಷ್ಕ್ರಿಯವಾಗಿರುತ್ತದೆ.
6)	ವರದಿ ಸಾಲಿನಲ್ಲಿ ಸದರಿ ಖಾತೆಗಳ ಮೇಲೆ ಬಂದಿರುವ ಆದಾಯ	ವರದಿ ಸಾಲಿನಲ್ಲಿ ಸಂಸ್ಥೆಗೆ ಬ್ಯಾಂಕ್ ಠೇವಣಿಗಳ ಮೇಲೆ ಆದಾಯವಾಗಿ ರೂ. 2,06,722/-ಗಳ ಜಮಾ ಬಂದಿರುತ್ತದೆ.

(23) ಹೂಡಿಕೆಗಳು

ಷಡ್ಯೂಲ್ "ಕೆ" ಪ್ರಕಾರ ದಿನಾಂಕ 31-03-2020 ಕ್ಕೆ ಸಂಘವು ಹೊಂದಿರುವ ಹೂಡಿಕೆಗಳು ರೂ. 6,11,19,684-55

1)	ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೆ?	ಸಂಸ್ಥೆಯು ಹೂಡಿರುವ ಪ್ರತಿಯೊಂದು ಹೂಡಿಕೆಗೂ ಪ್ರತ್ಯೇಕವಾದ ಕುಳುವಾರು ತಯಾರಿಸಿ ವರದಿಗೆ ಲಗತ್ತಿಸಿದೆ.
2)	ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೆ?	ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿಕೊಂಡಿರುವುದಿಲ್ಲ.
3)	ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆಯೆ?	ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆ
4)	ಸದರಿ ಹೂಡಿಕೆಗಳು ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿದೆಯೇ?	ಸದರಿ ಹೂಡಿಕೆಗಳು ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿದ್ದು ವರದಿ ಸಾಲಿನಾಖೈರಿಗೆ 34,23,313/- ಗಳ ಲಾಭಾಂಶವನ್ನು ಪಡೆಯಲಾಗಿದೆ.
5)	ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ	ಸಂಘವು ಹೊಂದಿರುವ ಕೆಲ ನಿಧಿಗಳನ್ನು ಪೂರ್ಣವಾಗಿ ಪ್ರತ್ಯೇಕವಾಗಿ ಹೂಡಿರುವುದಿಲ್ಲ. ಕೂಡಲೇ ಈ ಬಗ್ಗೆ ಕ್ರಮ ಅಗತ್ಯವಾಗಿರುತ್ತದೆ. ಸಂಸ್ಥೆಯು ಹೊಂದಿಲ್ಲದ ಕೆಲ ನಿಧಿಗಳ ಬಗ್ಗೆ ಮೊಬಲಗುಗಳನ್ನು

MENEZES & ASSOCIATES BANGALORE-94 CHARTERED ACCOUNTANTS

ಪ್ರತ್ಯೇಕವಾಗಿ ಹೂಡಲಾಗಿದೆ.

ಹೂಡಿಕೆಗಳು : ರೂ. 6,11,19,684–55

ವಸತಿ ಮಹಾಮಂಡಲವು ಸ್ಥಾಪಿಸಿರುವ ನಿಧಿಗಳ ಬಾಬ್ತು ಹಣವನ್ನು ಹಾಗೂ ಮಹಾಮಂಡಲವು ಹೊಂದಿರುವ ಹಣವನ್ನು ವಿವಿಧ ಬ್ಯಾಂಕುಗಳಲ್ಲಿ ಮತ್ತು ವಿವಿಧ ಸಂಸ್ಥೆಗಳಲ್ಲಿ ಈ ಕೆಳಕಂಡಂತೆ ಹೂಡಿಕೆ ಮಾಡಲಾಗಿದೆ.

ಕ್ರ.ಸಂ	ಹೂಡಿಕೆ ವಿವರ	ಮೊಬಲಗು
1.	ಆಪದ್ಧನ ನಿಧಿ	2,63,53,000–00
2.	ಕರಡು ಸಾಲದ ನಿಧಿ	78,02,630–70
3.	ಕಛೇರಿ ಕಟ್ಟಡದ ನಿಧಿ	23,71,087–00
4.	ಸಾಮಾನ್ಯ ಕ್ಷೇಮ ನಿಧಿ	1,10,000–00
5.	ಲಾಭಾಂಶ ಸಮತೋಲನ ನಿಧಿ	19,23,999–91
6.	ಷೇರು ತೀರುವಳಿ ನಿಧಿ	29,31,966–00
7.	ಅಶಕ್ತ ಸದಸ್ಯರ ಸಹಾಯ ನಿಧಿ	1,25,378–94
8.	ಸಹಕಾರಿ ಸಂಸ್ಥೆಗಳಲ್ಲಿ ಷೇರು ಹೂಡಿಕೆ	11,00,000–00
9.	ಸಹಕಾರಿ ತರಬೇತಿ ಮತ್ತು ಪ್ರಚಾರ ನಿಧಿ	74,000–00
10.	ಸಿಬ್ಬಂದಿ ಖಾತರಿ ಠೇವಣಿ	20,600–00
11.	ಕರೆ, ಕಾಲಾವಧಿ ಠೇವಣಿ	42,32,000–00
12.	ಧಾರ್ಮಿಕ ಧತ್ತಿ ನಿಧಿ	3,82,000–00
13.	ಸಿಬ್ಬಂದಿ ಗ್ರೂಪ್ ಗ್ರಾಚ್ಯುಯಿಟಿ ನಿಧಿ	1,36,93,022–00
	ಒಟ್ಟು ರೂ.	**6,11,19,684–55**

1) **ಆಪದ್ಧನ ನಿಧಿ: ರೂ. 2,63,53,000/–**

ದಿನಾಂಕ: 31–3–2020ಕ್ಕೆ ಸಂಸ್ಥೆಯು ರೂ. 2,63,53,000/– ಗಳನ್ನು ವಿವಿಧ ಸಹಕಾರಿ ಬ್ಯಾಂಕುಗಳ ಆಪದ್ಧನ ಠೇವಣಿಯಲ್ಲಿ ತೊಡಗಿಸಲಾಗಿದೆಯೆಂದು ಆಸ್ತಿ–ಜವಾಬ್ದಾರಿ ತಃಖ್ತೆ ಆಸ್ತಿ ಕಡೆ ತೋರಿಸಿರುತ್ತದೆ. ಸಂಘವು ಆಪದ್ಧನ ನಿಧಿ ಹೂಡಿಕೆಗಳ ಮೇಲೆ ವರದಿ ಸಾಲಿನಲ್ಲಿ ರೂ. 14,72,441/– ಗಳ ಬಡ್ಡಿ ಜಮಾ ಬಂದಿರುತ್ತದೆ. ಸಂಘವು ಹೊಂದಿರುವ ಆಪದ್ಧನವನ್ನು ಅಪೆಕ್ಸ್ ಬ್ಯಾಂಕ್ ಕೇಂದ್ರ ಶಾಖೆಯಲ್ಲಿ ತೊಡಗಿಸಲಾಗಿರುತ್ತದೆ.

ಆಪದ್ಧನ ನಿಧಿ ಹೂಡಿಕೆ ಬಾಬ್ತು:

ದಿನಾಂಕ: 31–3–2020ಕ್ಕೆ ಸಂಸ್ಥೆಯು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಲ್ಲಿ ರೂ. 2,63,53,000/– ಗಳನ್ನು ಆಪದ್ಧನ ಖಾತೆಯಲ್ಲಿ ಪ್ರತ್ಯೇಕವಾಗಿ ಹೂಡಿದ್ದು ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ವಿವರ	ಮೊಬಲಗು
1.	ಸಾಲು ಪ್ರಾರಂಭಕ್ಕೆ ಕ.ರಾ.ಸ.ಅಪೆಕ್ಸ್ ಬ್ಯಾಂಕನಲ್ಲಿ ಇದ್ದ ಆಪದ್ಧನ ನಿಧಿ	1,94,54,000
2.	ವರದಿ ಸಾಲಿನಲ್ಲಿ ಆಪದ್ಧನ ನಿಧಿಯಲ್ಲಿ ಹೂಡಿದ ಬಾಬ್ತು	68,99,000
	ದಿ: 31–3–2020ಕ್ಕೆ ಆಪದ್ಧನ ನಿಧಿ ಮೊಬಲಗು	**2,63,53,000**

ಮೇಲ್ಕಂಡ ಬಾಬ್ತಿಗೆ ಅಪೆಕ್ಸ್ ಬ್ಯಾಂಕ್‌ನ ದೃಢೀಕರಣ ಪತ್ರ ಹಾಜರಿದ್ದು ತಾಳೆಯಿರುತ್ತದೆ.

2) **ಕರಡು ಸಾಲದ ನಿಧಿ: ರೂ. 78,02,630–70**

ವರದಿ ಸಾಲಾಖ್ಯೆರಿಗೆ ಸಂಸ್ಥೆಯು 27 ವಿವಿಧ ಠೇವಣಿ ಪತ್ರಗಳನ್ನು ವಿವಿಧ ಸಹಕಾರಿ ಬ್ಯಾಂಕುಗಳಲ್ಲಿ ಕರಡು ಸಾಲದ ನಿಧಿಯಲ್ಲಿ ರೂ. 78,02,630–70 ತೊಡಗಿಸಲಾಗಿರುತ್ತದೆ. ಈ ಬಾಬ್ತಿಗೆ ಕುಳುವಾರು ತಯಾರಿಸಿ ತಾಳೆ ಇರುತ್ತದೆ. ಅಪೆಕ್ಸ್ ಬ್ಯಾಂಕ್ ಒಂದರಲ್ಲೇ 19 ವಿವಿಧ ಖಾತೆಗಳಲ್ಲಿ ಹಣ ತೊಡಗಿಸಿದ್ದು, ಇದನ್ನು ಒಂದೇ ಖಾತೆಯಡಿ ತರಲು

MENEZES & ASSOCIATES BANGALORE-54 CHARTERED ACCOUNTANTS

	ಕ್ರಮಕೈಗೊಳ್ಳತಕ್ಕದ್ದು.
3)	**ಕಟ್ಟಡ ನಿಧಿ: ರೂ. 23,71,087/–** ಕಟ್ಟಡದ ನಿಧಿ ರೂ. 23,71,087/– ಗಳನ್ನು 7ವಿವಿಧ ಠೇವಣಿಗಳ ರೂಪದಲ್ಲಿ ವಿವಿಧ ಸಹಕಾರ ಬ್ಯಾಂಕ್‌ಗಳಲ್ಲಿ ಕಟ್ಟಡ ನಿಧಿಯಾಗಿ ತೊಡಗಿಸಿದ್ದು ಈ ಬಾಬ್ತಿಗೆ ಕುಳುವಾರು ಹಾಜರಿರುತ್ತದೆ.
4)	**ಸಾಮಾನ್ಯ ಕ್ಷೇಮ ನಿಧಿ (ಅಪೆಕ್ಸ್ ಬ್ಯಾಂಕ್): ರೂ. 1,10,000/–** ಸಾಮಾನ್ಯ ಕ್ಷೇಮ ನಿಧಿ ರೂ. 1,10,000/– ಗಳನ್ನು ಕಾಮನ್‌ಗುಡ್ ಫಂಡ್ ಶೀರ್ಷಿಕೆಯಡಿ ತೊಡಗಿಸಿದ್ದು ಈ ಬಾಬ್ತುಗೆ 2 ಪ್ರತ್ಯೇಕ ಠೇವಣಿಗಳಿರುತ್ತದೆ. ಪರಿಶೀಲನೆಗೆ ಎಲ್ಲಾ ಪತ್ರಗಳು ಹಾಜರಿರುತ್ತದೆ. ಹಿಂದಿನ ಸಾಲುಗಳಲ್ಲಿ ಜವಾಬ್ದಾರಿ ಕಡೆ ಸಾಮಾನ್ಯ ಕ್ಷೇಮ ನಿಧಿ ರೂ. 1,10,000/– ಗಳಿದ್ದು, ಸದರಿ ನಿಧಿಯು ಈಗ ಅಸ್ತಿತ್ವದಲ್ಲಿ ಇರದೆ ಇರುವುದರಿಂದ ಹೂಡಿಕೆಯಲ್ಲಿರುವ ಈ ಮೊಬಲಗನ್ನು ಸಹ ಖೈದು ಮಾಡಿಕೊಳ್ಳತಕ್ಕದ್ದು.
5)	**ಲಾಭಾಂಶ ಸಮತೋಲನ ನಿಧಿ: ರೂ. 19,23,999–91** ಸಂಸ್ಥೆಯು ರೂ. 19,23,999–91 ಗಳನ್ನು ಲಾಭಾಂಶ ಸಮತೋಲನಾ ನಿಧಿಯ ಶೀರ್ಷಿಕೆಯಡಿ ಹೂಡಿರುತ್ತದೆ. ಈ ಬಾಬ್ತಿನ ಕುಳುವಾರು ತಯಾರಿಸಿ ವಿವಿಧ ಬ್ಯಾಂಕುಗಳ ಒಟ್ಟು 9 ಠೇವಣಿ ಪತ್ರಗಳು ಪರಿಶೀಲಿಸಿದ್ದು ತಾಳೆ ಇರುತ್ತದೆ. ಸದರಿ ಬಾಬ್ತು ಸಹ ವಿವಿಧ ಸಹಕಾರ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಿರುತ್ತಾರೆ.
6)	**ಷೇರು ತೀರುವಳಿ ನಿಧಿ (ಅಪೆಕ್ಸ್ ಬ್ಯಾಂಕ್): ರೂ. 29,31,966/–** ದಿನಾಂಕ: 31–3–2020ಕ್ಕೆ ಷೇರು ತೀರುವಳಿ ನಿಧಿಯಲ್ಲಿ ಸಂಸ್ಥೆಯು ರೂ. 29,31,966/– ಗಳನ್ನು ತೊಡಗಿಸಿದ್ದು, ಈ ಬಾಬ್ತಿನ ಕುಳುವಾರು ತಯಾರಿಸಿ ವಿವಿಧ 12 ಪ್ರಕರಣಗಳಿಂದ ಕೂಡಿದ್ದು, ಒಟ್ಟು ಮೊತ್ತಕ್ಕೆ ತಾಳೆ ಇರುತ್ತದೆ. ಈ ಬಾಬ್ತು ಸಹ ವಿವಿಧ ಸಹಕಾರ ಬ್ಯಾಂಕುಗಳಲ್ಲಿ ತೊಡಗಿಸಿರುತ್ತಾರೆ. ಹಿಂದಿನ ಸಾಲಿನಿಂದಲೂ ಯಥಾವತ್ತಾಗಿ ಮುಂದುವರೆದಿರುತ್ತದೆ.
7)	**ಅಶಕ್ತ ಸದಸ್ಯರ ಸಹಾಯ ನಿಧಿ (ಅಪೆಕ್ಸ್ ಬ್ಯಾಂಕ್):ರೂ. 1,25,378–94** ದಿನಾಂಕ: 31–3–2020ಕ್ಕೆ ಷೇರು ತೀರುವಳಿ ನಿಧಿಯಲ್ಲಿ ಸಂಸ್ಥೆಯು ರೂ. 1,25,378–94 ಗಳನ್ನು ತೊಡಗಿಸಿದ್ದು, ಈ ಬಾಬ್ತಿನ ಕುಳುವಾರು ತಯಾರಿಸಿ ವಿವಿಧ 3 ಪ್ರಕರಣಗಳಿಂದ ಕೂಡಿದ್ದು, ಒಟ್ಟು ಮೊತ್ತಕ್ಕೆ ತಾಳೆ ಇರುತ್ತದೆ.
8)	**ಕರೆ/ಕಾಲಾವಧಿ ಠೇವಣಿ : 42,32,000/–** ದಿನಾಂಕ: 31–3–2020ಕ್ಕೆ ಕರೆ/ ಕಾಲಾವಧಿ ಠೇವಣಿ ರೂ. 42,32,000/– ಗಳಿದ್ದು ಸದರಿ ಬಾಬ್ತಿಗೆ ಬ್ಯಾಂಕ್ ದೃಢೀಕರಣ ಹಾಜರಿದ್ದು ತಾಳೆಯಿರುತ್ತದೆ. ಎರಡು ಪ್ರಕರಣಗಳಿಂದ ಕೂಡಿದ್ದ ಈ ಬಾಬ್ತು ಅಪೆಕ್ಸ್ ಬ್ಯಾಂಕ್, ಕೇಂದ್ರ ಕಛೇರಿಯಲ್ಲಿ ತೊಡಗಿಸಲಾಗಿರುತ್ತದೆ.
9)	**ಸಹಕಾರಿ ತರಬೇತಿ ಮತ್ತು ಪ್ರಚಾರ ನಿಧಿ (ಅಪೆಕ್ಸ್ ಬ್ಯಾಂಕ್): ರೂ. 74,000/–** ಸಂಸ್ಥೆಯು ರೂ. 74,000/– ಸಹಕಾರಿ ತರಬೇತಿ ಮತ್ತು ಪ್ರಚಾರ ನಿಧಿಯಲ್ಲಿ ಅಪೆಕ್ಸ್ ಬ್ಯಾಂಕ್, ಕೇಂದ್ರ ಕಛೇರಿಯಲ್ಲಿ ದಿನಾಂಕ: 31–3–2020ಕ್ಕೆ ತೊಡಗಿಸಲಾಗಿರುತ್ತದೆ. ಈ ಬಾಬ್ತು ಹಿಂದಿನ ಸಾಲಿನಿಂದಲೂ ಮುಂದುವರೆದಿರುತ್ತದೆ.
10)	**ಸಿಬ್ಬಂದಿ ಖಾತರಿ ಠೇವಣಿ : ರೂ. 20,600/–** ಸಿಬ್ಬಂದಿ ಖಾತರಿ ಠೇವಣಿ ರೂ. 20,600/– ಗಳನ್ನು ಅಪೆಕ್ಸ್ ಬ್ಯಾಂಕ್ ಹಾಗೂ ಕೈಗಾರಿಕ ಸಹಕಾರಿ ಬ್ಯಾಂಕ್‌ನಲ್ಲಿ ತೊಡಗಿಸಿದ್ದು, (3) ಠೇವಣಿಗಳು ಈ ಬಾಬ್ತಿಗೆ ದೃಢೀಕರಣಗಳು ಪರಿಶೀಲನೆಗೆ ಹಾಜರಿರುತ್ತದೆ.
11)	**ಧಾರ್ಮಿಕ ಧತ್ತಿ ನಿಧಿ: ರೂ. 3,82,000/–** ಸಂಸ್ಥೆಯು ಧಾರ್ಮಿಕ ದತ್ತಿ ನಿಧಿಯನ್ನು ಅಪೆಕ್ಸ್ ಬ್ಯಾಂಕ್‌ನಲ್ಲಿ 3 ಪ್ರತ್ಯೇಕ ಠೇವಣಿಗಳಲ್ಲಿ ರೂ. 3,82,000/– ಗಳನ್ನು ತೊಡಗಿಸಲಾಗಿರುತ್ತದೆ.

MENEZES & ASSOCIATES BANGALORE-94

12) **ಸಹಕಾರಿ ಸಂಸ್ಥೆಗಳಲ್ಲಿ ಷೇರು ಹೂಡಿಕೆ: ರೂ. 11,00,000/–**

ಮಹಾಮಂಡಲವು ವಿವಿಧ ಸಹಕಾರ ಸಂಸ್ಥೆಗಳಲ್ಲಿ ಒಟ್ಟು 9 ಪತ್ರಗಳ ರೀತ್ಯಾ ಒಟ್ಟು ರೂ. 11,00,000/– ಗಳನ್ನು ಷೇರು ರೂಪದಲ್ಲಿ ತೊಡಗಿಸಿದ್ದು, ಪರಿಶೀಲನೆಗೆ ಷೇರು ಪತ್ರಗಳನ್ನು ಹಾಜರುಪಡಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ. ವರದಿ ಸಾಲಿನಲ್ಲಿ ಷೇರುಗಳ ಮೇಲೆ ರೂ. 61,250/– ಗಳು ಡಿವಿಡೆಂಡ್ ರೂಪದಲ್ಲಿ ಸಂಸ್ಥೆಗೆ ಜಮಾ ಆಗಿರುತ್ತದೆ. ಸಂಘವು ವಿವಿಧ ಸಂಸ್ಥೆಗಳಲ್ಲಿ ಹೂಡಿರುವ ಷೇರು ಮತ್ತು ಬಾಕಿ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಕುಳುವಾರು ತಯಾರಿಸಿದ್ದು ತಾಳೆ ಇರುತ್ತದೆ.

ಕ್ರ.ಸಂ	ಸಂಸ್ಥೆಯ ಹೆಸರು	ಮೊತ್ತ
1.	ಕ.ರಾ.ಸ. ಅಪೆಕ್ಸ್ ಬ್ಯಾಂಕ್, ಕೇಂದ್ರ ಕಛೇರಿ	10,00,000–00
2.	ಬಿ.ಡಿ.ಸಿ.ಸಿ. ಬ್ಯಾಂಕ್	25,000–00
3.	ರಾಷ್ಟ್ರೀಯ ಸಹಕಾರಿ ವಸತಿ ಮಹಾಮಂಡಲ	25,000–00
4.	ಕ.ರಾ. ವಿಮಾ ಸಹಕಾರ ಸಂಘ ನಿ, ಬೆಂಗಳೂರು	50,000–00
	ಒಟ್ಟು ರೂ.	**11,00,000–00**

13) **ಸಿಬ್ಬಂದಿ ಗ್ರೂಪ್ ಗ್ರಾಚ್ಯುಯಿಟಿ ನಿಧಿ: ರೂ. 1,36,93,022/–**

ಮಹಾಮಂಡಲದ ಸಿಬ್ಬಂದಿಗೆ ನಿವೃತ್ತಿ ಸಂದರ್ಭದಲ್ಲಿ ಪಾವತಿಸಬೇಕಾದ ಗ್ರಾಚ್ಯುಯಿಟಿ ಪಾವತಿಗೆ ಭಾರತೀಯ ಜೀವ ವಿಮಾ ನಿಗಮದಲ್ಲಿ ಸಿಬ್ಬಂದಿ ಗ್ರೂಪ್ ಗ್ರಾಚುಯಿಟಿ ಕ್ಯಾಷ್ ಅಕ್ಯುಮಲೇಷನ್ ಯೋಜನೆ ಅಡಿಯಲ್ಲಿ ಹಣವನ್ನು ತೊಡಗಿಸಲಾಗಿದೆ. ಸದರಿ ಯೋಜನೆ ಅಡಿಯಲ್ಲಿ ಸಿಬ್ಬಂದಿ ವೇತನ ಮತ್ತು ಸಂಖ್ಯಾಬಲಕ್ಕೆ ಅನುಗುಣವಾಗಿ ವಾರ್ಷಿಕ ಕಂತನ್ನು ಪಾವತಿಸಲಾಗುತ್ತಿದೆ. ಸಾಲಾಂತ್ಯಕ್ಕೆ ಸದರಿ ಖಾತೆಯಲ್ಲಿ ರೂ. 1,36,93,022/– ಗಳಿದ್ದು, ಇದು ಜೀವ ವಿಮಾ ಸಂಸ್ಥೆ ಮಾಡಿದ ದೃಢೀಕರಣಕ್ಕೆ ತಾಳೆ ಇರುತ್ತದೆ. ಇಷ್ಟೇ ಮೊಬಲಗು ಜವಾಬ್ದಾರಿ ಕಡೆ ಸಹ ಮುಂದುವರೆದಿರುತ್ತದೆ.

ಹೂಡಿಕೆಗಳ ಮೇಲೆ ಬಂದ ಬಡ್ಡಿಯನ್ನು ಲಾಭಕ್ಕೆ ಪರಿಗಣಿಸಲಾಗಿದೆ. ವರದಿ ಸಾಲಿಗೆ ಹೂಡಿಕೆಗಳ ಮೇಲೆ ರೂ. 34,23,313/– ಗಳ ಆದಾಯ ಸಂಸ್ಥೆಗೆ ಪ್ರಾಪ್ತವಾಗಿರುತ್ತದೆ. ಹೂಡಿಕೆ ರಿಜಿಸ್ಟರನ್ನು ಇಡಲಾಗಿದೆ. ಆದರೆ ಇದರಲ್ಲಿ ಹೂಡಿಕೆಗಳ ಮೇಲೆ ಬಂದ ಬಡ್ಡಿ ವಿವರಗಳನ್ನು ಬರೆದಿದ್ದರೂ ಹೂಡಿಕೆಗಳ ಮೇಲೆ ಕಾಲಕಾಲಕ್ಕೆ ಪ್ರಾಪ್ತವಾಗಬೇಕಾದ ಬಡ್ಡಿಯನ್ನು ಲೆಕ್ಕ ಹಾಕಿ, ಸಂದಾಯವಾದ ಬಡ್ಡಿಗೆ ಹೋಲಿಕೆ ಮಾಡಿ ಸರಿಯಿರುವ ಬಗ್ಗೆ ದೃಡಪಡಿಸಿಕೊಳ್ಳುವ ಬಗ್ಗೆ ಕ್ರಮ ಅಗತ್ಯವಾಗಿರುತ್ತದೆ.

ವಿವಿಧ ಸಹಕಾರ ಸಂಸ್ಥೆಗಳಲ್ಲಿ ಸಂಸ್ಥೆಯ ಹಣವನ್ನು ಹೂಡಿಕೆ ಮಾಡುವ ಹಾಗೂ ನವೀಕರಿಸುವ ಸಂದರ್ಭದಲ್ಲಿ ಇಂತಹ ಹೂಡಿಕೆಗಳಿಂದ ಗಳಿಸುವ ಆದಾಯದ ಜೊತೆಗೆ ಸಂಸ್ಥೆಗಳ ಆರ್ಥಿಕ ಸದೃಢತೆಯನ್ನು ಪರಿಗಣಿಸಿ ಹೂಡಿಕೆ ಮಾಡುವುದು ಸಂಸ್ಥೆಯ ಹಿತದೃಷ್ಟಿಯಿಂದ ಅವಶ್ಯಕವಾಗಿರುತ್ತದೆ. ಹೂಡಿಕೆ ರಿಜಿಸ್ಟರ್ ಸಂಸ್ಥೆಯಲ್ಲಿ ಬರೆಯಲ್ಪಟ್ಟಿರುತ್ತದೆ.

(24) ಸದಸ್ಯರ ಸಾಲ ಮತ್ತು ಮುಂಗಡಗಳು :

1	ಉಪ ನಿಯಮಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಬಗ್ಗೆ ವಿಮರ್ಶೆ.	ಸಂಸ್ಥೆಯು ಉಪ ನಿಯಮ 56ರಂತೆ ಮಹಾಮಂಡಲದ ಉದ್ದೇಶಗಳಿಗೆ ಎಲ್ಲಾ ರೀತಿಯ ಸದಸ್ಯರಿಗೆ ಸಾಲವನ್ನು ನೀಡಬಹುದಾಗಿರುತ್ತದೆ. ಉಪ ನಿಯಮ 56(1) ರಂತೆ ಆಡಳಿತ ಮಂಡಳಿಯು ಕಾಲಕಾಲಕ್ಕೆ ಸಾಲದ ನಿಯಮಗಳನ್ನು ರಚಿಸಿಕೊಳ್ಳಬೇಕಾಗಿದ್ದು, ಹಿಂದಿನ ಸಾಲುಗಳಲ್ಲಿ ನಡೆದ ಆಡಳಿತ ಮಂಡಳಿ ಸಭೆಯ ನಡವಳಿಕೆಯಂತೆ ವಸತಿ ಮಹಾಮಂಡಲವು ಮಂಜೂರು ಮಾಡುವ ಸಾಲಗಳ ಬಗ್ಗೆ ಹೆಚ್ಚಿಸುವ ಹಾಗೂ ಮರುಪಾವತಿ ನಿಗದಿಪಡಿಸಿರುವ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಮಿತಿ ಹಾಗೂ ಅವಧಿಗಳನ್ನು ನಿಗಧಿಪಡಿಸಿಕೊಂಡಿರುವುದನ್ನು ಗಮನಿಸಲಾಗಿದೆ. ಸಂಸ್ಥೆಯು ತಾನು ಪಡೆದ ಸಾಲದ ಬಡ್ಡಿ ದರಕ್ಕಿಂತ ಶೇಕಡ 3ಕ್ಕಿಂತ

MENEZES & ASSOCIATES BANGALORE-94 CHARTERED ACCOUNTANTS

		ಹೆಚ್ಚಾಗಿ ಸದಸ್ಯರಿಗೆ ವಿಧಿಸಬಾರದು ಹಾಗೂ ಸಾಲದ ಅವಧಿಯು 10 ವರ್ಷಕ್ಕಿಂತ ಹೆಚ್ಚು ಇರಬಾರದು
2	ವರದಿ ಸಾಲಿನಲ್ಲಿ ಆದ ಪ್ರತಿಯೊಂದು ಸಾಲದ ವ್ಯವಹಾರಗಳ ಬಗ್ಗೆ ಅಂಕಿ ಅಂಶಗಳ ವಿವರ ನೀಡುವುದು.	ದಿನಾಂಕ: 31-03-2020ಕ್ಕೆ ಸಂಸ್ಥೆಯು ಸದಸ್ಯರಿಂದ ರೂ. 54,02,43,578-08ಗಳ ವಿವಿಧ ಸಾಲಗಳು ವಸೂಲಾಗಬೇಕಾಗಿದ್ದು, ಅವುಗಳ ಹಂಚಿಕೆ, ವಸೂಲಿ ಹಾಗೂ ಬಾಕಿ ಮೊಬಲಗುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಕ್ರ.ಸಂ	ವಿವರ	ಸಾಲು ಪ್ರಾರಂಭದ ಬಾಕಿ	ಪ್ರಸಕ್ತ ಸಾಲಿನಲ್ಲಿ		31-3-2020 ರ ಅಂತ್ಯಕ್ಕೆ
			ಹಂಚಿಕೆ	ವಸೂಲಿ	
i)	ಜೀವ ವಿಮಾ ಸಾಲ	51,02,16,503-44	2,33,26,000-00	7,59,37,916.70	45,76,04,586-74
ii)	ರಾಷ್ಟ್ರೀಯ ವಸತಿ ಬ್ಯಾಂಕ್ ಸಾಲ	47,84,646-16	-	7,53,484-60	40,31,161-56
iii)	ಅಭಿವೃದ್ಧಿ/ಬಡಾವಣೆ ಸಾಲ	4,77,97,470-29	84,10,000-00	97,00,064-79	4,65,07,405.50
iv)	ನಿವೇಶನ ಖರೀದಿ ಸಾಲ (ಎಲ್ಐಸಿ)	2,66,30,893-66	49,44,395-00	84,19,238-68	2,31,56,049-98
v)	ಅಲ್ಪಾವಧಿ ಸಾಲ (ಎಲ್ಐಸಿ)	4,12,239-45	-	-	4,12,239-45
vi)	ಸಿಬ್ಬಂದಿ ಗೃಹ ನಿರ್ಮಾಣ ಸಾಲ	82,24,331-79	15,00,000-00	11,91,079-05	85,33,252-74
vii)	ಸಿಬ್ಬಂದಿ ವಾಹನ ಸಾಲ	1,11,257-02	-	50,544-67	60,712-35
viii)	ಸಾಮಾನ್ಯ ಸಾಲ	4,87,828-21	-	-	4,87,828-21
ix)	ಅಲ್ಪ ವರಮಾನದ ಸಾಲ	2,39,545-22	-	-	2,39,545-22
x)	ಮಧ್ಯಮ ವರಮಾನದ ಸಾಲ	18,530-44	-	-	18,530-44
xi)	ಡಿಬೆಂಚರ್ ಸಾಲ	938-97	-	-	938-97
	ಒಟ್ಟು ರೂ.	**59,89,24,184-65**	**3,81,80,395-00**	**9,60,52,328-49**	**54,10,52,251-16**

4	ಆಡಳಿತ ಮಂಡಳಿಯವರು ಪಡೆದಿರುವ ಸಾಲ ಸುಸ್ತಿ / ಚಾಲ್ತಿಯಲ್ಲಿರುವ ಬಗ್ಗೆ.	ಆಡಳಿತ ಮಂಡಳಿಯ ಯಾರೊಬ್ಬ ಸದಸ್ಯರು ಸಾಲ ಪಡೆಯದ ಕಾರಣ ಸುಸ್ತಿ ಪ್ರಶ್ನೆ ಉದ್ಭವಿಸುವುದಿಲ್ಲ.
5	ಸಾಲದ ಕುಳುವಾರು ತ:ಖ್ತೆಗಳು ಅಸ್ತಿ ಜವಾಬ್ದಾರಿ ತ:ಖ್ತೆಗೆ ತಾಳೆ ಇರುವ ಬಗ್ಗೆ.	ಸಾಲದ ಕುಳುವಾರು ತಃಖ್ತೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಸಾಲಗಳಲ್ಲಿನ ಕುಳುವಾರು ವ್ಯತ್ಯಾಸವಿರುತ್ತದೆ ಹಾಗೂ ಇನ್ನು ಕೆಲವು ಸಾಲಗಳಿಗೆ ಕುಳುವಾರು ಇರುವುದಿಲ್ಲ.
		1) ಜೀವ ವಿಮಾ ಸಂಸ್ಥೆ ಸಾಲ ಕುಳುವಾರು ರೂ. 8,08,673-08 ಗಳು ಹೆಚ್ಚಿಗೆ ಇರುತ್ತದೆ.
		2) ಸಾಮಾನ್ಯ ಹಾಗೂ ಗ್ರಾಮಾಂತರ ಸಾಲ ರೂ. 3,374-49 ಗಳು ಕುಳುವಾರು ಕಡಿಮೆ ಇರುತ್ತದೆ.
		3) ಡಿಬೆಂಚರ್ ಸಾಲಕ್ಕೆ ಕುಳುವಾರು ಹಾಜರಿರುವುದಿಲ್ಲ.
		4) ಮಧ್ಯಮ ವರಮಾನದ ಸಾಲಕ್ಕೆ ಕುಳುವಾರು ಇರುವುದಿಲ್ಲ.
		5) ಅಲ್ಪ ವರಮಾನದ ಸಾಲಕ್ಕೆ ಕುಳುವಾರು ಇರುವುದಿಲ್ಲ.
6	ಆಧಾರ ಮತ್ತು ಆಧಾರ ರಹಿತ ಸಾಲಗಳ ಪ್ರಮಾಣವನ್ನು ವಿಶ್ಲೇಷಿಸುವುದು.	ಸಂಸ್ಥೆಯು ತಾನು ನೀಡುತ್ತಿರುವ ಎಲ್ಲಾ ಸಾಲಗಳು ಆಧಾರ ಪಡೆದ ಸಾಲಗಳಾಗಿರುತ್ತದೆ. ಆದರೆ ಹಿಂದಿನಿಂದಲೂ ಕುಳುವಾರುಗಳಿಲ್ಲದೇ ಹಾಗೂ ಯಾವುದೇ ದಾಖಲಾತಿಗಳಿಲ್ಲದೇ ಮುಂದುವರೆಯುತ್ತಿರುವ ನಾಲ್ಕು ವಿವಿಧ ಸಾಲಗಳ ಒಟ್ಟು ಮೊತ್ತ ರೂ. 2,62,389-12ಗಳು ಆಧಾರ ರಹಿತ ಸಾಲವೆಂದ

MENEZES & ASSOCIATES BANGALORE-94 CHARTERED ACCOUNTANTS

		ಪರಿಗಣಿಸಬೇಕಾಗಿರುತ್ತದೆ. ಇದರಿಂದಾಗಿ ಆಧಾರ ರಹಿತ ಸಾಲದ ಪ್ರಮಾಣ ಶೇಕಡಾ 0.04 ರಷ್ಟಿದ್ದು, ಆಧಾರ ಸಾಲ 99.96 ರಷ್ಟಿರುತ್ತದೆ.
7	ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ನಮೂದಿಸುವುದು.	ಅರ್ಜಿಗಳಲ್ಲಿ ಗುರುತರವಾದ ನ್ಯೂನತೆಗಳು ಕಂಡುಬಂದಿರುವುದಿಲ್ಲ.
8	ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ / ತಪ್ಪು ಇರುವ ಬಗ್ಗೆ ಉಲ್ಲೇಖಿಸುವುದು.	ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿದ್ದು, ಅವುಗಳು ಸರಿ ಇರುವ ಬಗ್ಗೆ ಖಾತರಿ ಪಡಿಸಿಕೊಳ್ಳಲಾಗಿದೆ.
9	ಒಟ್ಟು ಸದಸ್ಯರ ಸಂಖ್ಯೆಗೆ ಸಂಘದ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇ.ವಾರು ಲೆಕ್ಕಾಚಾರ ಹಾಕಿ ವಿಮರ್ಶಿಸುವುದು.	ಸಂಸ್ಥೆಗೆ, ಪ್ರಾಥಮಿಕ ಗೃಹ ನಿರ್ಮಾಣ ಸಹಕಾರ ಸಂಘಗಳು ಸದಸ್ಯರಾಗಿದ್ದು, ಅವರ ಮುಖಾಂತರ ಸಂಘಗಳ ಸದಸ್ಯರಿಗೆ ಹಾಗೂ ನಗರ ಪ್ರದೇಶದ ಬಿಡಿ ವ್ಯಕ್ತಿಗಳಿಗೆ ನೇರ ಸಾಲ ನೀಡಲಾಗುತ್ತಿರುವುದರಿಂದ ಈ ಪ್ರಶ್ನಾವಳಿಗೆ ವಿಶ್ಲೇಷಣೆ ಇರುವುದಿಲ್ಲ.
10	ರೂ.20,000/– ಕ್ಕಿಂತ ಹೆಚ್ಚಿನ ಸಾಲದ ಮೊತ್ತಗಳನ್ನು ನಗದು ಪಾವತಿಸಿದ್ದಲ್ಲಿ ಉದಾಹರಣೆಯೊಂದಿಗೆ ವಿವರಿಸುವುದು.	ರೂ. 20,000/– ಕ್ಕಿಂತ ಹೆಚ್ಚಿನ ಸಾಲದ ಮೊತ್ತಗಳನ್ನು ನಗದು ಪಾವತಿಸಿರುವ ಉದಾಹರಣೆಗಳು ಇರುವುದಿಲ್ಲ.
11	ಆಯ್ದ ಪ್ರಕರಣಗಳಲ್ಲಿ ಸಾಲದ ಖಾತೆಯಲ್ಲಿರುವ ಬಾಕಿಯನ್ನು ಸಾಲಗಾರರಿಂದ ಖಚಿತ ಪಡಿಸಿಕೊಳ್ಳುವುದು.	ಸಂಸ್ಥೆಯ ಲೆಕ್ಕಪರಿಶೋಧನಾ ವೇಳೆಯಲ್ಲಿ ವೈಯುಕ್ತಿಕ ಸಾಲ ಪರಿಶೀಲನೆಯಂದು 20 ಜನರಿಗೆ ಸೂಚನಾ ಪತ್ರ ನೀಡಿದ್ದು, ಈ ಪೈಕಿ 11 ಜನರು ಹಾಜರಾಗಿ ತಮ್ಮ ಬಾಕಿಯನ್ನು ಒಪ್ಪಿಕೊಂಡಿರುತ್ತಾರೆ.
12	ಸಂಘದಲ್ಲಿ ಸಾಲಕ್ಕೆ ಅರ್ಜಿ ಸದಸ್ಯರ ರಿಜಿಸ್ಟರ್ ಇಡಲಾಗಿದೆಯೇ? ವರದಿ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಮನಿಸಿ ವಿಶ್ಲೇಶಿಸುವುದು.	ಸಾಲು ಪ್ರಾರಂಭಕ್ಕೆ ಸಂಸ್ಥೆಗೆ ಸಾಲ ಬಯಸಿ ಅರ್ಜಿ ಸಲ್ಲಿಸುವವರ ಸಂಖ್ಯೆ 35 ಇದ್ದು, ಈ ಪೈಕಿ ವರದಿ ಸಾಲಿನಲ್ಲಿ ಮತ್ತೆ ನೂತನವಾಗಿ 54 ಅರ್ಜಿಗಳು ಬಂದಿರುತ್ತದೆ. ಒಟ್ಟಾರೆ 71 ಅರ್ಜಿ 2019–20ನೇ ಸಾಲಿನಲ್ಲಿ ವಿಲೇವಾರಿಯಾಗಿದ್ದು, ಉಳಿದ 18 ಅರ್ಜಿಗಳು 31–3–2020ಕ್ಕೆ ಬಾಕಿಯಾಗಿ ನಿಂತಿರುತ್ತವೆ.

ಸಾಲಗಳಲ್ಲಿ ಗಮನಿಸಲಾದ ನ್ಯೂನತೆಗಳು:

[ಸಾಲ ನೀಡಿಕೆಯಲ್ಲಿ ಗಮನಿಸಲಾದ ನ್ಯೂನತೆ, ಉಪನಿಯಮಕ್ಕೆ ವಿರುದ್ಧವಾಗಿ ನೀಡಲಾಗಿರುವ ಸಾಲ, ಜೋಡಣೆ ಷೇರು ಪಡೆಯದೇ ಇರುವ ಬಗ್ಗೆ, ಬಡ್ಡಿ ಆಕರಣೆ ಸರಿ ಇಲ್ಲದ ಬಗ್ಗೆ ಪೂರ್ಣ ವಿಮರ್ಷೆ ನೀಡುವುದು.]

	ಸದಸ್ಯರ ಸಾಲ ಮಂಜೂರಾತಿಯಲ್ಲಿ ಕಂಡು ಬಂದ ನ್ಯೂನತೆಗಳು ಹಾಗೂ ಸಲಹೆಗಳು
1	ಸಾಲ ಮಂಜೂರಾತಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿಯವರು ಗುಣಮಟ್ಟದ ಸಾಲ ಮಂಜೂರಾತಿಗೆ (Quality lending) ತೆಗೆದುಕೊಂಡಿರುವ ಕ್ರಮ ಮುಂದುವರೆಸುವುದು. ಪ್ರಮುಖವಾಗಿ ಸಾಲ ಪಡೆಯುವವರ ಮರುಪಾವತಿ ಸಾಮರ್ಥ್ಯ ಪರಿಗಣಿಸಿ ಸಾಲ ಮಂಜೂರು ಮಾಡುವುದು. ಪ್ರಥಮವಾಗಿ ಮರುಪಾವತಿ ಸಾಮರ್ಥ್ಯ ನಂತರ ಸಾಲದ ಭದ್ರತೆಗೆ ಆದ್ಯತೆಯಾಗಬೇಕಾಗಿರುತ್ತದೆ.
2	ಗೃಹ ನಿರ್ಮಾಣ ಸಂಘಗಳ ಮೂಲಕ ವ್ಯಕ್ತಿಗಳಿಗೆ ಸಾಲ ನೀಡಲಾಗುತ್ತಿದ್ದು, ವ್ಯಕ್ತಿಗಳು ಸಂಘಕ್ಕೆ ನಿಯಮಿತವಾಗಿ ಸಾಲ ಮರುಪಾವತಿಸಿದ್ದರೂ ಸಹ ಸಂಘದ ಹಂತದಲ್ಲಿ ಕೆಲವು ಸಹಕಾರ ಸಂಘಗಳು ಮರುಪಾವತಿಸಿದ ಹಣವನ್ನು ಮಹಾಮಂಡಳಕ್ಕೆ ವರ್ಗಾಯಿಸದೆ ದುರ್ಬಳಕೆ ಮಾಡಿಕೊಳ್ಳುತ್ತಿರುವ ಕಾರಣ, ಮಹಾಮಂಡಳದಿಂದ ನೀಡಿದ ಸಾಲಗಳು ಸುಸ್ತಿಯಾಗಲು ಕಾರಣವಾಗಿರುತ್ತದೆ. ಇದನ್ನು ತಪ್ಪಿಸಲು ವ್ಯಕ್ತಿಗಳಿಗೆ ಬ್ಯಾಂಕ್ ಮೂಲಕ ಅಥವಾ ಚೆಕ್ ಮೂಲಕ ಸಾಲದ ಕಂತುಗಳನ್ನು ಪಾವತಿಸಲು ಕಡ್ಡಾಯ ಮಾಡಿ ಸಂಘಗಳಿಗೆ ನೀಡಬೇಕಾದ ಶೇಕಡ ಒಂದರ ಮಾರ್ಜಿನ್ ಹಣವನ್ನು ಮಹಾಮಂಡಲದಿಂದ ನೀಡುವ ವ್ಯವಸ್ಥೆಯನ್ನು ಜಾರಿಗೆ ತರುವುದು. ಹಾಗೂ ಮಹಾಮಂಡಲದ ಸಿಬ್ಬಂದಿ ನಿಯಮಿತವಾಗಿ ಸಂಘಗಳಿಗೆ ಭೇಟಿ ನೀಡಿ ಲೆಕ್ಕಪತ್ರಗಳನ್ನು ಪರಿಶೀಲಿಸಿ ವ್ಯಕ್ತಿಗಳಿಂದ ವಸೂಲಾದ ಹಣ ಮಹಾಮಂಡಲಕ್ಕೆ ವರ್ಗಾಯಿಸಿರುವ ಬಗ್ಗೆ ದೃಢಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ.
3.	ಸಾಲ ಮಂಜೂರಾತಿಗೆ ಮೊದಲು ಸಂಸ್ಥೆಯ/ಸಿಬ್ಬಂದಿ/ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸುತ್ತಿದ್ದು, ಇವರು ಸಲ್ಲಿಸಿರುವ ಅರ್ಜಿಯಲ್ಲಿ ನಿವೇಶನದ ಮತ್ತು ಸಾಲಗಾರರ ಅಸ್ತಿತ್ವದ ಬಗ್ಗೆ ಮಾತ್ರ ವಿವರಗಳಿರುತ್ತವೆ. ಬಹು ಮುಖ್ಯವಾಗಿ ಅರ್ಜಿದಾರರು ಘೋಷಿಸಿಕೊಂಡಿರುವ ಆದಾಯದ ನೈಜತೆಯ ಬಗ್ಗೆ ಪರಿಶೀಲಿಸಿ ವರದಿ ಮಾಡುತ್ತಿರುವುದಿಲ್ಲ.

MENEZES & ASSOCIATES BANGALORE-94 CHARTERED ACCOUNTANTS

(೨೯) ಸುಸ್ತಿ ಸಾಲಗಳ ವಿವರ :

1	ಸುಸ್ತಿ ಸಾಲದ ಮೊತ್ತ	ರೂ. 2,70,36,414/–
2	ಒಟ್ಟು ಸಾಲಕ್ಕೆ ಸುಸ್ತಿ ಸಾಲದ ಪ್ರತಿಶತ ಪ್ರಮಾಣ	ದಿನಾಂಕ: 31–3–2020ರ ಅಂತ್ಯಕ್ಕೆ ಸುಸ್ತಿ ಸಾಲಗಳ ಪ್ರಮಾಣ ಶೇಕಡಾ 5 ರಷ್ಟಿರುತ್ತದೆ. ಕಳೆದ ಸಾಲಿನಲ್ಲಿ ಇದರ ಪ್ರಮಾಣ ಶೇಕಡಾ 4.99 ರಷ್ಟಿರುತ್ತದೆ. ದಿನಾಂಕ: 31–3–2020ಕ್ಕೆ 6 ವರ್ಷಕ್ಕಿಂತ ಮೇಲ್ಪಟ್ಟ ಸಾಲಗಳು 16 ಪ್ರಕರಣಗಳಲ್ಲಿ ರೂ. 89,96,208/–ಗಳು ಸುಸ್ತಿ ಸಾಲ ವಸೂಲಿ ಮಾಡಲು ಆದ್ಯತೆ ಕೈಗೊಳ್ಳತಕ್ಕದ್ದು. 6 ವರ್ಷ ಮೇಲ್ಪಟ್ಟ ಸುಸ್ತಿ ಸಾಲಗಳು 14 ಪ್ರಕರಣಗಳಿದ್ದು, ಪ್ರತಿಯೊಂದು ಪ್ರಕರಣದ ಬಗ್ಗೆ ಗಮನಹರಿಸಿ ಅವುಗಳ ವಸೂಲಾತಿಗೆ ಗಂಭೀರ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.
3	ವರ್ಷಾವಾರು, ಸಾಲಾವಾರು ಸುಸ್ತಿ ಸಾಲದ ವಿವರ	ವಿವರಗಳನ್ನು ಕೆಳಗಿನ ಕಂಡಿಕೆಯಲ್ಲಿ ನಮೂದಿಸಿದೆ.
4	ವರ್ಷಾಂತ್ಯಕ್ಕೆ ಇರುವ ಸುಸ್ತಿ ಸಾಲದ ವರ್ಷಾವಾರು ವಿವರ ನೀಡುವುದು.	ಸುಸ್ತಿ ಸಾಲದ ವರ್ಷವಾರು ವಿವರ ಈ ಕೆಳಗಿನಂತಿರುತ್ತದೆ.

ಕ್ರ.ಸಂ	ಸುಸ್ತಿ ಸಾಲದ ಅವಧಿ	ಸುಸ್ತಿ ಮೊಬಲಗು
1	1 ವರ್ಷದ ಮೇಲ್ಪಟ್ಟು 3 ವರ್ಷದ ಒಳಗೆ	42,61,702–00
2	3 ವರ್ಷದ ಮೇಲ್ಪಟ್ಟು 4 ವರ್ಷದ ಒಳಗೆ	38,78,702–00
3	4 ವರ್ಷದ ಮೇಲ್ಪಟ್ಟು 6 ವರ್ಷದ ಒಳಗೆ	98,99,802–00
4	6 ವರ್ಷದ ಮೇಲ್ಪಟ್ಟು	89,96,208–00
	ಒಟ್ಟು	**2,70,36,414–00**

5	ಸುಸ್ತಿ ಸಾಲದ ಪೈಕಿ ದಾವಾಕ್ಕೆ ಹಾಕಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ.	ಸುಸ್ತಿ ಸಾಲಗಳ ಪ್ರಕರಣಗಳ ಪೈಕಿ ಸಂಸ್ಥೆಯು 20 ಪ್ರಕರಣಗಳಲ್ಲಿ ರೂ. 76,86,475/– ಗಳ ಮೇಲೆ ದಾವಾ ಕ್ರಮ ಕೈಗೊಂಡಿರುತ್ತದೆ.
6	ಸುಸ್ತಿ ಪ್ರಕರಣಗಳ ಪೈಕಿ ಡಿಕ್ರಿಯಾದ ಪ್ರಕರಣ ಸಂಖ್ಯೆ ಮತ್ತು ಮೊತ್ತ.	26 ಪ್ರಕರಣಗಳಲ್ಲಿ ರೂ. 52,21,842/– ಗಳಿಗೆ ಸಂಬಂಧಿಸಿದಂತೆ ಅವಾರ್ಡ್ ಪಡೆಯಲಾಗಿರುತ್ತದೆ.
7	ಡಿಕ್ರಿಯಾದ ಪೈಕಿ ಅಮಲ್ಜಾರಿಗೆ ಕಳುಹಿಸಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ.	ಡಿಕ್ರಿಯಾದ 26 ಪ್ರಕರಣಗಳ ಪೈಕಿ 9 ಪ್ರಕರಣಗಳನ್ನು ಅಮಲ್ಜಾರಿ ಕ್ರಮ ಜರುಗಿಸಿರುತ್ತದೆ. ಇದರ ಮೊತ್ತ ರೂ. 41,22,482/– ಗಳಾಗಿರುತ್ತದೆ. 2019–20ನೇ ಸಾಲಿನಲ್ಲಿ 104 ಅಮಲ್ಜಾರಿ ಪ್ರಕರಣಗಳಿಂದ ರೂ. 1,75,47,913/– ಗಳು ವಸೂಲಾಗಿರುತ್ತದೆ.
8	ಸುಸ್ತಿ ಸಾಲ ವಸೂಲಿಗೆ ಕಾನೂನು ರೀತ್ಯಾ ಕ್ರಮ ಜರುಗಿಸದೇ ಇರುವ ಪ್ರಕರಣಗಳು ಮತ್ತು ಮೊತ್ತ	ಈ ಬಗ್ಗೆ ಪ್ರತ್ಯೇಕ ಮಾಹಿತಿ ನಿರ್ವಹಿಸಲಾಗಿರುತ್ತದೆ.
9	ಅಮಲ್ಜಾರಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ವಿಮರ್ಶಿಸುವುದು.	ಅಮಲ್ಜಾರಿಯಲ್ಲಿ ಖರೀದಿಸಿದ ಆಸ್ತಿಗಳು ಯಾವುದೂ ಇರುವುದಿಲ್ಲ. ಸುಸ್ತಿ ಸಾಲಗಳ ವಸೂಲಾತಿಗೆ ಕೈಗೊಂಡ ಕಾನೂನು ಕ್ರಮದ ವಿವರಗಳು (ದಿನಾಂಕ: 31–3–2020ಕ್ಕೆ ಇದ್ದಂತೆ ಈ ಕೆಳಕಂಡಂತೆ ಇರುತ್ತದೆ. ವರದಿ ಸಾಲಿನಲ್ಲಿ ದಾವಾ ದಾಖಲಾತಿ ಕ್ರಮ.

ಕ್ರ.ಸಂ	ಕಾನೂನು ಕ್ರಮದ ವಿವರಗಳು	ಪ್ರಕರಣಗಳು	ಮೊಬಲಗು
1	ದಾವಾ ದಾಖಲು ಮಾಡಿರುವುದು	20	76,86,475–00
2	ಅವಾರ್ಡ್ ಪಡೆದಿರುವುದು	26	52,21,842–00
3	ಅಮಲ್ಜಾರಿ ಕ್ರಮವಿರಿಸಿರುವುದು	9	41,22,482–00
	ಒಟ್ಟು	29	**1,18,08,957–00**
4	ಅಮಲ್ಜಾರಿ ಪ್ರಕರಣಗಳಿಂದ ವಸೂಲಾತಿಯಾಗಿರುವ ಮೊತ್ತ	104	**1,75,47,913–00**

MENEZES & ASSOCIATES BANGALORE-04 CHARTERED ACCOUNTANTS

(26) ಸಂಘದ ಸ್ಥಿರಾಸ್ತಿ–ಚರಾಸ್ತಿಗಳ ಪರಿಶೀಲನೆ

	ಸ್ಥಿರಾಸ್ತಿ	ನಿವೇಶನ	ವಿವರ	ವಿಸ್ತೀರ್ಣ	ಮೊತ್ತ ರೂ.
ಎ.1	ಸಂಘವು ಹೊಂದಿರುವ ಸ್ಥಿರಾಸ್ತಿಯ ವಿವರಗಳು	1)ಕಛೇರಿ ಕಟ್ಟಡ 1ನೇ ಹಂತ 2) ಕಛೇರಿ ಕಟ್ಟಡ 2ನೇ ಹಂತ 3) ಫ್ಲಾಟುಗಳು	1) ಕಛೇರಿ ಕಟ್ಟಡ 2)ಬಾಡಿಗೆಗೆ. 3) ಖಾಲಿ ಇದೆ	14000 ಚದರ ಅಡಿ	1,22,14,911–00 2,93,79,612–00 2,13,38,130–00
	ಸಂಸ್ಥೆಯು ಹೊಂದಿರುವ ಚರಾಸ್ತಿಯ ಒಟ್ಟು ಮೊತ್ತ				**6,29,32,653–00**

1	ಲೆಕ್ಕ ಪರಿಶೋಧನಾ ಕಾಲಕ್ಕೆ ಇವುಗಳ ದಾಖಲಾತಿಗಳು ಹಾಗೂ 'ಕ"ಡ' ಉತಾರೆ ಪರಿಶೀಲಿಸಿದ ಬಗ್ಗೆ ವಿಮರ್ಷೆ	ಮೇಲ್ಕಂಡ ಬಾಬ್ತು ಹಿಂದಿನ ಸಾಲಿನಿಂದ ಮುಂದುವರೆದಿರುತ್ತದೆ. ಕಟ್ಟಡದ ಮೇಲೆ ತೆರಿಗೆ ವರದಿ ಸಾಲಿನಲ್ಲಿ ರೂ. 7,37,926/– ಗಳನ್ನು ಬಿ.ಬಿ.ಎಂ.ಪಿ. ಗೆ ಪಾವತಿಸಿದೆ. ವರದಿ ಸಾಲಿನಲ್ಲಿ ವಿಮೆ ಪಾವತಿಸಿದ್ದು ದಿನಾಂಕ: 7–2–2021ರವರೆಗೆ ಚಾಲ್ತಿಯಲ್ಲಿರುತ್ತದೆ. ಕಟ್ಟಡದ ಜೊತೆಗೆ ಕಟ್ಟಡದಲ್ಲಿನ ಎಲೆಕ್ಟ್ರಾನಿಕ್ ಉಪಕರಣ, ಲಿಫ್ಟ್, ಪಂಪ್‌ಸೆಟ್ ಜನರೇಟರ್, ಪ್ರಿಂಟರ್ ಹಾಗೂ ಪೀಠೋಪಕರಣಗಳನ್ನು ಸಹ ವಿಮೆಗೆ ಒಳಪಡಿಸಿದೆ. ಕಛೇರಿ ಪೀಠೋಪಕರಣದ ಮೇಲೆ ವಸತಿ ಮಹಾಮಂಡಲದ ಹೆಸರು ಮತ್ತು ಕ್ರಮಾಂಕಗಳನ್ನು ನಮೂದಿಸಲ್ಪಟ್ಟಿದೆ. ಮಂಡಲದಲ್ಲಿರುವ ಪೀಠೋಪಕರಣಗಳು ಹಾಗೂ ಇತರೆ ವಸ್ತುಗಳನ್ನು ವರ್ಷಕ್ಕೊಮ್ಮೆ ಕಾರ್ಯಕಾರಿ ಮಂಡಳಿಯವರಿಂದ ಜಡ್ತಿ ಮಾಡಿಸಿ ಅವುಗಳಲ್ಲಿ ನಿಷ್ಕ್ರಿಯ ಪೀಠೋಪಕರಣಗಳಿದ್ದಲ್ಲಿ ಅಂತಹುವುಗಳನ್ನು ಕಾರ್ಯಕಾರಿ ಮಂಡಳಿ ಗಮನಕ್ಕೆ ತಂದು ಮುಂದಿನ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಹಿಂದಿನ ವರದಿಗಳಲ್ಲಿ ವಿವರವಾಗಿ ವಿವರಿಸಿರುವಂತೆ ಕಛೇರಿ ಹೊಸ ಕಟ್ಟಡದ 2ನೇ ಹಂತದ ನಿರ್ಮಾಣ ವೆಚ್ಚ ರೂ. 2,92,29,612/– ಗಳಿದ್ದು ಅದರ ಜೊತೆಗೆ ಗೇಟ್ ಅಳವಡಿಸಲು ಹಾಗೂ ಇತರೆ ವೆಚ್ಚಕ್ಕಾಗಿ ರೂ. 1,50,000/– ಖರ್ಚು ಮಾಡಲಾಗಿದ್ದು, ಕಛೇರಿ ಹೊಸ ಕಟ್ಟಡದ 2ನೇ ಹಂತದ ಲೆಕ್ಕದಲ್ಲಿ ರೂ. 2,93,79,612/– ಗಳಿರುತ್ತದೆ. ಈ ಬಗ್ಗೆ ಇಲಾಖಾನುಮತಿ ಪಡೆದಿರುವುದು ಹಾಗೂ ಕಟ್ಟಡಕ್ಕಾಗಿ ಉಪಯೋಗಿಸಲಾಗಿರುವ ನಿಧಿಗಳ ವಿವರ ಎಲ್ಲವೂ ಹಿಂದಿನ ವರದಿಗಳಲ್ಲಿ ದಾಖಲಾಗಿರುತ್ತದೆ. 2ನೇ ಹಂತದ ನೂತನ ಕಟ್ಟಡ ನಿರ್ಮಾಣಕ್ಕೆ ತನ್ನ ಕಟ್ಟಡ ನಿರ್ಮಾಣಕ್ಕೆ ಖರ್ಚು ಮಾಡಿರುವ ರೂ. 2,93,79,612/– ಗಳ ಜೊತೆಗೆ ರೂ. 5,87,000/– ಗಳ ಮುಂಗಡ ಲೆಕ್ಕವೂ ಆಸ್ತಿ ಜವಾಬ್ದಾರಿ ತಃಖ್ತೆಯ ಆಸ್ತಿ ಕಡೆ ಪ್ರತ್ಯೇಕವಾಗಿ ಮುಂದುವರೆದಿರುತ್ತದೆ. ಸದರಿ ಮುಂಗಡದ ಬಾಬ್ತು ಮೆ: ಅಲಂಕಾರ್ ಫ್ಯಾಬ್ರಿಕೇಷನ್ ರೂ. 4,67,000/– ಗಳು ಮೆ: ಬೊಹರಾ ಫ್ಯಾಬ್ರಿಕೇಷನ್ ರವರ ಹೆಸರಿನಲ್ಲಿ ರೂ. 1,20,000/– ಗಳು ಮುಂದುವರೆದಿರುತ್ತದೆ. ಸದರಿಯವರಿಂದ ನಿರ್ವಹಿಸಿದ ಕೆಲಸಕ್ಕೆ ಅಧಿಕೃತ ಬಿಲ್ಲುಗಳನ್ನು ಪಡೆದು ಸದರಿ ಮುಂಗಡ ಲೆಕ್ಕಗಳ ಹೊಂದಾಣಿಕೆ ಮಾಡಿಕೊಳ್ಳಲು ಕ್ರಮ ಅಗತ್ಯ. ಮುಂಗಡ ಲೆಕ್ಕದಲ್ಲಿರುವ ರೂ. 5,87,000/– ಗಳನ್ನು ಸೂಕ್ತ ಹೊಂದಾಣಿಕೆಯೊಂದಿಗೆ ಜಮಾ–ಖರ್ಚು ಮಾಡಿ ಈ ಲೆಕ್ಕವನ್ನು ಚುಕ್ತಾಗೊಳಿಸಲು ತಿಳಿಸಿದ್ದರೂ ಈ ಬಗ್ಗೆ ವರದಿ ಸಾಲಿನಲ್ಲಿ ಯಾವುದೇ ಕ್ರಮವಿಟ್ಟಿರುವುದಿಲ್ಲ.
		ಫ್ಲಾಟ್‌ಗಳ ಮೌಲ್ಯ ಹಿಂದಿನ ವರದಿಗಳಲ್ಲಿ ನಮೂದಿಸಿದಂತೆ ದಿನಾಂಕ: 13–03–2017 ರಂದು ಡೆವಲಪರ್ಸ್ ರೊಡನೆ ಚರ್ಚಿಸಿ 3 ಕೊಠಡಿಯ 1 ಫ್ಲಾಟ್ ಹಾಗೂ 2 ಕೊಠಡಿಯ 4 ಫ್ಲಾಟುಗಳನ್ನು ಮಂಜೂರು ಮಾಡಿಸಿಕೊಳ್ಳಲು ಕರಾರು ಮಾಡಿಕೊಂಡಿದ್ದು, ತದನಂತರ ಈ ಕೆಳಗಿನ ವಿವರದಂತೆ ಫ್ಲಾಟುಗಳನ್ನು ದಿನಾಂಕ: 10–09–2018 ರಂದು ಸಂಸ್ಥೆಯ ಹೆಸರಿಗೆ ಸೇಲ್‌ಡೀಡ್ ಮಾಡಿಕೊಂಡಿರುತ್ತಾರೆ.
		ಸಂಸ್ಥೆಯು 2018–19ನೇ ಸಾಲಿನಲ್ಲಿ ಖರೀದಿಸಿರುವ ವಿವಿಧ ವಿಸ್ತೀರ್ಣವುಳ್ಳ ಫ್ಲಾಟುಗಳ ವಿವರ ಈ ಕೆಳಗಿನಂತಿದೆ.

MENEZES & ASSOCIATES BANGALORE-94 CHARTERED ACCOUNTANTS

ಕ್ರಸಂ	ಮಹಡಿ	ಫ್ಲಾಟು ಸಂಖ್ಯೆ	ಅಳತೆ ಚದರ ಮೀ.ಗಳಲ್ಲಿ	ಚದರಡಿ ದರ
1	ನೆಲಮಹಡಿ	0009	741	3316.61
2	ಮೂರನೇ ಮಹಡಿ	3003	1118	3316.61
3	ಮೂರನೇ ಮಹಡಿ	3004	1119	3316.61
4	ಮೂರನೇ ಮಹಡಿ	3006	1670	3316.61
5	ನಾಲ್ಕನೇ ಮಹಡಿ	4003	1118	3316.61

		ಸಂಸ್ಥೆಯು ವರದಿ ಸಾಲಿನಲ್ಲಿ 5 ಫ್ಲಾಟ್‌ಗಳನ್ನು ಖರೀದಿಸಿರುತ್ತದೆ. ಖರೀದಿಸಿದ ಫ್ಲಾಟುಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿರುವುದಿಲ್ಲ ಹಾಗೂ ಸಂಸ್ಥೆಗೆ ಹಸ್ತಾಂತರಗೊಂಡಿರುವುದಿಲ್ಲ ನೋಂದಣಿಯಾದ ಫ್ಲಾಟುಗಳಿಗೆ ಇನ್ನೂ ಮಹಾನಗರ ಪಾಲಿಕೆಯಿಂದ ಖಾತೆ ಮಾಡಿಸಿರುವುದಿಲ್ಲ, ಹೀಗಾಗಿ ಕಂದಾಯ ಪಾವತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ ಸಂಸ್ಥೆಯ ಅಧೀನಕ್ಕೆ ಬಂದ ನಂತರ ಮೇಲ್ಕಂಡ ಫ್ಲಾಟುಗಳನ್ನು ಸದಸ್ಯರಿಗೆ ವಿಲೇವಾರಿ ಮಾಡಬೇಕ ಅಥವಾ ಬಾಡಿಗೆಗೆ ನೀಡಿ ಆದಾಯ ಹೆಚ್ಚಿಸಿಕೊಳ್ಳುವುದರ ಬಗ್ಗೆ ಸ್ಪಷ್ಟ ಮಾಹಿತಿ ಇರುವುದಿಲ್ಲ. ಫ್ಲಾಟ್‌ಗಳು ಹಿಂದಿನ ಸಾಲಿನಲ್ಲೇ ನೋಂದಾವಣಿಯಾಗಿದ್ದರೂ ಹಿಂದಿನ ಸಾಲಿನಲ್ಲಿದ್ದ ಸ್ಥಿತಿಯಲಿದ್ದ ಸ್ಥಿತಿಯಲ್ಲೇ ಮುಂದುವರೆದಿರುತ್ತದೆ. ಮೇಲ್ಕಂಡ (5) ಫ್ಲಾಟುಗಳನ್ನು ಸಂಸ್ಥೆಯ ವಶಕ್ಕೆ ಪಡೆದು ನಗರ ಪಾಲಿಕೆಯಿಂದ ಖಾತೆ ಮಾಡಿಸಿಕೊಳ್ಳುವ ಕ್ರಮ ಅಗತ್ಯವಾಗಿರುತ್ತದೆ
2	ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡ ಲಾಗಿದೆಯೇ?	ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆ.
3	ಎಲ್ಲಾ ಸ್ಥಿರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ?	ಸ್ಥಿರಾಸ್ತಿಗಳು ಸಂಸ್ಥೆಯ ಹೆಸರಿನಲ್ಲಿರುತ್ತದೆ.
4	ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ?	ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆ.
5	ಸ್ಥಿರಾಸ್ತಿಗಳ ಮೇಲೆ ಸವಕಳಿ ತೆಗೆಯಲಾಗಿದೆಯೇ? ಹಾಗಿದ್ದಲ್ಲಿ ನಿಬಂದಕರ ಸುತ್ತೋಲೆಯಂತೆ ತೆಗೆಯಲಾಗಿದೆಯೇ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆಯಲಾಗಿದೆಯೇ?	ಸ್ಥಿರಾಸ್ತಿಗಳ ಮೇಲೆ ಸವಕಳಿ ತೆಗೆಯಲಾಗಿದೆ. ಸದರಿ ಸವಕಳಿಯನ್ನು ನಿಬಂಧಕರ ಸುತ್ತೋಲೆಯಂತೆ ತೆಗೆದಿರಿಸಲಾಗಿದೆ.
6	ಗೋಡೌನುಗಳಿದ್ದಲ್ಲಿ ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ	ಸಂಸ್ಥೆಯ ವಶದಲ್ಲಿ ಯಾವುದೇ ಗೋಡೌನ್ ಇರುವುದಿಲ್ಲ.
7	ಕಟ್ಟಡಗಳನ್ನು ಬಾಡಿಗೆ ನೀಡಿದ್ದಲ್ಲಿ, ಅವುಗಳ ಮೇಲೆ ಸರಿಯಾಗಿ ಬಾಡಿಗೆ ಸ್ವೀಕೃತಿಯಾಗುತ್ತಿದೆಯೇ? ಕಾಲಕಾಲಕ್ಕೆ ಬಾಡಿಗೆ ಪರಿಷ್ಕರಣೆ ಮಾಡಲಾಗುತ್ತಿದೆಯೇ?	ಎರಡನೇ ಹಂತದ ಕಛೇರಿ ಕಟ್ಟಡವನ್ನು ಹಾಲಿ ಮೆ: ವ್ಯಾಲ್ಯೂ ಪಾಯಿಂಟ್ ಪ್ರೈ. ಲಿ., ರವರಿಗೆ ಬಾಡಿಗೆಗೆ ನೀಡಲಾಗಿದೆ. ಕಟ್ಟಡದ ಬಾಡಿಗೆ ಆಗಿಂದ್ದಾಗ್ಗೆ ಸ್ವೀಕೃತವಾಗಿರುತ್ತದೆ.
8	ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ, ಅದು ನಿಯಮಾನುಸಾರ ಮಾಡ ಲಾಗಿದೆಯೇ? ಉಲ್ಲಂಘನೆಗಳಿದ್ದಲ್ಲಿ ವಿವರಿಸುವುದು.	ವರದಿ ಸಾಲಿನಲ್ಲಿ ಯಾವುದೇ ಕಟ್ಟಡ ನಿರ್ಮಾಣವಾಗಿರುವುದಿಲ್ಲ. ಸ್ಥಿರಾಸ್ತಿಗಳ ಬಗ್ಗೆ ಕಟ್ಟಡದ ಕಂದಾಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬಾಕಿ ಇಲ್ಲದಂತೆ ಪಾವತಿಸಲಾಗಿದೆ.
ಬಿ.1	**ಚರಾಸ್ತಿ** ಸಂಘವು ಹೊಂದಿರುವ ಚರಾಸ್ತಿ ವಿವರಗಳು	**ಚರ ಮತ್ತು ಸ್ತಿರಾಸ್ತಿಗಳು : ರೂ. 56,40,397-90** ದಿನಾಂಕ: 31-03-2020ಕ್ಕೆ ಸಂಸ್ಥೆಯಲ್ಲಿ ರೂ. 56,40,397-90 ಗಳ ಮೌಲ್ಯದ ವಿವಿಧ ಚರಾಸ್ತಿಗಳನ್ನು ಹೊಂದಿದ್ದು, ಸದರಿ ಚರಾಸ್ತಿಗಳೆಲ್ಲವೂ ಹಿಂದಿನ ಸಾಲುಗಳಿಂದ ಮುಂದುವರೆದ ಬಾಬ್ತುಗಳಾಗಿರುತ್ತದೆ. ಸದರಿ ಬಾಬ್ತಿನ ವಿವರ ಕೆಳಕಂಡಂತಿರುತ್ತದೆ.

MENEZES & ASSOCIATES BANGALORE-94 CHARTERED ACCOUNTANTS

		i)	ಕಛೇರಿ ಪುಸ್ತಕ ಮತ್ತು ಗ್ರಂಥಾಲಯ	3,61,803–00
		ii)	ಕಛೇರಿ ಕಂಪ್ಯೂಟರ್‌ಗಳು ಹಾಗೂ ಇ.ಪಿ.ಎ.ಬಿ.ಎಕ್ಸ್	19,92,266–00
		iii)	ಕಛೇರಿ ಸಲಕರಣೆ	14,76,418–20
		iv)	ಕಛೇರಿ ಪೀಠೋಪಕರಣಗಳು	16,69,762–70
		v)	ಕಛೇರಿ ಜನರೇಟರ್	1,40,148–00
			ಒಟ್ಟು ರೂ.	**56,40,397–90**

i) ಕಛೇರಿ ಪುಸ್ತಕ ಮತ್ತು ಗ್ರಂಥಾಲಯ : ರೂ. 3,61,803/–

ವರದಿ ಸಾಲಿನ ಅಂತ್ಯಕ್ಕೆ ರೂ. 3,61,803/– ಗಳ ಮೌಲ್ಯದ ಕಛೇರಿ ಪುಸ್ತಕಗಳಿರುತ್ತದೆ. ಈ ಬಾಬ್ತು ಹಿಂದಿನ ಸಾಲುಗಳಿಂದ ಯಾವುದೇ ಬದಲಾವಣೆ ಇಲ್ಲದೆ ಮುಂದುವರೆದಿರುತ್ತದೆ. ಇವುಗಳ ಉಸ್ತುವಾರಿಗೆ ಮಹಾಮಂಡಲದ ಸಿಬ್ಬಂದಿಗೆ ಜವಾಬ್ದಾರಿ ವಹಿಸಿ ಕೆಲಸ ಹಂಚಿಕೆ ಮಾಡಿರುವುದು ಕಂಡು ಬಂದಿರುತ್ತದೆ.

ii) ಕಛೇರಿ ವಾಹನಗಳು : ರೂ. 45,29,932/–

ದಿನಾಂಕ: 31–3–2020ಕ್ಕೆ ವಸತಿ ಮಹಾಮಂಡಲವು 4 ವಾಹನಗಳನ್ನು ಹೊಂದಿದ್ದು, ಈ ಬಾಬ್ತು ಹಿಂದಿನ ಸಾಲುಗಳಿಂದ ಯಾವುದೇ ವ್ಯತ್ಯಾಸವಿಲ್ಲದೆ ಮುಂದುವರೆದಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

1	ಬೊಲೇರೊ ಜೀಪ್ (KA 05 MR 8391)	9,27,153–00
2	ಇನ್ನೋವಾ ಕಾರ್ (KA 05 MC 3144)	12,75,230–00
3	ಮಹೇಂದ್ರ ಮಾರ್ಷಲ್ ಡೀಸಲ್ ಜೀಪ್ (KA 05 Z 7383)	4,67,930–00
4	ಇನ್ನೋವಾ ಕಾರ್ (KA 05 MN 2973)	18,59,619–00
	ಒಟ್ಟು ರೂ.	**45,29,932–00**

ಮೇಲ್ಕಂಡ ವಾಹನಗಳ ಪೈಕಿ ಮೊದಲನೇ ವಾಹನವನ್ನು ವಸೂಲಾತಿಗಾಗಿಯೂ 2ನೇ ವಾಹನವನ್ನು ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕೊನೆಯ ವಾಹನವನ್ನು ಅಧ್ಯಕ್ಷರ ಸೌಲಭ್ಯಕ್ಕಾಗಿ ಹಂಚಿಕೆಯಾಗಿರುತ್ತದೆ.

ಕಛೇರಿ ನಿರ್ವಹಣೆ ಹಾಗೂ ಸುಸ್ತಿ ಸಾಲ ವಸೂಲಾತಿಗೆ ಮಹೇಂದ್ರ ಮಾರ್ಷ್ಹಲ್ ಜೀಪ್ ಸಂಖ್ಯೆ KA 05 Z 7383ರನ್ನು ದಿನಾಂಕ: 13–12–2001ರಲ್ಲಿ ಖರೀದಿಸಿದ್ದು, ಈ ವಾಹನವನ್ನು 19 ವರ್ಷಗಳ ಹಿಂದೆ ಖರೀದಿಸಿದ್ದು, ಪದೇ ಪದೇ ರಿಪೇರಿಗೆ ಬರುತ್ತಿದ್ದು, ದುರಸ್ತಿಗಾಗಿ ಹೆಚ್ಚಿನ ಹಣ ವ್ಯಯವಾಗುತ್ತಿದೆ. ಹೀಗಾಗಿ ಈ ಹಳೆಯ ವಾಹನವನ್ನು ವಿಲೇವಾರಿ ಮಾಡಲು ಸಹಕಾರ ಸಂಘಗಳ ನಿಬಂಧಕರಲ್ಲಿ ಅನುಮತಿ ಕೋರಿದ್ದು, ಸದರಿಯವರ ಆದೇಶ ಕ್ರಮ ಸಂಖ್ಯೆ: ಹೆಚ್‌ಎಸ್‌ಜಿ–2/163/ಹೆಚ್‌ಹೆಚ್‌ಎಸ್/2015–16 ದಿನಾಂಕ: 29–7–2015 ರಂದು ಅನುಮತಿ ನೀಡಿರುತ್ತಾರೆ.

ಸಂಸ್ಥೆಯು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆದು ಇದರ ಮಹೇಂದ್ರ ಮಾರ್ಷ್ಹಲ್ ಜೀಪ್ ಫಿಟ್‌ನೆಸ್ ಬಗ್ಗೆ ದೃಢೀಕರಣ ಕೇಳಲಾಗಿರುತ್ತದೆ. ಅದರಂತೆ ಪ್ರಾದೇಶಿಕ ಅಧಿಕಾರಿಗಳು ಸದರಿ ವಾಹನವನ್ನು, ವಾಹನವನ್ನಾಗಿ ಮಾರದೆ ಸ್ಕ್ರಾಪ್ ಆಗಿ ಕನಿಷ್ಟ ರೂ. 22,500/– ಗಳಿಗೆ ಮಾರಾಟ ಮಾಡಲು ನಿಗದಿಪಡಿಸಿದೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ವಾಹನವನ್ನು ವಿಲೇವಾರಿ ಮಾಡಲು ಅನುಮತಿ ಪಡೆದು ಹಲವು ವರ್ಷಗಳಾದರೂ ವಿಲೇವಾರಿಗೆ ಯಾವುದೇ ಕ್ರಮ ಇಡದಿರುವುದು ಕಂಡು ಬಂದಿರುತ್ತದೆ. ಸದರಿ ವಾಹನದ ಖರೀದಿ ಮೌಲ್ಯ ರೂ. 4,69,930/– ಗಳಾಗಿದ್ದು ಈಗಾಗಲೇ ಸವಕಳಿ ರೂಪದಲ್ಲಿ ಇದರ ಮೌಲ್ಯ ಶೂನ್ಯವಾಗಿರುವುದು ಸಂಸ್ಥೆಯ ದಾಖಲೆಗಳಿಂದ ತಿಳಿದು ಬಂದಿರುತ್ತದೆ.

ಸದರಿ ವಾಹನವು ಈಗ ಚಾಲನೆಯಲ್ಲಿ ಇಲ್ಲದಿರುವುದು ಕಂಡು ಬಂದಿರುತ್ತದೆ. ಈ ವಾಹನಕ್ಕೆ ಸಂಬಂಧಿಸಿದಂತೆ ಯಾವುದೇ ವಿಮೆ ಸಹ ಪಾವತಿಸಿರುವುದಿಲ್ಲ.

MENEZES & ASSOCIATES BANGALORE-94 CHARTERED ACCOUNTANTS

		ಲಾಗ್ ಪುಸ್ತಕವನ್ನು ನಿರ್ವಹಿಸಿರುತ್ತಾರೆ. ಲಾಗ್ ಪುಸ್ತಕದ ನಮೂನೆಯಲ್ಲಿ ಬದಲಾವಣೆ ಅಗತ್ಯ.
	iii)	**ಕಛೇರಿ ಕಂಪ್ಯೂಟರ್‌ಗಳು ಮತ್ತು ಇ.ಪಿ.ಎ.ಬಿ.ಎಕ್ಸ್ : ರೂ. 19,92,266/–** ದಿನಾಂಕ: 31–3–2020ರ ಅಂತ್ಯಕ್ಕೆ ಸಂಸ್ಥೆಯು ಒಟ್ಟು ರೂ. 19,92,266/– ಮೌಲ್ಯದ ಕಂಪ್ಯೂಟರ್ ಸಲಕರಣೆಗಳನ್ನು ಹೊಂದಿದ್ದು, ಸದರಿ ಬಾಬ್ತು ಹಿಂದಿನ ವರ್ಷಗಳಿಂದಲೂ ಹಾಗೆಯೇ ಮುಂದುವರೆದಿರುತ್ತದೆ. ಕಛೇರಿ ಸಲಕರಣೆಗಳನ್ನು ವಿವರಗಳೊಂದಿಗೆ ರಿಜಿಸ್ಟರ್‌ನಲ್ಲಿ ಬರೆದಿಡಲಾಗಿದೆ ಸಾಲಾಂತ್ಯಕ್ಕೆ ಆಡಳಿತ ಮಂಡಳಿ ಸದಸ್ಯರಿಂದ ಭೌತಿಕ ದಾಸ್ತಾನಿನ ಪರಿಶೀಲನೆ ನಡೆಸಿರುತ್ತಾರೆ. ಸಹಕಾರ ಸಂಘಗಳ ನಿಬಂಧಕರ ಆದೇಶದಂತೆ ಸವಕಳಿ ತೆಗೆದಿರಿಸಲ್ಪಟ್ಟಿರುತ್ತದೆ. ಸಂಸ್ಥೆಯಲ್ಲಿರುವ ಕಂಪ್ಯೂಟರ್‌ಗಳ ಕುರಿತಂತೆ ತಾಂತ್ರಿಕ ಗುಣಮಟ್ಟದ ಬಗ್ಗೆ ಇ.ಡಿ.ಪಿ. ಲೆಕ್ಕಪರಿಶೋಧನೆ ಮಾಡಿಸಿರುವುದಿಲ್ಲ. ಕಛೇರಿ ಕಂಪ್ಯೂಟರ್‌ಗಳಿಗೆ ಸಂಬಂಧಿಸಿದಂತೆ ಸವಕಳಿ ನಿಧಿ ಆಸ್ತಿಯ ಮೌಲ್ಯಕ್ಕೆ ಸಮನಾಗಿರುತ್ತದೆ.
	iv)	**ಕಛೇರಿ ಸಲಕರಣೆ : ರೂ. 14,76,418–20** ದಿನಾಂಕ 31–3–2020ರ ಸಾಲಾಂತ್ಯಕ್ಕೆ ರೂ. 14,76,418–20 ಗಳಿರುತ್ತದೆ. ಅತಿಥಿ ಗೃಹದಲ್ಲಿನ ಪೀಠೋಪಕರಣಗಳು ಹಾಗೂ ಸಲಕರಣೆಗಳನ್ನು ಕಛೇರಿ ಪೀಠೋಪಕರಣಗಳು ಹಾಗೂ ಸಲಕರಣೆಗಳ ಲೆಕ್ಕದಿಂದ ಪ್ರತ್ಯೇಕಿಸಿ, ಪ್ರತ್ಯೇಕವಾಗಿ ನಿರ್ವಹಿಸಲು ಹಿಂದಿನ ಸಾಲಿನಲ್ಲಿ ಸೂಚಿಸಿದ್ದು, ಈ ಬಗ್ಗೆ ಕ್ರಮವಾಗಿರುವುದಿಲ್ಲ. ಆಡಳಿತ ಮಂಡಳಿ ಸದಸ್ಯರಿಂದ ದಾಸ್ತಾನಿನ ಪರಿಶೀಲನೆ ನಡೆಸಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ ಸದರಿ ಆಸ್ತಿ ಮೌಲ್ಯದ ಮೇಲೆ ಇಲಾಖಾ ನಿರ್ದೇಶನಗಳನ್ವಯ ನಿಯಮಾನುಸಾರ ಸವಕಳಿ ತೆಗೆದಿರಿಸಲಾಗಿದೆ.
	v)	**ಕಛೇರಿ ಪೀಠೋಪಕರಣಗಳು : ರೂ. 16,69,762–70** ದಿನಾಂಕ: 31–3–2020ಕ್ಕೆ ರೂ. 16,69,762–70 ಗಳ ಪೀಠೋಪಕರಣಗಳನ್ನು ಹೊಂದಿರುತ್ತದೆ. ಈ ಬಾಬ್ತು ಹಿಂದಿನ ಸಾಲಿನಿಂದ ಮುಂದುವರೆದಿರುತ್ತದೆ. ಕಛೇರಿ ಪೀಠೋಪಕರಣಗಳನ್ನು ವಿವರಗಳೊಂದಿಗೆ ರಿಜಿಸ್ಟರ್‌ನಲ್ಲಿ ಬರೆದಿಡಲಾಗಿದೆ. ಸಾಲಾಂತ್ಯಕ್ಕೆ ಆಡಳಿತ ಮಂಡಳಿ ಸದಸ್ಯರಿಂದ ಭೌತಿಕ ದಾಸ್ತಾನಿನ ಪರಿಶೀಲನೆ ನಡೆಸಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ ಸದರಿ ಆಸ್ತಿ ಮೌಲ್ಯದ ಮೇಲೆ ಆದಾಯ ತೆರಿಗೆ ನಿಯಮಾನುಸಾರ ಸವಕಳಿ ತೆಗೆದಿರಿಸಲಾಗಿದೆ.
	vi)	**ಕಛೇರಿ ಜನರೇಟರ್ : ರೂ. 1,40,148/–** ಸಂಸ್ಥೆಯು ಜನರೇಟರ್ ಹಿಂದಿನ ಸಾಲಿನಿಂದ ಮುಂದುವರೆದಿದ್ದು, ಇದರ ಮೌಲ್ಯ ರೂ. 1,40,148/– ಗಳಾಗಿದ್ದು, ಸದರಿ ಆಸ್ತಿಯ ಮೌಲ್ಯದ ಮೇಲೆ ನಿಯಮಾನುಸಾರ ಸವಕಳಿ ತೆಗೆದಿದ್ದು, ಈಗಾಗಲೇ ಆಸ್ತಿ ಮೌಲ್ಯಕ್ಕೆ ಸಮನಾಗಿರುತ್ತದೆ.
ಬಿ.2	ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ?	ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆ.
3	ಎಲ್ಲಾ ಚರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ?	ಎಲ್ಲಾ ಚರಾಸ್ತಿಗಳು ಸಂಸ್ಥೆಯ ಹೆಸರಿನಲ್ಲಿರುತ್ತದೆ.
4	ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ?	ಚರಾಸ್ತಿಗಳು ಮೇಲೆ ವಿಮೆ ಮಾಡಿಸಲಾಗಿದೆ.
5	ಚರಾಸ್ತಿಗಳ ಮೇಲೆ ಸವಕಳಿ ತೆಗೆಯಲಾಗಿದೆಯೇ? ಹಾಗಿದ್ದಲ್ಲಿ ನಿಬಂಧಕರ ಸುತ್ತೋಲೆಯಂತೆ ತೆಗೆಯಲಾಗಿದೆಯೇ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆಯಲಾಗಿದೆಯೇ?	ಚರಾಸ್ತಿಗಳ ಮೇಲೆ ಸವಕಳಿಯನ್ನು ನಿಬಂಧಕರ ಸುತ್ತೋಲೆಯಂತೆ ತೆಗೆಯಲಾಗಿದೆ.

MENEZES & ASSOCIATES BANGALORE-94 CHARTERED ACCOUNTANTS

6	ಸಂಘವು ವಾಹನ ಹೊಂದಿದ್ದಲ್ಲಿ ಲಾಗ್ ಪುಸ್ತಕ ಬರೆಯಲಾಗಿದೆಯೇ? ವಾಹನವು ಪ್ರತಿ ಲೀಟರ್ ಇಂಧನಕ್ಕೆ ಕ್ರಮಿಸಿರುವ ಸರಾಸರಿ ದೂರ?	ಸಂಸ್ಥೆಯು ವಾಹನದ ಲಾಗ್ ಪುಸ್ತಕ ನಿರ್ವಹಿಸಲಾಗಿದೆ. ಸಂಸ್ಥೆಯಲ್ಲಿ ಮೂರು ವಾಹನಗಳಿದ್ದು, ಪ್ರತಿ ವಾಹನದ ಲೀಟರ್ ಇಂಧನಗಳ ಕ್ರಮಿಸಿರುವ ದೂರ ಹೀಗಿರುತ್ತದೆ. 1) KA 05 MR 8391 - ಲೀಟರ್‌ಗೆ 8.5 ಕಿ.ಮೀ 2) KA 05 MC 3144 - ಲೀಟರ್‌ಗೆ 8 ಕಿ.ಮೀ 3) KA 05 MN 2973 - ಲೀಟರ್‌ಗೆ 8 ಕಿ.ಮೀ
7	ಚರಾಸ್ತಿ ವಿಲೇ ಮಾಡಿದ್ದಲ್ಲಿ ನಿಯಮಾನುಸಾರ ಮಾಡಲಾಗಿದೆಯೇ?	ವರದಿ ಸಾಲಿನಲ್ಲಿ ಚರಾಸ್ತಿ ವಿಲೇ ಮಾಡಿರುವುದಿಲ್ಲ.

(27) ಆಖೈರು ದಾಸ್ತಾನು:

1	ಸಾಲಾಖೈರಿಗೆ ದಾಸ್ತಾನು ಪರಿಶೀಲನೆ ಮಾಡಲ್ಪಟ್ಟಿದೆಯೇ ? ಸದರಿ ದಾಸ್ತಾನು ಬೆಲೆಗೆ ಅಥವಾ ಮಾರಾಟ ಬೆಲೆ ಇವುಗಳಲ್ಲಿ ಯಾವುದು ಕಡಿಮೆ ಅದರಂತೆ ದಾಸ್ತಾನು ಮೌಲ್ಯ ನಿರ್ಧರಿಸಿದ್ದಾರೆಯೇ?	ಸಂಸ್ಥೆಯಲ್ಲಿ ರೂ. 13,457/- ಗಳ ಮೌಲ್ಯದ ಮುದ್ರಣ ಮತ್ತು ಲೇಖನ ಸಾಮಗ್ರಿಗಳು ಆಖೈರು ದಾಸ್ತಾನು ಇರುತ್ತದೆ. ಸಾಲಾಖೈರಿಗೆ ದಾಸ್ತಾನು ಪರಿಶೀಲಿಸಲ್ಪಟ್ಟಿದೆ, ಸದರಿ ದಾಸ್ತಾನನ್ನು ಸದರಿ ದರದಲ್ಲಿ ಮೌಲೀಕರಿಸಲಾಗಿದೆ.
2	ದಾಸ್ತಾನು ಆಗಿಂದಾಗ್ಗೆ ಇಲಾಖಾ ಅಧಿಕಾರಿಗಳು/ಸಂಘದ ಪದಾಧಿಕಾರಿಗಳಿಂದ ಪರಿಶೀಲಿಸಲ್ಪಟ್ಟಿದೆಯೆ?	ದಾಸ್ತಾನು ಅಗಿಂದ್ದಾಗ್ಗೆ ಪದಾಧಿಕಾರಿಗಳಿಂದ ಪರಿಶೀಲಿಸಲ್ಪಟ್ಟಿರುತ್ತದೆ.
3	ದಾಸ್ತಾನು ರಿಜಿಸ್ಟರ್ ನಿಗದಿ ಪಡಿಸಿದ ನಮೂನೆಯಲ್ಲಿ ನಿರ್ವಹಿಸಲ್ಪಟ್ಟಿದೆಯೇ?	ದಾಸ್ತಾನು ರಿಜಿಸ್ಟರ್ ಬರೆಯಲಾಗಿದೆ. ಆದರೆ ಸದರಿ ದಾಸ್ತಾನು ರಿಜಿಸ್ಟರ್ ನಿಗದಿಪಡಿಸಿದ ನಮೂನೆಯಲ್ಲಿ ನಿರ್ವಹಿಸಿಲ್ಲ.
4	ಸಾಲಾಂತ್ಯಕ್ಕೆ ಜಡ್ತಿಯಾದ ದಾಸ್ತಾನು ವಿವರವುಳ್ಳ ಪಟ್ಟಿ/ಸಂಕ್ಷಿಪ್ತ ಪಟ್ಟಿ ವರದಿಗೆ ಲಗತ್ತಿಸಿದೆಯೇ?	ಸಾಲಾಂತ್ಯಕ್ಕೆ ಜಡ್ತಿಯಾದ ದಾಸ್ತಾನು ವಿವರವುಳ್ಳ ಪಟ್ಟಿ/ಸಂಕ್ಷಿಪ್ತ ಪಟ್ಟಿ ವರದಿಗೆ ಲಗತ್ತಿಸಿದೆ.

(28) ಇತರೆ ಬರತಕ್ಕವುಗಳು :

	(ಇತರೆ ಬರತಕ್ಕವುಗಳ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಷಿಸುವುದು.)	ದಿನಾಂಕ: 31-3-2020ಕ್ಕೆ ಸಂಸ್ಥೆಗೆ ಈ ಕೆಳಗೆ ನಮೂದಿಸಿರುವ ವಿವರದಂತೆ ರೂ. 25,65,766-51 ಗಳು ಬಾಬ್ತುಗಳು ಬರಬೇಕಾಗಿರುತ್ತದೆ.

ಕ್ರ.ಸಂ	ಬರಬೇಕಾಗಿರುವ ಬಾಬುಗಳು (ಮುಂಗಡ)	ಮೊಬಲಗು
i)	ಕಂಪ್ಯೂಟರ್ ಮುಂಗಡ ವಸೂಲಾಗ ಬೇಕಾಗಿರುವುದು	50,000-00
ii)	ದಾವಾ ಫೀ ಮತ್ತು ಅಮಲ್ದಾರಿ ಶುಲ್ಕ	10,19,341-17
iii)	ಇತರೆ ಮುಂಗಡ	3,12,212-00
iv)	ಸಿಬ್ಬಂದಿ ಹಬ್ಬದ ಮುಂಗಡ	43,200-00
v)	ಕಛೇರಿ ಹೊಸ ಕಟ್ಟಡ - 2ನೇ ಹಂತ ಮುಂಗಡ	5,87,000-00
vi)	ಎಸ್.ಜಿ.ಎಸ್.ಟಿ ಖಾತೆ	70,690-50
vii)	ಸಿ.ಜಿ.ಎಸ್.ಟಿ. ಖಾತೆ	70,690-50
viii)	ಐ.ಜಿ.ಎಸ್.ಟಿ. ಖಾತೆ	1,21,673-54
ix)	ಜಿ.ಎಸ್.ಟಿ. ಖಾತೆ ಪಾವತಿ	1,12,162-00
x)	ರಾಜ್ಯ ಗ್ರಾಹಕರ ವೇದಿಕೆಯಲ್ಲಿ ಠೇವಣಿ	1,78,795-00
	ಒಟ್ಟು ರೂ.	**25,65,765-51**

(i)	ಕಂಪ್ಯೂಟರ್ ಮುಂಗಡ ವಸೂಲಾಗಬೇಕಾದದ್ದು, ರೂ. **50,000/-** ಹಿಂದಿನ ವರದಿಗಳಲ್ಲಿ ವಿವರಿಸಿರುವಂತೆ ಕಛೇರಿ ಕಂಪ್ಯೂಟರ್

MENEZES & ASSOCIATES BANGALORE-94 CHARTERED ACCOUNTANTS

		ಖರೀದಿ ವ್ಯವಹಾರದ ಬಗ್ಗೆ 2007–08ನೇ ಸಾಲಿನ ಕಂಡಿಕೆ 42(1)(ಅ) ನಲ್ಲಿ ವಿವರವಾಗಿ ವಿವರಿಸಿದ್ದು ಅದರಂತೆ ದಿನಾಂಕ: 16–12–2005ರಂದು ಪಾವತಿಸಿದ ರೂ. 50,000/– ಮುಂಗಡವನ್ನು ಕಡಿತಗೊಳಿಸದೆ ರೂ. 2,40,760/– ಗಳ ಅಂತಿಮ ಬಿಲ್ಲನ್ನು ಚುಕ್ತಾ ಮಾಡಿದ್ದು, ಇದರಿಂದ ರೂ. 50,000/–, ಟೆಕ್‌ಸಿಂಕ್ ಸಲ್ಯೂಷನ್‌ರವರಿಗೆ ಹೆಚ್ಚಿಗೆ ಪಾವತಿಯಾಗಿರುತ್ತದೆ. 2006–07 ಮತ್ತು 2007–08 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುವಂತೆ ಸದರಿ ಮೊಬಲಗನ್ನು ದಿನಾಂಕ: 22–2–2006ರಿಂದ ವಸೂಲಿ ದಿನಾಂಕದವರೆಗೆ ಬಡ್ಡಿ ಸಮೇತ ಟೆಕ್‌ಸಿಂಕ್ ಸಲ್ಯೂಷನ್‌ರವರಿಂದ ವಸೂಲು ಮಾಡಲು ಕ್ರಮ ಅಗತ್ಯ. ಈ ಬಗ್ಗೆ ವರದಿ ಸಾಲಿನಲ್ಲಿ ಯಾವೊಂದು ಕ್ರಮವನ್ನು ತೆಗೆದುಕೊಳ್ಳದಿರುವುದು ಕಂಡು ಬಂದಿರುತ್ತದೆ.
	(ii)	**ದಾವಾ ಮತ್ತು ಅಮಲ್ಜಾರಿ ಶುಲ್ಕ : ರೂ. 10,19,341–17** ಸುಸ್ತಿ ಸಾಲಗಳ ವಸೂಲಿಗೆ ಕಾನೂನು ಕ್ರಮ ಜರುಗಿಸುವ ಸಂಬಂಧ ಸರ್ಕಾರಕ್ಕೆ ಪಾವತಿಸಿದ ದಾವಾ ಮತ್ತು ಅಮಲ್ಜಾರಿ ಶುಲ್ಕ ಹಾಗೂ ಇತರೆ ವೆಚ್ಚಗಳು ದಿನಾಂಕ: 31–3–2020ರ ಅಂತ್ಯಕ್ಕೆ ರೂ. 10,19,341–17ಗಳು ವಸೂಲಾಗಬೇಕಾಗಿರುತ್ತದೆ. ದಾವಾ ಶುಲ್ಕ, ಅಮಲ್ಜಾರಿ ಶುಲ್ಕ ಹಾಗೂ ಇತರೆ ವೆಚ್ಚಗಳನ್ನು ಸರ್ಕಾರಕ್ಕೆ ಪಾವತಿಸಿದ ಬಾಬ್ತು ಯಾವ ಸಾಲಗಾರರಿಂದ ವಸೂಲಾಗಬೇಕು ಎಂದು ದಾವಾ ಶಾಖೆಯಲ್ಲಿ ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಿರ್ವಹಿಸಲಾಗಿದೆ. ಸಾಲ ವಸೂಲಿ ಸಂದರ್ಭದಲ್ಲಿ ಈ ಮೊಬಲಗನ್ನು ವಸೂಲಿ ಮಾಡಲಾಗುತ್ತಿದೆ. ಸದರಿ ಮೊಬಲಗಿನ ವಸೂಲಿಗೆ ಆದ್ಯತೆಯಿಂದ ಕ್ರಮವಿಡುವುದು.
	(iii)	**ಇತರೆ ಮುಂಗಡ : ರೂ. 3,12,212/–** ವರದಿಗೆ ಲಗತ್ತಿಸಿದ ತಃಖ್ತೆಯ ವಿವರಗಳಂತೆ ದಿನಾಂಕ: 31–3–2020ರ ಅಂತ್ಯಕ್ಕೆ ಇತರೆ ಮುಂಗಡ ಬಾಬ್ತು ರೂ. 3,12,212/– ಬರಲು ಬಾಕಿ ಇರುತ್ತದೆ, ಹಿಂದಿನ ಸಾಲಿನ ವರದಿಯಂತೆ ಪಾರ್ಕ್ ವ್ಯೂ ಸರ್ವೀಸ್ ಸ್ಟೇಷನ್‌ನಿಂದ ರೂ. 20,000/– ಮೆ: ಪ್ರೋಸಸ್‌ವೇರ್ ಸಿಸ್ಟಮ್ ಇವರಿಂದ ರೂ. 2,92,212/– ಬರಲು ಬಾಕಿ ಇರುತ್ತದೆ. ಪಾರ್ಕ್ ವ್ಯೂ ಸರ್ವಿಸ್ ಸ್ಟೇಷನ್‌ನಲ್ಲಿ ಸಂಸ್ಥೆಯು ತನ್ನ ವಾಹನಗಳಿಗೆ ಇಂದನ ತುಂಬಿಸುವ ತಾಣವಾಗಿದ್ದು, ಅವರಿಗೆ ಖಾತರಿಯಾಗಿ ಇಟ್ಟಿರುವ ರೂ. 20,000/– ಗಳ ಮುಂಗಡ ಬಾಬ್ತು ಹಾಗೆಯೇ ಮುಂದುವರೆದಿರುತ್ತದೆ. ಉಳಿದ ರೂ. 2,92,212/– ಪ್ರೋಸಸ್‌ವೇರ್ ಸಿಸ್ಟಮ್ಸ್ ರವರಿಂದ ವಸೂಲಾಗಬೇಕಾಗಿದ್ದು, ಈ ಬಗ್ಗೆ ಸದರಿ ಮುಂಗಡವನ್ನು ವಾಪಸ್ಸು ಪಡೆಯಲು ಯಾವುದೇ ಕ್ರಮವನ್ನಿಟ್ಟಿರುವುದಿಲ್ಲ.
	(iv)	**ಸಿಬ್ಬಂದಿ ಹಬ್ಬದ ಮುಂಗಡ : ರೂ. 43,200/–** ದಿನಾಂಕ: 31–3–2020ರ ಅಂತ್ಯಕ್ಕೆ ಮಹಾಮಂಡಲದ ವಿವಿಧ ಸಿಬ್ಬಂದಿಯವರಿಂದ ಹಬ್ಬದ ಮುಂಗಡ ರೂ. 43,200/– ವಸೂಲಾಗಬೇಕಾಗಿದ್ದು, ಪ್ರತಿ ಮಾಹೆ ಸಂಬಳದಿಂದ ಕಟಾಯಿಸಲಾಗುತ್ತಿದೆ. ಈ ಬಾಬ್ತು ಕುಳುವಾರು ತಯಾರಿಸಿದ್ದು, ಕುಳುವಾರು ತಾಳೆಯಿರುತ್ತದೆ.
	(v)	**ಕಛೇರಿ ಹೊಸ ಕಟ್ಟಡ – 2ನೇ ಹಂತ ಮುಂಗಡ** ಕಛೇರಿ ಹೊಸ ಕಟ್ಟಡ 2ನೇ ಹಂತ ಮುಂಗಡ ರೂ. 5,87,000/– ಗಳು ಬಹು ಹಿಂದಿನಿಂದಲೂ ಯಾವುದೇ ವ್ಯತ್ಯಾಸವಿಲ್ಲದೆ ಮುಂದುವರೆದಿರುತ್ತದೆ. ನೂತನ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಸಂಸ್ಥೆಯು ಕೈಗೊಂಡ ಕ್ರಮಗಳು ಹಾಗೂ ಗಮನಿಸಿದ ನ್ಯೂನತೆಗಳ ಬಗ್ಗೆ 2006–07 ರಿಂದ 2009–10ನೇ ಸಾಲಿನ ಲೆಕ್ಕಪರಿಶೋಧನಾ

MENEZES & ASSOCIATES BANGALORE-94

	ವರದಿಗಳಲ್ಲಿ ವಿವರವಾಗಿ ವಿವರಿಸಲಾಗಿದೆ ಅದರಂತೆ ಕ್ರಮವಿಡುವುದು.
(vi)	**ರಾಜ್ಯ ಗ್ರಾಹಕರ ವೇದಿಕೆಯಲ್ಲಿ ಠೇವಣಿ : ರೂ. 1,78,795/–** ಸಂಸ್ಥೆಯ ಸಾಲು ಪ್ರಾರಂಭಕ್ಕೆ ಗ್ರಾಹಕರ ವೇದಿಕೆಯಲ್ಲಿ ರೂ. 1,40,795/– ಠೇವಣಿ ಇಟ್ಟಿದ್ದು, ಹಾಗೂ ವರದಿ ಸಾಲಿನಲ್ಲಿ ರೂ. 50,000/– ಗಳು ವೆಚ್ಚ ಮಾಡಿದ್ದು, ಇದೇ ಸಾಲಿನಲ್ಲಿ ರೂ. 12,000/– ಜಮಾ ಆಗಿದ್ದು, ವರ್ಷಾಂತ್ಯಕ್ಕೆ ಈ ಲೆಕ್ಕದಲ್ಲಿ ರೂ. 1,78,795/–ಗಳು ಇರುತ್ತದೆ.
	ಜಿ.ಎಸ್.ಟಿ. ಖಾತೆಗಳು : ದಿನಾಂಕ: 31–3–2020ರ ಅಂತ್ಯಕ್ಕೆ ಸಂಸ್ಥೆಯು ಆಸ್ತಿ– ಜವಾಬ್ದಾರಿ ತಃಖ್ತೆಯ ಆಸ್ತಿ ಕಡೆ ಈ ಕೆಳಗಿನ ವಿವರಗಳಂತೆ ಜಿ.ಎಸ್.ಟಿ. ಬಾಬ್ತುಗಳನ್ನು ಹೊಂದಿರುತ್ತದೆ.
	ಸಾಲು ಕಳೆದ ನಂತರ ಈ ಬಾಬ್ತುಗಳನ್ನು ಹೊಂದಾಣಿಕೆ ಮಾಡಿಕೊಳ್ಳಬಹುದಾಗಿರುತ್ತದೆ.

ಕ್ರ.ಸಂ	ವಿವರ	ಮೊಬಲಗು
1	ಎಸ್.ಜಿ.ಎಸ್.ಟಿ ಖಾತೆ	70,690–50
2	ಸಿ.ಜಿ.ಎಸ್.ಟಿ. ಖಾತೆ	70,690–50
3	ಐ.ಜಿ.ಎಸ್.ಟಿ. ಖಾತೆ	1,21,673–54
4	ಜಿ.ಎಸ್.ಟಿ. ಖಾತೆ ಪಾವತಿ	1,12,162–00
	ಒಟ್ಟು ರೂ.	**3,75,216–54**

29) ಮೋಸ, ವಂಚನೆ, ಹಣ ದುರುಪಯೋಗದ ವರದಿ

1	ಹಣ ದುರುಪಯೋಗ ಪತ್ತೆ ಹಚ್ಚಿದ ಕೂಡಲೇ ಸಹಕಾರ ಹಾಗೂ ಲೆಕ್ಕ ಪರಿಶೋಧನಾ ಇಲಾಖಾ ಮೇಲಾಧಿಕಾರಿಗಳಿಗೆ ಅಂತಿಮ ವರದಿ ಸಲ್ಲಿಸಲಾಗಿದೆಯೇ ?	ಹಣ ದುರುಪಯೋಗ ಪತ್ತೆಯಾಗಿರುವುದಿಲ್ಲ.
2	ಪ್ರತಿಯೊಂದು ಹಣದುರುಪಯೋಗದ ಅಂಶದ ಸ್ವರೂಪದ ಬಗ್ಗೆ ದಿನಾಂಕವಾರು, ಹಣದುರುಪಯೋಗ ಮಾಡಿದ ರೀತಿ, ಉದ್ದೇಶ, ಅದರಿಂದ ಸಂಘದ ಆ ದಿನದ ನಗದು ಶಿಲ್ಕುಗಳ ಮೇಲೆ ಆಥವಾ ಆಸ್ತಿಗಳಲ್ಲಿ ಆಗಿರುವ ಕೊರತೆಯ ಬಗ್ಗೆ ವಿವರವಾಗಿ ವಿಮರ್ಷಿಸಿ ಆಪಾದಿತರಿಗೆ ವಿವರಣೆ ನೀಡಲು ನೊಂದಾಯಿತ ಅಂಚೆಯ ಮೂಲಕ ಜ್ಞಾಪನಾ ಪತ್ರ ನೀಡಲಾಗಿದೆಯೇ ?	ಹಣ ದುರುಪಯೋಗ ಇಲ್ಲದಿರುವುದರಿಂದ ಈ ಬಗ್ಗೆ ವಿಮರ್ಶ ಇರುವುದಿಲ್ಲ.
3	ಹಣದುರುಪಯೋಗ ಶಾಬಿತವಾದಲ್ಲಿ ಅದಕ್ಕೆ ಸೂಕ್ತಜವಾಬ್ದಾರಿಯನ್ನು ನಿಗದಿಪಡಿಸಿ, ಫೌಜದಾರಿ ಮತ್ತು ದಿವಾಣಿ ಕ್ರಮಕ್ಕೆ ಏಕೆ ಕ್ರಮ ಕೈಕೊಳ್ಳಬಾರದೆಂಬ ಬಗ್ಗೆ ಸಂಭಂದಪಟ್ಟವವರಿಗೆ ಜಾರಿ ಮಾಡಿರುವ ನೋಟಿಸು ಹಾಗೂ ಸಮನ್ಸಗಳ ಕುರಿತು ಹಾಗೂ ಅದಕ್ಕೆ ಅವರು ನೀಡಿರುವ ವಿವರಣೆಯನ್ನು ಪರಿಗಣಿಸಿದ ಬಗ್ಗೆ ವಿವರವಾಗಿ ವಿಮರ್ಷಿಸುವುದು.	ಅನ್ವಯಿಸುವುದಿಲ್ಲ.
4	ಹಣ ದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಪೂರಕ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಪಡೆದು ವರದಿಗೆ ಲಗತ್ತಿಸಿರುವ ಬಗ್ಗೆ ವಿವರವಾಗಿ ವಿಮರ್ಷಿಸುವುದು.	ಅನ್ವಯಿಸುವುದಿಲ್ಲ.
5	ಹಣದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಸಂಘದ ಆರ್ಥಿಕ ತ:ಖ್ತೆಗಳಲ್ಲಿ ಜವಾಬ್ದಾರಿ ಗೊತ್ತುಪಡಿಸಿ, ಸದರಿ ರಕ್ಕಮುಗಳಿಗೆ ಸೂಕ್ತ	ಅನ್ವಯಿಸುವುದಿಲ್ಲ.

	ಅವಕಾಶ ಕಲ್ಪಿಸಿರುವದರ ಬಗ್ಗೆ ಹಾಗೂ ಹಣದುರೂಪಯೋಗದ ರಕ್ಕಮನ್ನು ವಸೂಲಿಸುವ ಕುರಿತು ಕೈಕೊಳ್ಳಬಹುದಾದ ಕ್ರಮಗಳ ಕುರಿತು ವಿವರವಾಗಿ ವಿಮರ್ಷಿಸುವುದು.	
6	ಹಣದುರೂಪಯೋಗದ ರಕಮನ್ನು ವಸೂಲಿಸಲು ಸಂಘವು ತೆಗೆದುಕೊಂಡಿರುವ ಕ್ರಮಗಳ ಕುರಿತು ವಿಮರ್ಷಿಸುವುದು.	ಅನ್ವಯಿಸುವುದಿಲ್ಲ.
7	ಹಣ ದುರುಪಯೋಗವುಳ್ಳ ವರದಿಯನ್ನು ಮೇಲಾಧಿಕಾರಿಗಳಿಂದ ಮೇಲ್ವಿಚಾರಣೆ ಕೈಕೊಂಡು, ಅವರು ಸೂಚಿಸಿರುವ ಎಲ್ಲ ಸೂಚನೆಗಳು ವರದಿಯಲ್ಲಿ ಅಳವಡಿಸಿ ಕೊಂಡಿರುವ ಬಗ್ಗೆ ವಿವರವಾಗಿ ವಿಮರ್ಷಿಸುವುದು.	ಅನ್ವಯಿಸುವುದಿಲ್ಲ.
30	ಸಂಘದ ದುಡಿಯುವ ಬಂಡವಾಳ (ಆಸ್ತಿ ಜವಾಬ್ದಾರಿ ತ:ಖ್ತೆಯಲ್ಲಿನ ಜವಾಬ್ದಾರಿ ಕಡೆಯ ಒಟ್ಟು ಮೊತ್ತದಲ್ಲಿ ಆ ಸಾಲಿನ ನಿವ್ವಳ ಲಾಭ ಮತ್ತು ಪಾವತಿಸಲು ಮಾಡಿದಂತಹ ಅವಕಾಶಗಳನ್ನು ಹೊರತು ಪಡಿಸಿ ಬರುವ ಮೊತ್ತವು ಸಂಘದ ದುಡಿಯುವ ಬಂಡವಾಳವಾಗಿರುತ್ತದೆ)	ರೂ. 266,54,04,317/-

(31) ಸಂಘದ ಸರಾಸರಿ ಠೇವು ವೆಚ್ಚ, ಆದಾಯ ಗಳಿಕೆ ಹಾಗೂ ನಿವ್ವಳ ಮಾರ್ಜಿನ್ ವಿವರ:

ಕಾಸ್ಟ್ ಆಫ್ ಡಿಪಾಜಿಟ್ (Cost Of Deposit) (ರೂ. ಲಕ್ಷಗಳಲ್ಲಿ)

ಸಂಘವು ಹೊಂದಿದ ಠೇವಣಿ ಹಾಗೂ ವರದಿ ಸಾಲಿನಲ್ಲಿ ಭರಿಸಿದ ವೆಚ್ಚದ ವಿವರ ಈ ರೀತಿ ಇರುತ್ತದೆ.

ಠೇವು ಮೊತ್ತ	ಬಡ್ಡಿ	ಪಿಗ್ಮಿ ಕಮೀಷನ್	ಒಟ್ಟೂ ವೆಚ್ಚ	ಪ್ರತಿಶತ ವೆಚ್ಚ
1753.37	140.91	–	140.91	8.03

ಕಾಸ್ಟ್ ಆಫ್ ಫಂಡ್: (Cost of Fund)

ಅ ನಂ.	ವಿವರ	ಮೊತ್ತ	ರಿಲೇಟಿವ್ ಷೇರು	ವೆಚ್ಚ	ರೂ.100ಕ್ಕೆ ವೆಚ್ಚ	ವೇಯ್ಟೆಡ್ ಎವರೇಜ್ is = to 4*6/100
1	2	3	4	5	6	7
1	ಷೇರು	454.96	6.30	–	–	–
2	ನಿಧಿಗಳು	2836.21	39.28	–	–	–
3	ಪಡೆದ ಸಾಲಗಳು	1050.00	14.54	130.45	12.42	1.81
4	ಠೇವಣಿಗಳು ಬಡ್ಡಿ ಬಾಬ್ತು ಸೇರಿ	1858.87	25.75	140.90	7.58	1.95
5	ಇತರೆ ಜವಾಬ್ದಾರಿ	1020.33	14.13	–	–	–
	ಅಂತೂ	**7220.37**	**100.00**	**271.35**	**20.00**	**3.76**

YIELD ON ASSETS:

ಪ್ರಸಕ್ತ ಸಾಲಿನಲ್ಲಿ ಸಂಘದ ದುಡಿಯುವ ಬಂಡವಾಳದ ವಿವಿಧ ಬಾಬುಗಳು ಹಾಗೂ ಅವುಗಳಿಂದ ಗಳಿಸಿದ ಉತ್ಪನ್ನದ ಪ್ರಮಾಣ ಈ ಕೆಳಗಿನಂತಿರುತ್ತದೆ

ಕ್ರಮ ಸಂಖ್ಯೆ	ವಿವರ	ರಕಂ	ಒಟ್ಟು ಆಸ್ತಿಯಲ್ಲಿ ಶೇ. ಪ್ರಮಾಣ	ಆದಾಯ	ಶೇ. ಆದಾಯ	ವೇಯ್ಟೇಡ್ ಎವರೇಜ್ = is to 4*6/100
1	2	3	4	5	6	7
1	ನಗದು, ಬ್ಯಾಂಕ್ ಶಿಲ್ಕುಗಳು	210.78	3.04	2.07	0.98	0.03
2	ಗುಂತಾವಣೆಗಳು	611.19	8.83	34.23	5.60	0.49
3	ಸಾಲಗಳು	5402.43	78.02	641.95	11.88	9.27

MENEZES & ASSOCIATES BANGALORE-94 CHARTERED ACCOUNTANTS

4	ಸ್ಥಿರಾಸ್ತಿಗಳು	629.32	9.09	78.02	12.39	1.12
5	ಇತರೆ ಆಸ್ತಿಗಳು	70.95	1.02	23.59	33.39	0.37
	ಅಂತೂ	**6924.67**	**100.00**	**779.96**	**64.24**	**11.28**

COST OF MANAGEMENT (ನಿರ್ವಹಣಾ ವೆಚ್ಚ) :

ಸಿಬ್ಬಂದಿ ವೆಚ್ಚ + ಆಡಳಿತ ವೆಚ್ಚ / ದುಡಿಯುವ ಬಂಡವಾಳ * 100

196.70 + 15.49 / 26654.04 * 100 = 0.79

NORMS OF VIABILITY:

1.	ಆಸ್ತಿಗಳ ಮೇಲೆ ಸರಾಸರಿ ಆದಾಯ ಪ್ರತಿಶತ (Yield on asset) ಕಲಂ (7)	11.28
2.	ಬಂಡವಾಳ ವೆಚ್ಚ (Cost of Fund)	3.76
3.	Financial Margin (1-2)	7.52
4.	Cost of Management (in %)	0.79
5.	Risk Cost (NPA Provision / Working Capital * 100) 613-62 / 26654.04 * 100 = 0.24	2.30
6.	ನಿವ್ವಳ ಮಾರ್ಜಿನ್ (Net Margin) (3–4–5) (7.52 – 0.79 – 2.30)	4.43
7.	ಸಂಘವು ಪ್ರತಿ 100 ರೂಪಾಯಿಗೆ ರೂ. 4.43 ರಷ್ಟು ಲಾಭ ಗಳಿಸಿರುತ್ತದೆ.	

(32) ನಿಬಂಧಕರ ಆದೇಶಗಳ ಅನುಪಾಲನೆ

1	ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 64 ರ ಅನ್ವಯ ಯಾವುದಾದರೂ ವಿಚಾರಣೆ ನಡೆದಿದೆಯೇ?	ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 64 ರನ್ವಯ ಯಾವುದೇ ವಿಚಾರಣೆ ನಡೆದಿರುವುದಿಲ್ಲ.
2	ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 65 ರ ಅನ್ವಯ ಯಾವುದಾದರೂ ಪರಿವೀಕ್ಷಣೆ ನಡೆದಿದೆಯೇ?	ಪ್ರಸಕ್ತ ಸಾಲಿನ ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಸಂಘದ ಮೇಲೆ ಕಲಂ 65ರ ಅನ್ವಯ ಯಾವುದೇ ಪರಿವೀಕ್ಷಣೆ ನಡೆದಿರುವುದಿಲ್ಲ.
3	ಮೇಲ್ಕಂಡ ಸಂದರ್ಭಗಳಲ್ಲಿ ಕಂಡು ಬಂದ ನ್ಯೂನ್ಯತೆಗಳನ್ನು ನಿವಾರಿಸಲು ನಿಬಂಧಕರಿಂದ ಕಲಂ 68 ರ ಅಡಿ ಆದೇಶ ಜಾರಿಯಾಗಿದೆಯೇ?	ಅನ್ವಯಿಸುವುದಿಲ್ಲ.
4	ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಮತ್ತು ಆರ್ಥಿಕ ತಃಖ್ತೆಗಳಲ್ಲಿ ನಿಬಂಧಕರ ಕಲಂ 68 ರ ಅಡಿ ಆಗಿರುವ ಆದೇಶವನ್ನು ಪರಿಗಣಿಸಿ ಸೂಕ್ತವಾಗಿ ಅಳವಡಿಕೆ ಮಾಡಿಕೊಂಡಿದ್ದಾರೆಯೇ?	ಅನ್ವಯಿಸುವುದಿಲ್ಲ.

ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ವಿವರಗಳು
(ಶೆಡ್ಯೂಲ್ ಇ ನಲ್ಲಿರುವ ವಿವರಗಳ ಬಗ್ಗೆ ಜಿಪ್ಪಣಿ)

1	ಸಂಘದ ಉಪನಿಯಮದ ಪ್ರಕಾರ ನಿರ್ದೇಶಕರ ಸಂಖ್ಯೆ	ಸಂಸ್ಥೆಯ ಉಪ ನಿಯಮ 28 ರಂತೆ ಒಟ್ಟು ನಿರ್ದೇಶಕರ ಸಂಖ್ಯೆ 27		
2	ಮೀಸಲಾತಿ ಮತ್ತು ಅವುಗಳ ಭರ್ತಿ ಬಗ್ಗೆ ವಿವರ	ಮೀಸಲಾತಿ ಭರ್ತಿ ವಿವರ ಈ ಕೆಳಗಿನಂತಿರುತ್ತದೆ.		
		1	ಜಿಲ್ಲಾವಾರು ಸಾಲ ಪಡೆದ ಸಂಘಗಳ ಕ್ಷೇತ್ರದಿಂದ ಚುನಾಯಿತರಾದವರು	19
		2	ಸಾಲ ಪಡೆಯದ ಗೃಹ ನಿರ್ಮಾಣ ಸಹಕಾರ ಸಂಘಗಳಿಂದ ಚುನಾಯಿತರಾದವರು	2
		3	ವೃತ್ತಿಪರ ಸದಸ್ಯರು	2
		4	ಕಾರ್ಯ ನಿರ್ವಹಣಾ ಸದಸ್ಯರು	3
		5	ವ್ಯವಸ್ಥಾಪಕ ನಿರ್ದೇಶಕರು	1
			ಒಟ್ಟು	27
3	ಪ್ರಸಕ್ತ ಮಂಡಳಿಯು ಅಧಿಕಾರ ವಹಿಸಿಕೊಂಡ ದಿನಾಂಕ	ಪ್ರಸಕ್ತ ಮಂಡಳಿಯು ಅಧಿಕಾರ ವಹಿಸಿಕೊಂಡ ದಿನಾಂಕ: 29–06–2019		

MENEZES & ASSOCIATES BANGALORE-94 CHARTERED ACCOUNTANTS

4	ಮಂಡಳಿಯ ಅವಧಿ	ಮಂಡಳಿಯ ಅವಧಿ 2019–20 ರಿಂದ 2023–24
5	ಖಾಲಿ ಇರುವ ಹುದ್ದೆಗಳ ಸಂಖ್ಯೆ ಮತ್ತು ಅವಧಿ	ವರ್ಷಾಂತ್ಯಕ್ಕೆ ಆಡಳಿತ ಮಂಡಳಿಯಲ್ಲಿ ಯಾವುದೇ ಹುದ್ದೆ ಖಾಲಿ ಇರುವುದಿಲ್ಲ.
6	ಪ್ರಸಕ್ತ ಸಾಲಿನಲ್ಲಿ ನಡೆದ ಮಂಡಳಿಯ ಸಭೆಗಳ ಸಂಖ್ಯೆ	ಪ್ರಸಕ್ತ ಸಾಲಿನಲ್ಲಿ ನಡೆದ ಮಂಡಳಿಯ ಸಭೆಗಳ ಸಂಖ್ಯೆ 5 (ಐದು)
7	ಮಂಡಳಿಯ ಸಭೆಗಳಿಗಾಗಿ ಆದ ವೆಚ್ಚ	ಮಂಡಳಿಯ ಸಭೆಗಳಿಗೆ ರೂ. 3,72,147–46 ಗಳನ್ನು ವೆಚ್ಚ ಮಾಡಲಾಗಿದೆ.
8	ನಿರ್ದೇಶಕರ ತರಬೇತಿ ಕಾರ್ಯಕ್ರಮಗಳ ವಿವರ	ವರದಿ ಸಾಲಿನಲ್ಲಿ ನಿರ್ದೇಶಕರುಗಳಿಗೆ ಯಾವುದೇ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ.
9	ನಿರ್ದೇಶಕರ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ	ವರದಿ ಸಾಲಿನಲ್ಲಿ ನಿರ್ದೇಶಕರುಗಳಿಗೆ ಯಾವುದೇ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲದಿರುವುದರಿಂದ ಯಾವುದೇ ವೆಚ್ಚವಾಗಿರುವುದಿಲ್ಲ.
10	ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ಸಭೆಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ವಿವರ	ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ಸಭೆಗಳಲ್ಲಿ ಚರ್ಚಿಸಿದ ವಿಷಯಗಳು ಈ ಕೆಳಕಂಡಂತಿರುತ್ತದೆ.
	1}	ಜಮಾ–ಖರ್ಚು ತಃಖ್ತೆಯನ್ನು ಒಪ್ಪಿ ಅಂಗೀಕರಿಸುವ ವಿಚಾರ.
	2}	ಬಡಾವಣೆ ಅಭಿವೃದ್ಧಿ ಬಗ್ಗೆ.
	3}	ಸದಸ್ಯರುಗಳಿಗೆ ಪಾವತಿಸುವ ನಿವೇಶನ ಮೊತ್ತವನ್ನು ಅವರ ಅಪೇಕ್ಷೆ ಮೇರೆಗೆ ಪಾವತಿ ಮಾಡುವುದರ ಕುರಿತು.
	4}	ಠೇವಣಿಗಳ ಮೇಲಿನ ಬಡ್ಡಿ ದರ ನಿಗದಿಪಡಿಸುವುದು.
	5}	ಸಾಲಗಳನ್ನು ಮಂಜೂರು ಮಾಡುವ ಬಗ್ಗೆ
	6}	ಸದಸ್ಯತ್ವದ ಅಂಗೀಕಾರ

(33) ಸಂಘದ ಆಡಳಿತ :

ನಿರ್ದೇಶಕರ ಸಭಾ ಹಾಜರಾತಿ

ಕ್ರ.ಸಂ	ನಿರ್ದೇಶಕರ ಹೆಸರು	ಹುದ್ದೆ	ಹಾಜರಾದ ಸಭೆಗಳ ಸಂಖ್ಯೆ	ಸಂಭಾವನೆ
1	ಎಸ್.ಟಿ.ಸೋಮಶೇಖರ್	ಅಧ್ಯಕ್ಷರು	1/1	1,000
2	ಕೆ.ವೀರಣ್ಣ	ಉಪಾಧ್ಯಕ್ಷರು	1/1	9,140
3	ಎಸ್.ಬಸವರಾಜ ಪಾಟೀಲ	ನಿರ್ದೇಶಕರು	1/0	–
4	ಟಿ.ವಿ.ಶಿವಶಂಕರಪ್ಪ	ನಿರ್ದೇಶಕರು	1/1	8,240
5	ಗದಿಗೆಪ್ಪಗೌಡ ಪಾಟೀಲ್	ನಿರ್ದೇಶಕರು	1/1	11,200
6	ಉಮಾಕಾಂತ	ನಿರ್ದೇಶಕರು	1/1	16,800
7	ಶ್ರೀ ಎಂ.ಬಸವರಾಜ್	ನಿರ್ದೇಶಕರು	1/1	4,550
8	ಎನ್.ಸಿ.ನಾಗಭೂಷಣ್	ನಿರ್ದೇಶಕರು	1/1	5,080
9	ಟಿ.ಎಂ.ಧರ್ಮೇಗೌಡ	ನಿರ್ದೇಶಕರು	1/1	4,500
10	ಮಹಂತೇಶ್ ಎಸ್.ಪಾಟೀಲ್	ನಿರ್ದೇಶಕರು	1/1	13,120
11	ಶ್ರೀ ಸಂತೋಷ್ ಸೋ. ಮೆಳ್ಳಿಗೇರಿ,	ನಿರ್ದೇಶಕರು	1/1	12,520
12	ಸುರೇಶ್ .ಎಂ.(ಸತೀಶ್)	ನಿರ್ದೇಶಕರು	1/1	5,160
13	ಸೋಮಶೇಖರ ಗೋನಾಯಕ್	ನಿರ್ದೇಶಕರು	1/1	15,700
14	ಎಂ.ಬಿ. ಮಂಜೇಗೌಡ	ನಿರ್ದೇಶಕರು	1/1	2,100
15	ತಿಬ್ಬೇಗೌಡ .ಎಂ.	ನಿರ್ದೇಶಕರು	1/0	–
16	ಎಂ.ಸದಾನಂದ	ನಿರ್ದೇಶಕರು	1/0	–
17	ಎನ್.ಆರ್.ನಿರಂಜನ್	ನಿರ್ದೇಶಕರು	1/1	2,860
18	ಬಿ.ಸಿ.ಶಿವಲಿಂಗೇಗೌಡ	ನಿರ್ದೇಶಕರು	1/1	1,000
19	ಶಿವರಾಮಗೌಡ	ನಿರ್ದೇಶಕರು	1/1	10,440
20	ಸಿ.ಎಂ.ಪಾಟೀಲ್	ನಿರ್ದೇಶಕರು	1/1	8,700
21	ಜಿ.ಎನ್.ಆರ್.ಮೋಹನ ಕುಮಾರ	ನಿರ್ದೇಶಕರು	1/0	–

MENEZES & ASSOCIATES BANGALORE-94 CHARTERED ACCOUNTANTS

22	ವಸಂತನಾಯಕ್	ನಿರ್ದೇಶಕರು	1/0	–
23	ಶ್ರೀ ಬಾಲಚಂದ್ರ ನಾಗಪ್ಪ ಮುಂಜಾನೆ	ನಿರ್ದೇಶಕರು	1/0	–
24	ಸೀನಿಯರ್ ಡಿವಿಜನಲ್ ಮ್ಯಾನೇಜರ್, ಭಾರತೀಯ ಜೀವ ವಿಮಾ ನಿಗಮ,	ನಿರ್ದೇಶಕರು	1/0	–
25	ವೈ.ಹೆಚ್.ಗೋಪಾಲಕೃಷ್ಣ	ವ್ಯವಸ್ಥಾಪಕ ನಿರ್ದೇಶಕರು	1/1	1,000

ದಿನಾಂಕ: 29-06-2019 ರಿಂದ ಐದು ವರ್ಷಗಳ ಅವಧಿಗೆ ಚುನಾಯಿತರಾದ ಆಡಳಿತ ಮಂಡಳಿ ನಿರ್ದೇಶಕರ ಸಭಾ ಹಾಜರಾತಿ

ಕ್ರ.ಸಂ	ನಿರ್ದೇಶಕರ ಹೆಸರು	ಹುದ್ದೆ	ಹಾಜರಾದ ಸಭೆಗಳ ಸಂಖ್ಯೆ	ಸಂಭಾವನೆ
1	ಎಸ್.ಟಿ.ಸೋಮಶೇಖರ್	ಅಧ್ಯಕ್ಷರು	4/3	78,392
2	ಟಿ.ವಿ.ಶಿವಶಂಕರಪ್ಪ	ಉಪಾಧ್ಯಕ್ಷರು	4/4	41,200
3	ಬಿ.ಸಿ.ಶಿವಲಿಂಗೇಗೌಡ	ಖಜಾಂಚಿಗಳು	4/4	7,000
4	ಕೆ ವೀರಣ್ಣ	ನಿರ್ದೇಶಕರು	4/4	45,700
5	ಎಸ್.ಬಸವರಾಜ ಪಾಟೀಲ	ನಿರ್ದೇಶಕರು	4/4	41,450
6	ಗದಿಗೆಪ್ಪಗೌಡ ಪಾಟೀಲ್	ನಿರ್ದೇಶಕರು	4/4	56,000
7	ಉಮಾಕಾಂತ	ನಿರ್ದೇಶಕರು	4/3	67,200
8	ಮಹಂತೇಶ್ ಎಸ್.ಪಾಟೀಲ್	ನಿರ್ದೇಶಕರು	4/4	65,600
9	ಸಂತೋಷ್ ಸೋ. ಮೆಳ್ಳಿಗೇರಿ,	ನಿರ್ದೇಶಕರು	4/4	62,600
10	ಸುರೇಶ್ .ಎಂ.(ಸತೀಶ್)	ನಿರ್ದೇಶಕರು	4/3	20,640
11	ಸೋಮಶೇಖರ ಗೋನಾಯಕ್	ನಿರ್ದೇಶಕರು	4/3	62,800
12	ಡಾ॥ ಎಂ.ಬಿ. ಮಂಜೇಗೌಡ	ನಿರ್ದೇಶಕರು	4/2	4,200
13	ಎಂ.ಸದಾನಂದ	ನಿರ್ದೇಶಕರು	4/1	1,000
14	ಎನ್.ಆರ್.ನಿರಂಜನ್	ನಿರ್ದೇಶಕರು	4/4	14,300
15	ಶ್ರೀ ಬಾಲಚಂದ್ರ ನಾಗಪ್ಪ ಮುಂಜಾನೆ	ನಿರ್ದೇಶಕರು	4/4	67,300
16	ಆದಿಭಾಸ್ಕರಯ್ಯ ಶೆಟ್ಟಿ	ನಿರ್ದೇಶಕರು	4/4	18,750
17	ತ್ಯಾಗರಾಜ್	ನಿರ್ದೇಶಕರು	4/4	11,650
18	ಎಂ.ಎಸ್. ವಿಶ್ವನಾಥ್	ನಿರ್ದೇಶಕರು	4/4	25,400
19	ವಿಶ್ವನಾಥಭೂತೆ	ನಿರ್ದೇಶಕರು	4/2	25,800
20	ಪುಟ್ಟಸ್ವಾಮಿ	ನಿರ್ದೇಶಕರು	4/4	8,625
21	ಎಸ್. ಮಹಬೂಬ್	ನಿರ್ದೇಶಕರು	4/4	5,000
22	ಎಸ್.ಬಿ.ಎಂ. ಮಂಜು	ನಿರ್ದೇಶಕರು	4/2	8,600
23	ಬೈರಪ್ಪಗೌಡ	ನಿರ್ದೇಶಕರು	4/3	11,340
24	ಡಾ॥ ಅನಿಲ್ ಕುಮಾರ್	ನಿರ್ದೇಶಕರು	4/3	3,000
25	ಬಿ.ಸಿ. ಸತೀಶ್	ವ್ಯವಸ್ಥಾಪಕ ನಿರ್ದೇಶಕರು	4/4	26,335

ಮಂಡಳಿ, ಸಮಿತಿಗಳು, ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ

1	ಮಂಡಳಿಯ/ ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸುತ್ತಿದ್ದಾರೆಯೇ?	ನಡೆಸುತ್ತಿದ್ದಾರೆ.
2	ಸಂಘದ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆಯೆ?	ಸಂಸ್ಥೆಯ ಉಪ ನಿಯಮ 43 ರಂತೆ ವರ್ಷಕ್ಕೆ ಕನಿಷ್ಟ 5 ಆಡಳಿತ ಮಂಡಳಿ ಸಭೆಗಳು ನಡೆಯಬೇಕಾಗಿರುತ್ತದೆ.
3	ಮಂಡಳಿಯ/ಸಮಿತಿಗಳ ಸಭೆಗಳ ನಡಾವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ	ಸಮಿತಿ ಸಭೆಗಳ ನಡಾವಳಿಗಳಲ್ಲಿ ವಿಶೇಷ ಏನೂ ಇರುವುದಿಲ್ಲ.

ನಿರ್ದೇಶಕರ, ಅವರ ಕುಟುಂಬ ವರ್ಗದವರ, ಅವರ ಆಸಕ್ತ ಸಂಸ್ಥೆಗಳ ಸಾಲಗಳ ಬಗ್ಗೆ ಟಿಪ್ಪಣಿ

1	ನಿರ್ದೇಶಕರಿಗೆ ನೀಡಿರುವ ಸಾಲಗಳು ಬೈಲಾ ಮತ್ತು ಇಲಾಖೆಯು ನೀಡಿದ ಮಾರ್ಗಸೂಚಿ ಗಳಿಗೆ ಅನ್ವಯವಾಗಿದೆಯೆ?	ನಿರ್ದೇಶಕರುಗಳು ಯಾವುದೇ ಸಾಲವನ್ನು ಪಡೆದಿರುವುದಿಲ್ಲ.

MENEZES & ASSOCIATES CHARTERED ACCOUNTANTS BANGALORE-94

2	ಎಲ್ಲ ನಿರ್ದೇಶಕರು ಬೈಲಾದನ್ವಯ ಕನಿಷ್ಟ ವ್ಯವಹಾರ ನಡೆಸಿದ್ದಾರೆಯೆ?	ಸಂಸ್ಥೆಯ ಹೊಸ ಆಡಳಿತ ಮಂಡಳಿ ಮುಂದಿನ ಸಾಲಿನಿಂದ ಜಾರಿಗೆ ಬಂದಿರುವುದರಿಂದ ಅಲ್ಲಿಂದ ಕನಿಷ್ಟ ವ್ಯವಹಾರದ ಮಾಹಿತಿ ಕರಾರುವಕ್ಕಾಗಿ ನಿರ್ವಹಿಸಲು ಸೂಚಿಸಲಾಗಿದೆ.
3	ನಿರ್ದೇಶಕರು ಅಥವಾ ಅವರ ಕುಟುಂಬದವರು ಸಾಲ ಪಡೆದಿದ್ದರೆ ಅವುಗಳ ವಿವರ	ನಿರ್ದೇಶಕರು ಅಥವಾ ಅವರ ಕುಟುಂಬದವರು ಯಾವುದೇ ಸಾಲ ಪಡೆದಿರುವುದಿಲ್ಲ.
4	ನಿರ್ದೇಶಕರು ಅಥವಾ ಅವರ ಕುಟುಂಬದವರು ಜಾಮೀನು ನೀಡಿದ್ದರೆ ಅವುಗಳ ವಿವರ	ನಿರ್ದೇಶಕರು ಅಥವಾ ಅವರ ಕುಟುಂಬದವರು ಯಾವುದೇ ಜಾಮೀನು ನೀಡಿರುವುದಿಲ್ಲ.
5	ಒಂದು ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಹಾಗೂ ಮುದ್ದತ್ತು ಮೀರಿರುವ ನಿರ್ದೇಶಕರು ಅಥವಾ ಅವರ ಕುಟುಂಬದವರು ಪಡೆದಿರುವ ಸಾಲ	ನಿರ್ದೇಶಕರು ಯಾರೂ ಸಾಲ ಪಡೆಯದೆ ಇರುವುದರಿಂದ ಸುಸ್ತಿಯ ಪ್ರಶ್ನೆ ಉದ್ಭವಿಸುವುದಿಲ್ಲ.

34. ವಾರ್ಷಿಕ ಸಾಮಾನ್ಯ ಸಭೆ

1	ಹಿಂದಿನ ಸಾಲಿನ ವಾರ್ಷಿಕ ಸಭೆ ನಡೆದ ದಿನಾಂಕ	ದಿನಾಂಕ: 23-09-2019
2	ಸಂಘದ ಉಪನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕೋರಂ	ಉಪ ನಿಯಮ ಸಂಖ್ಯೆ 59(4)ರ ಪ್ರಕಾರ ಅರ್ಹ ಸದಸ್ಯರ ಶೇಕಡ 10 ರಷ್ಟು ಅಂದರೆ 44
3	ಹಾಜರಾತಿ ಪುಸ್ತಕದ ಪ್ರಕಾರ ಹಾಜರಿದ್ದ ಸದಸ್ಯರ ಸಂಖ್ಯೆ	152
4	ಸಭಾ ನಡಾವಳಿಗಳ ಪರಿಶೀಲನೆ ಬಗ್ಗೆ ಟಿಪ್ಪಣಿ	ಸಭಾ ನಡವಳಿಗಳನ್ನು ಪರಿಶೀಲಿಸಲಾಗಿದೆ.
5	ಸದರಿ ಸಭೆಯಲ್ಲಿ ಕಳೆದ ವರ್ಷದ ಅಂದಾಜು ಆಯ ವ್ಯಯ ಪತ್ರದ ಮಿತಿಕಿಂತ ಹೆಚ್ಚಿಗೆ ಆಗಿರುವ ವೆಚ್ಚಗಳ ಬಗ್ಗೆ ಅನುಮೋದನೆ ಪಡೆಯಲಾಗಿದೆಯೇ ? ವಿವರಿಸಿ.	ಅನುಮೋದನೆ ಪಡೆಯಲಾಗಿದೆ.
6	ಸದರಿ ಸಭೆಯಲ್ಲಿ ಮುಂದಿನ ವರ್ಷದ ಅಂದಾಜು ಆಯವ್ಯಯ ಪತ್ರ ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ ?	ಸದರಿ ಸಭೆಯಲ್ಲಿ ಮುಂದಿನ ವರ್ಷದ (2018-19ನೇ ಸಾಲಿನ) ಅಂದಾಜು ಆಯ-ವ್ಯಯ ಪತ್ರ ಮಂಡಿಸಿದ್ದು, ಅನುಮೋದನೆ ಪಡೆಯಲಾಗಿದೆ
7	ಸದರಿ ಸಭೆಯಲ್ಲಿ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆಯೆ?	ಸದರಿ ಸಭೆಯಲ್ಲಿ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳನ್ನು (2019-20ನೇ ಸಾಲಿನ) ಮಂಡಿಸಿ ಅನುಮೋದನೆ ಪಡೆಯಲಾಗಿದೆ.
8	ಸದರಿ ಸಭೆಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧನೆಯ ಕುರಿತು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಲಾಗಿದೆಯೇ?	ಸದರಿ ಸಭೆಯಲ್ಲಿ (2019-20ನೇ ಸಾಲಿನ) ಶಾಸನಬದ್ಧ ಲೆಕ್ಕ ಪರಿಶೋಧನೆಯ ಕುರಿತು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಲಾಗಿದೆ
9	ವಾರ್ಷಿಕ ಸಭೆಯ ನಡಾವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ	ವಾರ್ಷಿಕ ಸಭೆಯ ನಡಾವಳಿಗಳನ್ನು ಅಂಗೀಕರಿಸಲಾಗಿದೆ. ಯಾವುದೇ ವ್ಯತಿರಿಕ್ತ ನಮೂದು ಇರುವುದಿಲ್ಲ.

35. ಸಿಬ್ಬಂದಿ ವರ್ಗ:

1	ಸಂಘದಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ.	ಮಂಜೂರಾದ ಹುದ್ದೆಗಳು – 53 ಕಾರ್ಯ ನಿರ್ವಹಿಸುತ್ತಿರುವ ಖಾಯಂ ನೌಕರರು-21 ತಾತ್ಕಾಲಿಕ ನೌಕರರು -08
2	ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸುರುವ ಬಗ್ಗೆ.	1) ಸಿಬ್ಬಂದಿ ವೇತನ ಶ್ರೇಣಿ ಮಂಜೂರಾಗಿರುತ್ತದೆ. 2) ಸೇವಾ ಪುಸ್ತಕಗಳನ್ನು ನಿರ್ವಹಿಸಲಾಗಿದೆ.
3	ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಲಭ್ಯವಿರುವ ಬಗ್ಗೆ.	ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಸಂಸ್ಥೆಯಲ್ಲಿ ಲಭ್ಯವಿರುತ್ತದೆ.
4	ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಹುದ್ದೆ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವೇತನ ಶ್ರೇಣಿ, ಮೂಲ ವೇತನ, ವಿದ್ಯಾರ್ಹತೆ ಇತ್ಯಾದಿ ವಿವರಗಳೊಂದಿಗೆ ನೀಡುವುದು.	ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.
5	ಸಿಬ್ಬಂದಿಯಿಂದ ನಿಬಂಧಕರ ಸುತ್ತೋಲೆಯಂತೆ ಭದ್ರತೆ ಪಡೆದಿರುವ ಬಗ್ಗೆ:	ಸಂಸ್ಥೆಯು ಕಛೇರಿಯ ಕೆಲಸಗಳು ಮತ್ತು ನೌಕರರ ಸೇವಾ ನಿಯಮಗಳ ಸಂಖ್ಯೆ 83 ರಂತೆ ವಿವಿಧ ಸಿಬ್ಬಂದಿಗೆ ವಿವಿಧ ರೀತಿಯ ನಗದು ಭದ್ರತೆ ಮೊಬಲಗು ಪಡೆಯಲಾಗಿದೆ. ಆದರೆ ಅದೇ ಉಪನಿಯಮದಂತೆ ಕರ್ತವ್ಯ

MENEZES & ASSOCIATES BANGALORE-94 CHARTERED ACCOUNTANTS

		ನಿರ್ವಹಿಸುತ್ತಿರುವ ನಂಬಿಕೆ ಖಾತರಿಯನ್ನು ಪಡೆಯಬೇಕಾಗಿದ್ದು, ಪಡೆದಿರುವುದಿಲ್ಲ.
6	ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು	ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು ರೂ. 1,96,70,738/-
7	ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ ವೆಚ್ಚ	ಶೇಕಡ 0.73
8	ವರದಿ ಸಾಲಿನಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿದ್ದಲ್ಲಿ ಅದರ ವಿವರ ಹಾಗೂ ನೇಮಕಾತಿಯಲ್ಲಿ ಏನಾದರೂ ಕಾಯ್ದೆ / ಸುತ್ತೋಲೆ ಉಲ್ಲಂಘನೆ ಇದ್ದಲ್ಲಿ ನಮೂದಿಸುವುದು.	ವರದಿ ಸಾಲಿನಲ್ಲಿ ಯಾವುದೇ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿರುವುದಿಲ್ಲದಿರುವುದರಿಂದ ಕಾಯ್ದೆ / ಸುತ್ತೋಲೆ ಉಲ್ಲಂಘನೆ ಪ್ರಶ್ನೆ ಉದ್ಭವಿಸುವುದಿಲ್ಲ.
9	ಸಿಬ್ಬಂದಿ ಬೋನಸ್ ಪಾವತಿ ಸಹಕಾರ ಕಾಯ್ದೆ ರೀತಿ ಅಥವಾ ಬೋನಸ್ ಕಾಯ್ದೆ ರೀತಿ ಮಾಡಲಾಗಿದೆಯೇ? ಇದು ಸರಿ ಇರುವ ಬಗ್ಗೆ ದೃಡೀಕರಿಸುವುದು.	ಮಹಾಮಂಡಲದ ಉಪ ನಿಯಮ ಸಂಖ್ಯೆ 61 **(ix)** ರಂತೆ ಸಿಬ್ಬಂದಿಗಳಿಗೆ ಬೋನಸ್ ಪಾವತಿಸಲಾಗುತ್ತಿದೆ.
10	ಷೆಡ್ಯೂಲ್ ಇ ನಲ್ಲಿರುವ ಸಿಬ್ಬಂದಿ ವಿವರಗಳು ಸಂಘದ ದಾಖಲೆಗಳಿಗೆ ತಾಳೆಯಾಗುತ್ತವೆಯೇ?	ಷೆಡ್ಯೂಲ್ "ಇ" ನಲ್ಲಿರುವ ಸಿಬ್ಬಂದಿ ವಿವರಗಳು ಸಂಘದ ದಾಖಲೆಗಳಿಗೆ ತಾಳೆಯಾಗುತ್ತವೆ.
11	ಸಿಬ್ಬಂದಿಗಾಗಿ ಖರ್ಚುಮಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯೊಳಗಿದೆಯೆ?	ಸಿಬ್ಬಂದಿಗಾಗಿ ಖರ್ಚು ಮಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯೊಳಗೆ ಇರುತ್ತದೆ.

1. ಸಿಬ್ಬಂದಿಗಳಿಗೆ ಮತ್ತು ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ

1	ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ	ಸದರಿ ಅವಧಿಯಲ್ಲಿ ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳು ನಡೆಸಿರುವುದಿಲ್ಲ.
2	ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ	ಅನ್ವಯಿಸುವುದಿಲ್ಲ.
3	ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ	ಸದರಿ ಅವಧಿಯಲ್ಲಿ ಸದಸ್ಯರಿಗೆ ಯಾವುದೇ ತರಬೇತಿ ಕಾರ್ಯಕ್ರಮಗಳು ನಡೆಸಿರುವುದಿಲ್ಲ.
4	ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ	ಅನ್ವಯಿಸುವುದಿಲ್ಲ.

ಸಂಘದ ಆರ್ಥಿಕ ಫಲಿತಾಂಶಗಳ ವಿವರಗಳು

ಹಣಕಾಸಿನ ವರದಿಯ ವಿಶ್ಲೇಷಣೆ

		ಪ್ರಸಕ್ತ ಸಾಲು ರೂ. ಲಕ್ಷಗಳಲ್ಲಿ	ಹಿಂದಿನ ಸಾಲು ರೂ. ಲಕ್ಷಗಳಲ್ಲಿ
1	ಸಂಘದ ಒಟ್ಟು ವಹಿವಾಟು (ಜಮಾ-ಖರ್ಚು ತಃಶ್ತೆ ಮೊಬಲಗು)	6787.48	5466.93
2	ಸಂಘದ ಒಟ್ಟು ದುಡಿಯುವ ಬಂಡವಾಳ	26654.04	28030.78
3	ಸಂಘದ ಲಾಭ ಅಥವಾ ನಷ್ಟ	104.36	102.57
4	ಲಾಭಾಂಶ ಹಂಚಲು ಲಭ್ಯವಿರುವ ನಿವ್ವಳ ಲಾಭದ ಮೊತ್ತ	104.36	102.57

36. ತಲಾ ಷೇರಿನ ಗಳಿಕೆ

ಕ್ರ.ಸಂ.	ವಿವರ	ಪ್ರಸಕ್ತ ಸಾಲು	ಹಿಂದಿನ ಸಾಲು
1	ನಿವ್ವಳ ಲಾಭ	104.36	102.57
2	ಒಟ್ಟು ಷೇರುಗಳು	9820.00	9820.00
3	ತಲಾ ಷೇರಿನ ಗಳಿಕೆ	1044.50	1044.50

37.	ವರ್ಷಾಂತ್ಯಕ್ಕೆ ಸಂಘದ ಸ್ವಾಧೀನ ಇಗಿರುವ ಜಮೀನು :	ಬೆಂಗಳೂರು ದಕ್ಷಿಣ ತಾಲ್ಲೂಕು, ಚುಂಚನಕುಪ್ಪೆ ಬಳಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಂತೆ ನಿವೇಶನಗಳನ್ನು ಪಿಂಗಡಿಸಿ ವಸತಿ ಮಹಾಮಂಡಲಕ್ಕೆ ನೀಡಲು ಅಭಿವೃದ್ಧಿದಾರರಿಂದ "ಟರ್ನ್ ಕೀ (Turn Key)" ಆಧಾರದಲ್ಲಿ ಪಡೆಯಲಾಗಿದೆ. ಖರೀದಿಸಿರುವ ಜಮೀನಿನ ಅಗತ್ಯವಿರುವ ಪ್ರಾಧಿಕಾರಗಳಿಂದ ಭೂ ಪರಿವರ್ತನೆ, ನಕ್ಷೆ ಮಂಜೂರಾತಿ ಅನುಮತಿ ಪಡೆದು ನಸ್ತೆ ಕಾಮಗಾರಿ, ಒಳಚರಂಡಿ, ವಿದ್ಯುಚ್ಛಕ್ತಿ, ನೀರು ಸರಬರಾಜು ಹಾಗೂ ಅವಶ್ಯಕವಿರುವ ಮೂಲಭೂತ ಸೌಲಭ್ಯಗಳನ್ನು ನಿರ್ವಹಿಸಲು ಮೆಮೊರಾಂಡಮ್ ಆಫ್ ಡೆಪಾಜಿಟ್ ಆಫ್ ಟೈಟಲ್ ಡೀಡ್ (DTD)



		ಅಭಿವೃದ್ಧಿದಾರರಿಂದ ಮಾಡಿಸಿಕೊಳ್ಳಲಾಗಿದೆ. ತದನಂತರ ಸಂಸ್ಥೆಯು ತನ್ನ ಸದಸ್ಯರಿಗೆ ನಿವೇಶನ ನೊಂದಣಿ ಮಾಡಿಸಿ ಸ್ವಾಧೀನತಾ ಪತ್ರವನ್ನು ನೀಡಲಾಗುತ್ತದೆ.
38.	ಗೃಹ ನಿರ್ಮಾಣ ಕಾರ್ಯ ಸಂಘದ ವತಿಯಿಂದ:	ಸಂಸ್ಥೆಯು ಯಾವುದೇ ಗೃಹ ನಿರ್ಮಾಣ ಕಾರ್ಯವನ್ನು ಸಂಸ್ಥೆಯ ವತಿಯಿಂದ ಕೈಗೆತ್ತಿಕೊಂಡಿರುವುದಿಲ್ಲ.
39	ಗೃಹ ನಿರ್ಮಾಣ ಕಾರ್ಯ ಗುತ್ತಿಗೆದಾರರಿಂದ.	ಸಂಸ್ಥೆಯು ಯಾವುದೇ ಗೃಹ ನಿರ್ಮಾಣ ಕಾರ್ಯವನ್ನು ಗುತ್ತಿಗೆದಾರರಿಗೆ ವಹಿಸಿರುವುದಿಲ್ಲ.
40	ಬಹುಮಹಡಿ ಕಟ್ಟಡ (ಅಪಾರ್ಟ್‌ಮೆಂಟ್ಸ್):	ಸಂಸ್ಥೆಯು ಬಹುಮಹಡಿ ಕಟ್ಟಡ ನಿರ್ಮಾಣ (ಅಪಾರ್ಟ್‌ಮೆಂಟ್) ಕಾರ್ಯವನ್ನು ಕೈಗೆತ್ತಿಕೊಂಡಿರುವುದಿಲ್ಲ.
41	ಸಂಘವು ಕೊಳ್ಳಲು ಬಯಸಿರುವ ಜಮೀನಿನ ಹಾಗೂ ಒಪ್ಪಂದಗಳ ಕುರಿತು ಸಂಕ್ಷಿಪ್ತ ವಿವರ.	ಸಂಸ್ಥೆಯು ಯಾವುದೇ ಜಮೀನನ್ನು ಕೊಳ್ಳಲು ಯಾರೊಂದಿಗೂ ಒಪ್ಪಂದ ಮಾಡಿಕೊಂಡಿರುವುದಿಲ್ಲ.
	(i)	**ನಿವೇಶನ ಬಡಾವಣೆ ಮುಂಗಡ ವೆಚ್ಚ (1ನೇ ಯೋಜನೆ): ರೂ. 167,11,43,836/-**
		ಬಡಾವಣೆ ನಿರ್ಮಾಣಕ್ಕೆ ಅಗತ್ಯವಿರುವ ಪ್ರಾಧಿಕಾರಗಳಿಂದ ಅನುಮತಿ ಪಡೆದು ಎಲ್ಲಾ ಮೂಲಭೂತ ಸೌಲಭ್ಯವಿರುವ ಬಡಾವಣೆ ನಿರ್ಮಿಸುವ ಅಭಿವೃದ್ಧಿದಾರರಿಂದ 'ಟರ್ನ್ ಕೀ' ಆಧಾರದ ಮೇಲೆ ನಿವೇಶನಗಳನ್ನು ನೇರವಾಗಿ ಸ್ಪರ್ಧಾತ್ಮಕ ದರದಲ್ಲಿ ಖರೀದಿಸಿದ ಸದಸ್ಯರಿಗೆ ಹಂಚಿಕೆ ಮಾಡಬಹುದಾಗಿರುತ್ತದೆ. ಮೇಲ್ಕಂಡ ಅವಕಾಶದಂತೆ ಸಂಸ್ಥೆಯು ದಿನಾಂಕ: 02-05-2006ರಲ್ಲಿ ಮೂಲ ಕರಾರನ್ನು 'ಮೆ॥ ಲಕ್ಷ್ಮಣ್ ಪ್ರಾಪರ್ಟಿಸ್' ನಂ. 458, 4ನೇ ಮುಖ್ಯ ರಸ್ತೆ, 2ನೇ ಹಂತ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮೀಪುರಂ, ಬೆಂಗಳೂರು ಇವರೊಂದಿಗೆ ಕರಾರು ಮಾಡಿಕೊಂಡಿದ್ದು, ಸದರಿ ಕರಾರಿನಂತೆ ಚುಂಚನಕುಪ್ಪೆ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ವಿವಿಧ ವಿಸ್ತೀರ್ಣವುಳ್ಳ ವಾಸಯೋಗ್ಯ ನಿವೇಶನಗಳನ್ನು ನಿರ್ಮಿಸಿ ಸದಸ್ಯರಿಗೆ ನೀಡಲು ಕರಾರನ್ನು ಮಾಡಿಕೊಂಡಿರುತ್ತಾರೆ. ಮೂಲ ಒಪ್ಪಂದದ ಪ್ರಕಾರ ಗುತ್ತಿಗೆದಾರರು ಚುಂಚನಕುಪ್ಪೆ ಗ್ರಾಮದಲ್ಲಿ ಸುಮಾರು 130 ಎಕರೆಯಲ್ಲಿ 1500 ವಿವಿಧ ವಿಸ್ತೀರ್ಣವುಳ್ಳ ನಿವೇಶಗಳನ್ನು ಸಂಸ್ಥೆಗೆ ನೀಡಲು ಒಪ್ಪಂದವಾಗಿತ್ತು. ಇತ್ತೀಚೆಗೆ ಮಾಡಿಕೊಂಡ ಸಪ್ಲಿಮೆಂಟರಿ ಅಗ್ರಿಮೆಂಟ್ (ದಿನಾಂಕ: 07-1-2016) ರಂತೆ ಈ ಕೆಳಕಂಡ ಸರ್ವೆ ನಂಬರುಗಳಲ್ಲಿ ಸುಮಾರು 180 ಎಕರೆ ಜಾಗದಲ್ಲಿ ಭೂ ಪರಿವರ್ತನೆ ಮಾಡಿ ನಿವೇಶನಗಳನ್ನು ಅಭಿವೃದ್ಧಿಗೊಳಿಸಿಕೊಂಡಿರುತ್ತಾರೆ.
	ಅ)	ಚುಂಚನಕುಪ್ಪೆ ಗ್ರಾಮ ಸರ್ವೆ ನಂಬರು 41, 42, 43, 44, 45, 48, 49, 50, 51, 52, 54, 55, 56, 58, 59, 60, 61, 62, 63ಪಿ, 64, 65, 66, 77 ಹಾಗೂ ಬ್ಯಾಲಾಳು ವಿಲೇಜ್, ತಾವರೆಕೆರೆ ಹೋಬಳಿ, ಸರ್ವೆನಂಬರು 16
	ಆ)	ಮೇಲಿನ ಸರ್ವೆ ನಂಬರುಗಳಲ್ಲಿ ಸುಮಾರು 2461 ವಿವಿಧ ವಿಸ್ತೀರ್ಣವುಳ್ಳ ನಿವೇಶನಗಳು ವಿಂಗಡಣೆಯಾಗಿದ್ದು ಇದರಲ್ಲಿ ಕೆಲವು ಸರ್ವೆ ನಂಬರುಗಳಲ್ಲಿ ಅಭಿವೃದ್ಧಿ ಕೆಲಸಗಳು ಬಾಕಿ ಇರುತ್ತದೆ. ಸಂಸ್ಥೆಯು ಅಭಿವೃದ್ಧಿದಾರರ ಜೊತೆ ಮೂಲ ಒಪ್ಪಂದ ಮಾಡಿಕೊಂಡ ನಂತರ ಆಗಿಂದಾಗ್ಗೆ ವಿವಿಧ ಕಾರಣಗಳಿಂದಾಗಿ ದರವನ್ನು ಪರಿಷ್ಕರಿಸಿಕೊಂಡಿದ್ದು ಅವುಗಳ ವಿವರ ಈ ರೀತಿ ಇರುತ್ತದೆ.

ಕ್ರ.ಸಂ	ವಿಸ್ತೀರ್ಣ	ಕರಾರು ದಿನಾಂಕ 2-5-2006	ಕರಾರು ದಿನಾಂಕ 25-02-2007	ಕರಾರು ದಿನಾಂಕ 18-11-2010
1	20 x 30	305	330	330
2	30 x 50	305	355	360
3	40 x 60	305	355	370

MENEZES & ASSOCIATES BANGALORE-94 CHARTERED ACCOUNTANTS

	ಒಂದನೇ ಯೋಜನೆಗೆ ಸಂಬಂಧಿಸಿದಂತೆ ಮೂಲ ಕರಾರು ದಿನಾಂಕ: 02–05–2006ರಲ್ಲಿ ಆಗಿದ್ದು, ಒಂದು ವರ್ಷದೊಳಗೆ ಅಭಿವೃದ್ಧಿ ಕೆಲಸ ಮುಗಿಯಬೇಕಾಗಿದ್ದು, ತದನಂತರ ದಿನಾಂಕ: 5–4–2012ರಲ್ಲಿ ಮಧ್ಯಾಂತರ ಕರಾರು ಮಾಡಿಕೊಂಡು ಕಾಮಗಾರಿ ಮುಕ್ತಾಯಕ್ಕೆ ದಿನಾಂಕ: 31–03–2014ರ ಗಡುವು ಮಾಡಿಕೊಂಡಿರುತ್ತಾರೆ. ಮತ್ತೊಮ್ಮೆ ದಿನಾಂಕ: 1–04–2014 ರಲ್ಲಿ ಇನ್ನೊಂದು ಕರಾರನ್ನು ಮಾಡಿಕೊಂಡು ಗಡುವನ್ನು ದಿನಾಂಕ: 07–01–2016ರವರೆವಿಗೂ ವಿಸ್ತರಿಸಿಕೊಂಡಿರುತ್ತದೆ. ಸದರಿ ಗಡುವಿನ ದಿನಾಂಕಕ್ಕೆ ಯೋಜನೆ ಪೂರ್ಣಗೊಂಡಿರುವುದಿಲ್ಲ.
	ತದಾ ನಂತರ ದಿನಾಂಕ: 07–01–2016 ರಂದು ಮತ್ತೊಂದು ಕರಾರು ಮಾಡಿಕೊಂಡು ದಿನಾಂಕ: 06–01–2017 ರವರೆಗೆ ಯೋಜನೆ ಮುಕ್ತಾಯ ದಿನಾಂಕವಾಗಿ ಗಡುವು ಗುರ್ತಿಸಿಕೊಂಡಿರುತ್ತಾರೆ. ಸದರಿ ಗಡುವು ವಿಸ್ತೀರ್ಣಕ್ಕೆ ಈ ಕೆಳಕಂಡ ಕಾರಣಗಳನ್ನು ತಿಳಿಸಿದ್ದು, ವಿವರ ಹೀಗಿರುತ್ತದೆ.
1.	ಸುತ್ತ ಮುತ್ತಲಿನ ಜಮೀನನ್ನು ಸದರಿ ಯೋಜನೆಯೊಳಗೆ ತರುವುದರಿಂದ ಆಗಿರುವ ವಿಳಂಬ.
2.	ತಾಂತ್ರಿಕ ವಿಷಯಗಳಾದ ಭೂಮಿ ಖರೀದಿ, ಜಮೀನು ಪರಿವರ್ತನೆ, ವಿವಿಧ ಸಂಸ್ಥೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆಯುವಲ್ಲಿ ಆಗಿರುವ ವಿಳಂಬ ಹಾಗೂ ನಕ್ಷೆ ಅನುಮೋದನೆ.
3.	ಇವುಗಳಲ್ಲದೆ ಜಾಮೀನುದಾರು ಹಾಗೂ ಸಂಬಂಧಿಕರಗಳೊಡನೆ ಉದ್ಭವಿಸಿರುವ ವಿವಾಧಗಳು. ಸಾಲು ಕಳೆದ ನಂತರ ಅಂದರೆ ದಿನಾಂಕ: 4–04–2017 ರಂದು ಅಭಿವೃದ್ಧಿದಾರರೊಂದಿಗೆ ಇನ್ನೊಂದು ಕರಾರು ಮಾಡಿಕೊಂಡಿದ್ದು, ಯೋಜನೆಯ ಗಡುವನ್ನು ದಿನಾಂಕ: 06–01–2017 ರಿಂದ 6–01–2018 ರವರೆಗೆ ವಿಸ್ತರಿಸಿಕೊಂಡಿರುತ್ತಾರೆ. ತದ ನಂತರ ದಿನಾಂಕ: 07–1–2018 ರಂದು ಇನ್ನೊಂದು ಕರಾರು ಮಾಡಿಕೊಂಡಿದ್ದು, ಯೋಜನೆ ಗಡುವನ್ನು ದಿನಾಂಕ: 06–1–2018 ರಿಂದ 05–01–2020 ರವರೆಗೆ ವಿಸ್ತರಿಸಕೊಳ್ಳಲಾಗಿದೆ. ಈ ಅವಧಿಯೊಳಗಾಗಿ ಒಂದನೇ ಹಂತವು ಪೂರ್ಣಗೊಳ್ಳುವ ಭರವಸೆ ನೀಡಿರುತ್ತಾರೆ. ಇಷ್ಟಾದ್ರು ಗುತ್ತಿಗೆದಾರರು ನೀಡಿದ ಭರವಸೆಯನ್ನು ಉಳಿಸಿಕೊಳ್ಳದೆ ವರದಿ ಸಾಲಿನಲ್ಲಿ ಮತ್ತೆ ಕರಾರನ್ನು ದಿನಾಂಕ: 07–01–2021 ರವರೆಗೆ ವಿಸ್ತರಿಸಿಕೊಂಡಿರುವುದನ್ನು ಗಮನಿಸಲಾಗಿದೆ.

ಮಾಗಡಿ ಯೋಜನಾ ಪ್ರಾಧಿಕಾರದಿಂದ ನಕ್ಷೆ ಅನುಮೋದನೆಯಾಗಿರುವ ಜಮೀನು ವಿವರ

ಮಂಜೂರಾತಿ ಆದೇಶ ಸಂಖ್ಯೆ	ಮಂಜೂರಾದ ದಿನಾಂಕ	ಹಂತ		ಜಮೀನು ವಿವರ
ಮಾಯೋಪ್ರಾ/LOA/20/2009–07	13–4–2012 6–6–16 (ಬಿಡುಗಡೆ)	1ನೇ ಹಂತ	56/3ಎ, 56/3ಬಿ, 56/4, 59/11, 59/2, 59/5, 59/7, 59/8, 59/9, 59/10, 60, 61, 62(ಪಿ), 63/1, 64(ಪಿ), 65/1ಎ, 65/2ಬಿ, 65/2ಸಿ, 65/2ಎ, 66/2, 65/1ಬಿ, 66/3, 63/1, 63/2ಜಿ1, 59/3, 59/4, 59/6, 58/1, 59/13 (59/2)	93 ಎಕರೆ 26.75 ಗುಂಟೆ (93.26.75 – 4 ಎಕರೆ 2ನೇ ಯೋಜನೆಗೆ) ಒಟ್ಟು 89 ಎಕರೆ 26.75
ಮಾಯೋಪ್ರಾ /LOA/12/2006–07, 13,19,12,/2007–08	13–4–2012 22–2–2019 (ಬಿಡುಗಡೆ)	2ನೇ ಹಂತ	44, 51/2, 51/4, 51/5, 52/1, 50/1, 45/1, 45/3	37 ಎಕರೆ 09 ಗುಂಟೆ
ಮಾಯೋಪ್ರಾ /LOA/21/2012-13,	14–11–2013	3 ನೇ ಹಂತ	48/2, 48/3, 49/1	17 ಎಕರೆ 32 ಗುಂಟೆ

MENEZES & ASSOCIATES BANGALORE-94 CHARTERED ACCOUNTANTS

ಪರಿಷ್ಕೃತ ನಕ್ಷೆ ಅನುಮೋದನೆ:ಮಾಯೋಪ್ರಾ /LOA/20/2012-13/944	10-01-2018	4ನೇ ಹಂತ	41, 77	14 ಎಕರೆ 28 ಗುಂಟೆ
ಮಾಯೋಪ್ರಾ /LAO/11/2014-15,	11-12-2015	5 ನೇ ಹಂತ	16/1, 16/2, 45/5, 45/6, 45/7, 51/1, 51/3, 53/1, 53/2, 54/4, 55, 56/3ಎ, 56/6, 56/7	13 ಎಕರೆ 28 ಗುಂಟೆ
ಮಾಯೋಪ್ರಾ/LAO/16/2017-18/139	03-06-2019	6 ನೇ ಹಂತ	156, 157	4 ಎಕರೆ
		ಒಟ್ಟು		177 ಎಕರೆ 3.75 ಗುಂಟೆ

ದಿನಾಂಕ: 31-03-2020ಕ್ಕೆ ಇದ್ದಂತೆ ಮೊದಲನೇ ಯೋಜನೆಯ ನಿವೇಶನ ಹಂಚಿಕೆ ಹಾಗೂ ನೋಂದಣಿಯಾಗಿರುವ ವಿವರದ ಪಟ್ಟಿ

1ನೇ ಹಂತ

ಕ್ರ.ಸಂ	ಹಂಚಿಕೆಯಾಗಿರುವ ನಿವೇಶನಗಳು				ನೊಂದಣಿಯಾಗಿರುವ ನಿವೇಶನಗಳು			ನೊಂದಣಿಗೆ ಬಾಕಿ
	ಅಳತೆ	ಮಂದ್ಯಂತರ	ಮೂಲೆ	ಒಟ್ಟು ಹಂಚಿಕೆ	ಮಂದ್ಯಂತರ	ಮೂಲೆ	ಒಟ್ಟು ನೋಂದಣಿ	
	20 x 30	16	5	21	16	5	21	0
	30 x 50	429	82	511	374	77	451	60
	40 x 60	433	98	531	407	92	499	32
	ಒಟ್ಟು	**878**	**185**	**1063**	**797**	**174**	**971**	**92**

2ನೇ ಹಂತ

ಕ್ರ.ಸಂ	ಹಂಚಿಕೆಯಾಗಿರುವ ನಿವೇಶನಗಳು				ನೊಂದಣಿಯಾಗಿರುವ ನಿವೇಶನಗಳು			ನೊಂದಣಿಗೆ ಬಾಕಿ
	ಅಳತೆ	ಮಂದ್ಯಂತರ	ಮೂಲೆ	ಒಟ್ಟು ಹಂಚಿಕೆ	ಮಂದ್ಯಂತರ	ಮೂಲೆ	ಒಟ್ಟು ನೋಂದಣಿ	
	20 x 30	104	7	111	102	7	109	2
	30 x 50	188	36	224	182	35	217	7
	40 x 60	76	44	120	68	41	109	11
	ಒಟ್ಟು	**368**	**87**	**455**	**352**	**83**	**435**	**20**

3ನೇ ಹಂತ

ಕ್ರ.ಸಂ	ಹಂಚಿಕೆಯಾಗಿರುವ ನಿವೇಶನಗಳು				ನೊಂದಣಿಯಾಗಿರುವ ನಿವೇಶನಗಳು			ನೊಂದಣಿಗೆ ಬಾಕಿ
	ಅಳತೆ	ಮಂದ್ಯಂತರ	ಮೂಲೆ	ಒಟ್ಟು ಹಂಚಿಕೆ	ಮಂದ್ಯಂತರ	ಮೂಲೆ	ಒಟ್ಟು ನೋಂದಣಿ	
1	20 x 30	1	0	1	0	0	0	1
2	30 x 50	97	10	107	84	9	93	14
3	40 x 60	94	22	116	79	15	94	22
	ಒಟ್ಟು	**192**	**32**	**224**	**163**	**24**	**187**	**37**

4ನೇ ಹಂತ

ಕ್ರ.ಸಂ	ಹಂಚಿಕೆಯಾಗಿರುವ ನಿವೇಶನಗಳು				ನೊಂದಣಿಯಾಗಿರುವ ನಿವೇಶನಗಳು			ನೊಂದಣಿಗೆ ಬಾಕಿ
	ಅಳತೆ	ಮಂದ್ಯಂತರ	ಮೂಲೆ	ಒಟ್ಟು ಹಂಚಿಕೆ	ಮಂದ್ಯಂತರ	ಮೂಲೆ	ಒಟ್ಟು ನೋಂದಣಿ	
1	20 x 30	320	27	347	266	25	291	56
2	30 x 50	90	16	106	75	12	87	19
3	40 x 60	0	0	0	0	0	0	0
	ಒಟ್ಟು	**410**	**43**	**453**	**341**	**37**	**378**	**75**



5ನೇ ಹಂತ

ಕ್ರಸಂ	ಹಂಚಿಕೆಯಾಗಿರುವ ನಿವೇಶನಗಳು				ನೊಂದಣಿಯಾಗಿರುವ ನಿವೇಶನಗಳು			ನೊಂದಣಿಗೆ ಬಾಕಿ
	ಅಳತೆ	ಮಂದ್ಯಂತರ	ಮೂಲೆ	ಒಟ್ಟು ಹಂಚಿಕೆ	ಮಂದ್ಯಂತರ	ಮೂಲೆ	ಒಟ್ಟು ನೋಂದಣಿ	
1	20 x 30	5	1	6	4	1	5	1
2	30 x 50	220	20	240	117	11	128	112
3	40 x 60	14	4	18	8	2	10	8
ಒಟ್ಟು		239	25	264	129	14	143	121
ಒಟ್ಟು ಹಂಚಿಕೆ/ನೊಂದಣಿ/ಬಾಕಿ ಇರುವ ನಿವೇಶನಗಳು				2459	1782	332	2114	345

ಲೆಕ್ಕಪರಿಶೋಧನಾ ವೇಳೆಗೆ ನೊಂದಣಿಯಾಗಿರುವ ನಿವೇಶನಗಳು (ದಿ:22-10-2020ರವರೆಗೆ)			
ಮಂದ್ಯಂತರ	ಮೂಲೆ	ಒಟ್ಟು ನೊಂದಣಿ	ನೊಂದಣಿಗೆ ಬಾಕಿ
63	11	74	271 (345-74 =271)

ವರದಿ ಸಾಲಿನಲ್ಲಿ ಕೆಲ ಹಂತದಲ್ಲಿ ಪ್ರಾಧಿಕಾರದಿಂದ ಬಿಡುಗಡೆಯಾದ ನಿವೇಶನಕ್ಕಿಂತ ಹೆಚ್ಚಾಗಿ ನೋಂದಣಿ ಮಾಡಿಕೊಡಲಾಗಿದೆ. ಲೆಕ್ಕಪರಿಶೋಧನಾ ವೇಳೆಯಲ್ಲಿ ಈ ಬಗ್ಗೆ ಸಂಸ್ಥೆಯವರು ನೀಡಿದ ಸಮಜಾಯಿಷಿಯಂತೆ ವಿವಿಧ ಕಾರಣಗಳಿಂದಾಗಿ ಬಡಾವಣೆ ಅಭಿವೃದ್ಧಿ ಕಾರ್ಯ ವಿಳಂಬವಾಗಿರುವುದರಿಂದ ಅದರಲ್ಲೂ ಮಾಗಡಿ ಯೋಜನಾ ಪ್ರಾಧಿಕಾರದಿಂದ ಈ ಹಿಂದೆ ಸದರಿ ಸಂಸ್ಥೆಯಿಂದ ಅನುಮೋದನೆಗೊಂಡ 3ನೇ ಮತ್ತು 4ನೇ ಹಂತದ ಬಡಾವಣೆ ನಕ್ಷೆಯು ಮಾರ್ಪಾಡಾಗಿರುವುದು ಮುಖ್ಯ ಕಾರಣ. ನಿವೇಶನ ಮಂಜೂರು ಆದ ಸದಸ್ಯರ ಒತ್ತಡದಿಂದಾಗಿ ಹೀಗಾಗಿರುತ್ತದೆಂದು (ಪ್ರಾಧಿಕಾರದಿಂದ ನಕ್ಷೆ ಮಂಜೂರಾತಿಯಾಗಿ ಶೇಕಡ 40 ರಲ್ಲಿರುವ ನಿವೇಶನಗಳು) ತಿಳಿಸಿರುತ್ತಾರೆ. ಸಂಸ್ಥೆಯ ಅಭಿವೃದ್ಧಿದಾರರು ನೊಂದಣಿಗೆ ಸತತವಾಗಿ ವ್ಯವಹರಿಸಿ ಪ್ರಾಧಿಕಾರದಿಂದ ಉಳಿದ ನಿವೇಶನಗಳನ್ನು ಬಿಡುಗಡೆ ಮಾಡಿಸಲು ಪ್ರಯತ್ನ ನಡೆಸಲಾಗುತ್ತಿದೆ.

ವರದಿ ಸಾಲಿನಲ್ಲಿ ಅಭಿವೃದ್ಧಿದಾರರಿಗೆ ಯಾವುದೇ ಮುಂಗಡವನ್ನು ನೀಡಿರುವುದಿಲ್ಲ. ಈಗಾಗಿ ಮೊದಲನೇ ಯೋಜನೆಗೆ ಸಂಬಂಧಿಸಿದಂತೆ ಹಿಂದಿನ ಸಾಲುಗಳಲ್ಲಿ ಸದರಿಯವರಿಗೆ ನೀಡಿದ್ದ ರೂ. 167,11,43,836/- ಗಳು ದಿನಾಂಕ: 31-03-2020 ಕ್ಕೆ ಯಥಾವತ್ತಾಗಿ ಮುಂದುವರೆದಿರುತ್ತದೆ.

ಈ ಬಾಬ್ತಿಗೆ ದಿನಾಂಕ: 31-3-2020ರ ಅಂತ್ಯಕ್ಕೆ ಅಭಿವೃದ್ಧಿದಾರರು ನೀಡಿರುವ ದೃಢೀಕರಣಕ್ಕೆ ತಾಳೆ ಇರುತ್ತದೆ.

ಲೆಕ್ಕಪರಿಶೋಧನಾ ವೇಳೆಯಲ್ಲಿ ಸಂಸ್ಥೆಯು ಬಡಾವಣೆ ಅಭಿವೃದ್ಧಿದಾರರಿಗೆ ಹಿಂದಿನ ಸಾಲುಗಳಲ್ಲಿ ಲೀಗಲ್ ನೋಟೀಸ್ ನೀಡಿರುವುದು ಕಂಡು ಬಂದಿರುತ್ತದೆ. ಸದರಿ ನೋಟೀಸ್‌ನಲ್ಲಿ "ಕರಾರು ಪ್ರಕಾರ ಎಲ್ಲಾ ನಾಗರೀಕ ಸೌಲಭ್ಯಗಳೊಂದಿಗೆ ಸಿದ್ಧಪಡಿಸಿದ ನಿವೇಶನಗಳನ್ನು ಒಪ್ಪಂದದ ಪ್ರಕಾರವಾಗಿ ಸಕಾಲದಲ್ಲಿ ನೀಡುವಂತೆ ಹಣ ಪಾವತಿ ಮಾಡಿದ್ದು, ಆದರೂ ಒಪ್ಪಂದ ಆಗಿ ಹತ್ತು ವರ್ಷ ಕಳೆದಿದ್ದರೂ ಕರಾರು ಪ್ರಕಾರವಾಗಿ ಕಾರ್ಯಗತವಾಗಿರುವುದಿಲ್ಲ. ಸದಸ್ಯರಿಗೆ ನಿವೇಶನಗಳನ್ನು ಸಕಾಲದಲ್ಲಿ ನೊಂದಣಿ ಮಾಡಲು ಸಾಧ್ಯವಾಗಿರುವುದಿಲ್ಲ. ಜಮೀನುಗಳ ಬಗ್ಗೆ ವ್ಯಾಜ್ಯವಿರುವುದು, ಜಮೀನಿನ ಪೋಡಿ ಇರುವ ಸಮಸ್ಯೆಗಳನ್ನು ಬಗೆ ಹರಿಸಲು ಕ್ರಮ ತೆಗೆದುಕೊಂಡಿರುವುದು ಕಂಡು ಬಂದಿರುತ್ತದೆ. ಜಮೀನಿನ ಬೆಲೆ ಹೆಚ್ಚಾಗಿದ್ದರಿಂದ ವಿವಿಧ ಪ್ರಾಧಿಕಾರಿಗಳಲ್ಲಿ ಅನುಮೋದನೆ ಪಡೆಯುವುದು ತಡವಾಗಿದ್ದರಿಂದ, ಸರ್ಕಾರದಲ್ಲಿ ಪೋಡಿ ಮತ್ತು ಹದ್ದುಬಸ್ತು ಮಾಡಿಸಲು ತಡವಾಗುತ್ತಿರುವುದರಿಂದ ಬಡಾವಣೆ ಅಭಿವೃದ್ಧಿ ಕಾರ್ಯ ಕುಂಠಿತವಾಗಿರುತ್ತದೆಂದು ಅಭಿವೃದ್ಧಿದಾರರು ತಿಳಿಸಿರುತ್ತಾರೆ. ವಿವಿಧ ಕಾರಣಗಳಿಂದಾಗಿ 1ನೇ ಯೋಜನೆ ಸಾಕಷ್ಟು ವಿಳಂಬವಾಗಿರುವುದು ಕಂಡು ಬಂದಿರುತ್ತದೆ. ಈಗಾಲಾದರೂ ತ್ವರಿತವಾಗಿ ಯೋಜನೆಯನ್ನು ಪೂರ್ತಿ ಮಾಡಿ ನಿವೇಶನಾಂಕ್ಷಿಗಳಿಗೆ ನಿವೇಶನಗಳನ್ನು ನೋಂದಾಯಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(ii) **ನಿವೇಶನ ಬಡಾವಣೆ ವೆಚ್ಚದ ಮುಂಗಡ (2ನೇ ಯೋಜನೆ): ರೂ. 44,45,00,000/-**

ಹಿಂದಿನ ವರದಿಗಳಲ್ಲಿ ವಿವರಿಸಿರುವಂತೆ ವಸತಿ ಮಹಾಮಂಡಲವು ಸದಸ್ಯರಿಗೆ

MENEZES & ASSOCIATES BANGALORE-94 CHARTERED ACCOUNTANTS

ನಿವೇಶನ ಹಂಚುವ ಉದ್ದೇಶದಿಂದ ಬಡಾವಣೆ ನಿರ್ಮಿಸಿ ಮಹಾಮಂಡಲಕ್ಕೆ ನಿವೇಶನ ನೀಡಲು ಹಿಂದಿನ ಸಾಲಿನ ವರದಿಯ ಕಂಡಿಕೆ 24(1)(ii) ರಲ್ಲಿ ವಿವರಿಸಿರುವಂತೆ ಶ್ರೀ ಲಕ್ಷ್ಮಣ್, ಗುತ್ತಿಗೆದಾರರು ಇವರೊಂದಿಗೆ ದಿನಾಂಕ: 11-6-2010ರಂದು ಕರಾರು ಮಾಡಿಕೊಂಡಿದ್ದು, ದಿನಾಂಕ: 31-03-2020ರ ಅಂತ್ಯಕ್ಕೆ 2ನೇ ಯೋಜನೆ ಮುಂಗಡ ಲೆಕ್ಕದಲ್ಲಿ ರೂ. 44,45,00,000/- ಗಳಿರುತ್ತದೆ. ಎರಡನೇ ಯೋಜನೆ ಬಾಬ್ತಿನಲ್ಲಿ ತಹಲ್‌ವರೆವಿಗೂ 39 ಎಕರೆ 24½ ಗುಂಟೆ ಜಮೀನನ್ನು ವಶಕ್ಕೆ ತೆಗೆದುಕೊಂಡಿರುತ್ತದೆ.

2ನೇ ಯೋಜನೆಗೆ ಸಂಬಂಧಿಸಿದಂತೆ ಸಂಸ್ಥೆಯ ಸದಸ್ಯರಿಂದ ದಿನಾಂಕ: 31-3-2020ಕ್ಕೆ ರೂ. 39,62,06,788/-ಗಳು ಸಂಗ್ರಹವಾಗಿದ್ದು ಈವರೆವಿಗೂ ಗುತ್ತಿಗೆದಾರರಿಗೆ ರೂ.44,45,00,000/- ಗಳನ್ನು ಪಾವತಿಸಲಾಗಿರುತ್ತದೆ. ಈ ಯೋಜನೆಗೆ ಸಂಬಂಧಿಸಿದಂತೆ ನಿವೇಶನ ಮುಂಗಡವಾಗಿ ಪಡೆದಿರುವ ಮೊತ್ತಕ್ಕಿಂತ ಹೆಚ್ಚಾಗಿ ಪಾವತಿಸಲಾಗಿದೆ. ಈ ಯೋಜನೆ ಪ್ರಾರಂಭದ ನಂತರ ಸದಸ್ಯರು ನಿವೇಶನ ತೇವಣಿ ವಾಪಸ್ಸು ಪಡೆದುಕೊಳ್ಳುತ್ತಿರುವ ಕಾರಣದಿಂದ ಈ ವ್ಯತ್ಯಾಸವಾಗಿರುವುದಾಗಿ ಸಂಸ್ಥೆಯವರು ತಿಳಿಸಿರುತ್ತಾರೆ. ಶ್ರೀ ಲಕ್ಷ್ಮಣ್ ಪ್ರಾಪರ್ಟಿಸ್‌ರವರಿಂದ ದಿನಾಂಕ: 31-3-2020ಕ್ಕೆ ಮೇಲ್ಕಂಡ ಬಾಬ್ತಿಗೆ ಸಂಬಂಧಿಸಿದಂತೆ ದೃಢೀಕರಣ ಪಡೆದಿದ್ದು ದೃಢೀಕರಣದ ಮೊಬಲಗು ಆಸ್ತಿ-ಜವಾಬ್ದಾರಿ ತಃಖ್ತೆಯ ಮೊಬಲಗಿಗೆ ತಾಳೆಯಿರುತ್ತದೆ.

2ನೇ ಯೋಜನೆ ಗಡವುಗಳನ್ನು ದಿನಾಂಕ: 11-6-2011 ರಿಂದ 11-6-2013ರವರೆಗೆ ಹಾಗೂ ದಿನಾಂಕ: 11-6-2013 ರಿಂದ 31-1-2016ರವರೆಗೆ ಮಧ್ಯಂತರ ಕರಾರು ಮುಖಾಂತರ ವಿಸ್ತರಿಸಿಕೊಂಡಿರುತ್ತದೆ. ತದ ನಂತರ ದಿನಾಂಕ: 5-1-2018ರ ಕರಾರಿನಂತೆ ಕರಾರನ್ನು ದಿ:31-12-2020ರವರೆಗೆ ವಿಸ್ತರಿಸಿಕೊಂಡಿರುತ್ತದೆ. ವರದಿ ಸಾಲಿನಲ್ಲಿ ಬಡಾವಣೆ ಕೆಲಸ ವಿವಿಧ ಕಾರಣಗಳಿಂದಾಗಿ ಮತ್ತೆ ದಿನಾಂಕ: 31-12-2020 ರವರೆಗೆ ಗಡವನ್ನು ವಿಸ್ತರಿಸಿಕೊಂಡಿರುವುದನ್ನು ಗಮನಿಸಲಾಗಿದೆ.

2ನೇ ಯೋಜನೆಯ ಅಭಿವೃದ್ಧಿಗೆ ಪೋಡಿ ಕಾರ್ಯದಲ್ಲಿ ಸರ್ಕಾರದ ಕಂದಾಯ ವಿಭಾಗದಿಂದ ವಿಳಂಭ, ಪ್ರಕೃತಿ ವಿಕೋಪದಿಂದ ಅಭಿವೃದ್ಧಿ ಕಾರ್ಯಕ್ಕೆ ಅಡಚಣೆ, ಮಾರಾಟ ಮಾಡಿರುವ ಜಮೀನಿನ ಮಾಲೀಕರು ಆಗುತ್ತಿರುವ ಬೆಲೆ ಹೆಚ್ಚಳವನ್ನು ಮುಂದು ಮಾಡಿ ಕುಟುಂಬದ ಸದಸ್ಯರಗಳನ್ನು ಕರೆದುಕೊಂಡು ಹೆಚ್ಚಿನ ಹಣಕ್ಕೆ ಒತ್ತಡ ತರುತ್ತಿರುವುದು, ಇಲ್ಲದಿದ್ದಲ್ಲಿ ಪ್ರಕರಣ ದಾಖಲಿಸಲು ತಿಳಿಸಿರುವುದು, ಕೆಲ ಜಮೀನುಗಳು ನ್ಯಾಯಾಲಯದಲ್ಲಿ ವ್ಯಾಜ್ಯ ಚಾಲ್ತಿಯಲ್ಲಿದ್ದು, ರಾಜೀಸಂದಾನದ ಮೂಲಕ ಪರಿಹರಿಸಿಕೊಳ್ಳಲು ಆರ್ಥಿಕ ಅಡಚಣೆ. ಇದರಿಂದಾಗಿ ಅಭಿವೃದ್ಧಿ ಕಾರ್ಯಗಳಿಗೆ ತಡೆಯಾಗಿರುವುದಾಗಿ ಅಭಿವೃದ್ಧಿದಾರರು ಸಂಸ್ಥೆಯ ಮಾಹಿತಿ ನೀಡಿರುವುದು ಕಂಡು ಬಂದಿರುತ್ತದೆ.

2ನೇ ಯೋಜನೆಗೆ ಸಂಬಂಧಿಸಿದಂತೆ ನಿವೇಶನ ಆಕಾಂಕ್ಷಿಗಳಿಗೆ ನಿವೇಶನ ಮುಂಗಡ ಪಡೆಯಲು 9-10 ವರ್ಷಗಳ ಹಿಂದೆ ಪ್ರಾರಂಭಿಸಿರುವುದು ಸರಿಯಷ್ಟೆ. ಸಂಗ್ರಹಿಸಿದ ನಿವೇಶನ ತೇವಣಿಗಿಂತ ಹೆಚ್ಚಾಗಿಯೇ ಅಭಿವೃದ್ಧಿದಾರರಿಗೆ ಪಾವತಿಸಿದ್ದರೂ, ಕಾಮಗಾರಿಗಳು ಪೂರ್ಣಗೊಳ್ಳದೆ ಇದ್ದು, 2ನೇ ಯೋಜನೆಯ ನಿವೇಶನ ಹಂಚಿಕೆ ವಿಳಂಭವಾಗಿರುತ್ತದೆ. ಸಂಸ್ಥೆಯವರು ಈಗಾಗಲೇ ಅಭಿವೃದ್ಧಿದಾರರ ಮೇಲೆ ಒತ್ತಡ ಹಾಕಿ ವಕೀಲರ ಮೂಲಕ ನೋಟೀಸನ್ನು ನೀಡಿದ್ದು, ಆದಷ್ಟು ಬೇಗ ನಿವೇಶನದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ನೊಂದಣಿ ಮಾಡಿಸಲು ಕ್ರಮವಿರಿಸುವುದು ಸೂಕ್ತ.

ಮಾಗಡಿ ಯೋಜನಾ ಪ್ರಾಧಿಕಾರದಿಂದ ನಕ್ಷೆ ಅನುಮೋದನೆಯಾಗಿರುವ ಜಮೀನು ವಿವರ

ಮಂಜೂರಾತಿ ಆದೇಶ ಸಂಖ್ಯೆ	ಮಂಜೂರಾದ ದಿನಾಂಕ	ಸರ್ವೆ ನಂ	ಜಮೀನು ವಿವರ
ಮಾಯೋಪ್ರಾ/LOA/17/2017-18/143	19-6-2020	66/4	2 ಎಕರೆ 29 ಗುಂಟೆ
ಮಾಯೋಪ್ರಾ/LOA/17/2017-18/144	19-6-2020 (ಬಿಡುಗಡೆ)		

MENEZES & ASSOCIATES BANGALORE-94

ಮಾಯೋಪ್ರಾ/LOA/ 27/2017–18/139 ಮಾಯೋಪ್ರಾ/LOA/ 27/2017–18/136	19–6–2020 19–6–2020 (ಬಿಡುಗಡೆ)	63/3, 63/4, 63/6,	1 ಎಕರೆ 36 ಗುಂಟೆ
ಮಾಯೋಪ್ರಾ/LOA/ 02/2018–19/141 ಮಾಯೋಪ್ರಾ/LOA/ 02/2017–18/142	19–6–2020 19–6–2020 (ಬಿಡುಗಡೆ)	73	1 ಎಕರೆ 22 ಗುಂಟೆ
ಮಾಯೋಪ್ರಾ/LOA/ 03/2018–19/137 ಮಾಯೋಪ್ರಾ/LOA/ 03/2018–19/138	19–6–2020 19–6–2020 (ಬಿಡುಗಡೆ)	68/1	3 ಎಕರೆ 25 ಗುಂಟೆ
ಮಾಯೋಪ್ರಾ/LOA/ 11/2014–15 ಮಾಯೋಪ್ರಾ/LOA/ 11/2014–15/948	11–12–2015 22–02–2019 (ಬಿಡುಗಡೆ)	62/2	6.00 ಎಕರೆ
ಮಾಯೋಪ್ರಾ/LOA/ 20/2009–10	13–4–2012 06–06–2016 (ಬಿಡುಗಡೆ)	63/2ಎಫ್	4.00 ಎಕರೆ
		ಒಟ್ಟು	**19 ಎಕರೆ 32 ಗುಂಟೆ**

ಕ್ರ.ಸಂ	ಹಂಚಿಕೆಯಾಗಿರುವ ನಿವೇಶನಗಳು ದಿ: 31–03–2020ಕ್ಕೆ				ಲೆಕ್ಕಪರಿಶೋಧನಾ ವೇಳೆಗೆ ನೊಂದಣಿಯಾಗಿರುವ ನಿವೇಶನಗಳು (ದಿ:22–10–2020ರವರೆಗೆ)			ನೊಂದಣಿಗೆ ಬಾಕಿ
	ಅಳತೆ	ಮಂದ್ಯಂತರ	ಮೂಲೆ	ಒಟ್ಟು ಹಂಚಿಕೆ	ಮಂದ್ಯಂತರ	ಮೂಲೆ	ಒಟ್ಟು ನೊಂದಣಿ	
1	30 x 50	74	9	83	22	4	26	57
2	40 x 60	35	10	45	8	5	13	32
	ಒಟ್ಟು	**109**	**19**	**128**	**30**	**9**	**39**	**89**

42) ಸಂಘದ ಲಾಭ ಅಥವಾ ನಷ್ಟದ ಬಗ್ಗೆ ಲೆಕ್ಕಪರಿಶೋಧಕರ ಜಿಜ್ಞಾಸೆ/ ವಿಶ್ಲೇಷಣೆ

ವ್ಯಾಪಾರ ತ:ಖ್ತೆ :

ಸಂಸ್ಥೆಯು ಪ್ರಸಕ್ತ ಸಾಲಿನ ವ್ಯಾಪಾರ ವಹಿವಾಟು ಕಳೆದ ಸಾಲಿನ ಹೋಲಿಕೆಯೊಂದಿಗೆ ಪ್ರಗತಿ ಸಂಕ್ಷಿಪ್ತ ಇಂತಿದೆ.

ಕ್ರ.ಸಂ.	ವಿವರ	ಹಿಂದಿನ ಸಾಲಿನಲ್ಲಿ	ಪ್ರಸಕ್ತ ಸಾಲಿನಲ್ಲಿ	ಶೇಕಡಾವಾರು ಪ್ರಗತಿ
1	ಒಟ್ಟು ಖರೀದಿ	ಅನ್ವಯಿಸುವುದಿಲ್ಲ		
2	ಒಟ್ಟು ಮಾರಾಟ			
3	ಆಮ್ಮೈರು ದಾಸ್ತಾನು			
4	ಖರೀದಿ ವೆಚ್ಚ			
5	ವ್ಯಾಪಾರ ಲಾಭ			
6	ವ್ಯಾಪಾರ ಲಾಭದ ಪ್ರಮಾಣವು ಸಾಮಾನ್ಯವಾಗಿ ಸರಿಯಿರುವ ಬಗ್ಗೆ.	ಅನ್ವಯಿಸುವುದಿಲ್ಲ		
7	ವ್ಯಾಪಾರ ನಷ್ಟವಿದ್ದಲ್ಲಿ ಕಾರಣಗಳೊಂದಿಗೆ ವಿವರಿಸುವುದು.	ಅನ್ವಯಿಸುವುದಿಲ್ಲ		

MENEZES & ASSOCIATES BANGALORE-96 CHARTERED ACCOUNTANTS

8	ವರದಿ ಸಾಲಿನಂತ್ಯಕ್ಕೆ ಇರುವ ಆಖೈರು ದಾಸ್ತಾನು ಯಾರಿಂದಲಾದರೂ ಪರಿಶೀಲನೆಯಾಗಿ ದೃಡೀಕರಿಸಲಾಗಿದೆಯೇ? ದಾಸ್ತಾನು ಮೌಲ್ಯ ನಿಖರವಾಗಿದೆಯೇ? ದಾಸ್ತಾನಿನ ಮೇಲೆ ವಿಮೆ ಮಾಡಿಸಲಾಗಿದೆಯೇ?	ಅನ್ವಯಿಸುವುದಿಲ್ಲ
	ಲಾಭ-ನಷ್ಟದ ತ:ಖ್ತೆ **ವರದಿ ಸಾಲಾಂತ್ಯಕ್ಕೆ ಗಳಿಸಿದ ನಿವ್ವಳ ಲಾಭ:**	ಸಂಸ್ಥೆಯು 2019-20ನೇ ಸಾಲಿಗೆ ರೂ. 1,04,36,628-70 ಲಾಭ ಗಳಿಸಿರುತ್ತದೆ.
1	ಸಂಘವು ಪ್ರಸಕ್ತ 2019-20 ನೇ ಸಾಲಿಗೆ ಗಳಿಸಿರುವ ಲಾಭದ ಮೊಬಲಗು ಹಾಗೂ ಗಳಿಸಿರುವ ಲಾಭ ಸಂಘದ ಉಪನಿಯಮ, ಕಾಯಿದೆ ಕಲಂ ನಿಯಮ 22 ರನ್ವಯ ಹಾಗೂ ಇರುವ ಬಗ್ಗೆ ವಿವರಣೆ	ಕಾಯಿದೆ ಕಲಂ ನಿಯಮ 22 ನ್ನು ಉಲಂಘಿಸಿರುವುದಿಲ್ಲ.
2	ಸಂಘವು ಗಳಿಸಿರುವ ಲಾಭ ಕಳೆದ ಸಾಲಿನ ಹೋಲಿಕೆಯೊಂದಿಗೆ ಹೆಚ್ಚು/ಕಡಿಮೆ ಇರುವುದರ ಬಗ್ಗೆ ವಿಮರ್ಷೆ	ಕಳೆದ ಸಾಲಿನ ನಿವ್ವಳ ಲಾಭ ರೂ. 1,02,57,058-63 ಗಳಿದ್ದು, ಕಳೆದ ಸಾಲಿಗೂ ವರದಿ ಸಾಲಿಗೂ ಹೋಲಿಸಿದಾಗ ರೂ. 1,79,570-07 ಲಾಭ ಜಾಸ್ತಿಯಾಗಿರುತ್ತದೆ.
3	ಕಳೆದ ಸಾಲುಗಳ ಲಾಭ ವಿಲೇವಾರಿ ಆಗದೆ ಮುಂದುವರೆದಿರುವ ವಿವರ ಹಾಗೂ ಈ ಸಂಬಂದ ಲೆಕ್ಕಪರಿಶೋಧಕರು ನೀಡಬೇಕಾಗಿರುವ ಸಲಹೆಯೊಂದಿಗೆ ವಿಮರ್ಷೆ	ಕಳೆದ ಸಾಲುಗಳ ವಿಲೇವಾರಿ ಆಗಬೇಕಾದ ಲಾಭ ಯಾವುದೂ ಇರುವುದಿಲ್ಲ.
4	ನಷ್ಟವಾಗಿದ್ದಲ್ಲಿ ಕಾರಣಗಳು :	ಅನ್ವಯಿಸುವುದಿಲ್ಲ.
43	**ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳು:**	1) ಸಂಸ್ಥೆಗೆ ಆರ್ಥಿಕ ನೆರವು ನೀಡುತ್ತಿದ್ದ ಭಾರತೀಯ ಜೀವ ವಿಮಾ ನಿಗಮ ಸಂಸ್ಥೆಯವರು ಏಕಾಏಕಿ ಆರ್ಥಿಕ ನೆರವು ನಿಲ್ಲಿಸಿದ್ದು, ಇದರ ಬದಲಾಗಿ ಬೇರೆ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ಸದಸ್ಯರಿಗೆ ಸಾಲಗಳನ್ನು ಹಂಚಲು ಕ್ರಮ ಅಗತ್ಯವಾಗಿರುತ್ತದೆ.
	2)	ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಅನುಪಾಲನಾ ವರದಿ ನಿಗದಿತ ವೇಳೆಯಲ್ಲಿ ಸಲ್ಲಿಸುವುದು.
	3)	ಸಂಸ್ಥೆಯು ಸಂಗ್ರಹಿಸಿರುವ ಠೇವಣಿಗಳ ಮೇಲೆ ವರದಿ ಸಾಲಿನಲ್ಲಿ ಶೇಕಡಾ 8.03 ರಷ್ಟು ಬಡ್ಡಿ ನೀಡಿದ್ದು, ಸದ್ಯದ ಪರಿಸ್ಥಿತಿಯಲ್ಲಿ ಬಡ್ಡಿಯ ದರವನ್ನು ಕಡಿಮೆ ಮಾಡಿಕೊಳ್ಳಲು ಕ್ರಮ ಅಗತ್ಯ
	4)	ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ರೂ. 5,87,000/- ಗಳ ವಿವಿಧ ಮುಂಗಡಗಳು ಬಹು ಹಿಂದಿನಿಂದಲೂ ವಸೂಲಾಗದೇ ಮುಂದುವರೆದಿರುವ ಬಗ್ಗೆ ಅಗತ್ಯ ಕ್ರಮಗಳನ್ನು ತೆಗೆದುಕೊಂಡು ಈ ಲೆಕ್ಕವನ್ನು ಚುಕ್ತಾಗೊಳಿಸಕೊಳ್ಳತಕ್ಕದ್ದು.
	5)	ನಿವೇಶನಗಳ ಹಂಚಿಕೆಯ ಯೋಜನೆಗಳು ಪ್ರಾರಂಭವಾಗಿ 13-14 ವರ್ಷಗಳಾಗಿದ್ದರೂ ಸಂಸ್ಥೆಯು ಸದಸ್ಯರಿಗೆ ಬಾಕಿ ಇರುವ ನಿವೇಶನ ಸಿಗುವಂತೆ ಅಭಿವೃದ್ಧಿದಾರರೊಂದಿಗೆ ವ್ಯವಹರಿಸಿ ಈ ಯೋಜನೆಯನ್ನು ಪೂರ್ಣಗೊಳಿಸಲು ಪ್ರಯತ್ನ ನಡೆಸುವುದು.
	6)	ರಾಜ್ಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗೃಹ ನಿರ್ಮಾಣ ಸಹಕಾರ ಸಂಘಗಳಿಗೂ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಸಂಖ್ಯೆಗೂ ಬಹಳಷ್ಟು ಅಂತರವಿದ್ದು, ಸದಸ್ಯ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಸಂಸ್ಥೆಯ ಕಾರ್ಯವ್ಯಾಪ್ತಿಯೊಳಗೆ ತರಲು ಕ್ರಮವಿರಿಸತಕ್ಕದ್ದು.
	7)	ಸಂಸ್ಥೆಯ ಸಹ ಸದಸ್ಯತ್ವವನ್ನು ಕಾನೂನು ಮಿತಿಯಲ್ಲಿ ಇರುವಂತೆ ನೋಡಿಕೊಳ್ಳತಕ್ಕದ್ದು.

MENEZES & ASSOCIATES BANGALORE-94

8)	ಸಂಸ್ಥೆಯ ವತಿಯಿಂದ ವರದಿ ಸಾಲಿನಲ್ಲಿ ರೂ. 3.95 ಕೋಟಿ ಸಾಲ ನೀಡಿದ್ದು, ಅದರ ಪೈಕಿ 2.45 ಕೋಟಿ ಜೀವ ವಿಮಾ ನಿಗಮ ಸಾಲ ಎಂದು ಪರಿಗಣಿಸುತ್ತಿರುವ ಕ್ರಮ ಸರಿಯಲ್ಲ.
9)	ಸಂಬಳವು ವೇತನ ಹಾಗೂ ಇತರ ಬಾಬ್ತುಗಳಲ್ಲಿ ಮೂಲದಲ್ಲಿ ಕಟಾಯಿಸಲಾದ ಆದಾಯ ತೆರಿಗೆ (TDS) ಬಾಬ್ತುಗಳನ್ನು ಸಕಾಲದಲ್ಲಿ ಇಲಾಖೆಗೆ ಪಾವತಿಸಲು ಕ್ರಮ ಅಗತ್ಯವಾಗಿರುತ್ತದೆ.
10)	ಸಂಸ್ಥೆಯು ಕೆಲವೊಮ್ಮೆ ವ್ಯವಹಾರದಲ್ಲಿ ಪೈಸೆಗಳನ್ನು ನಮೂದಿಸುತ್ತಿರುವ ಕ್ರಮವನ್ನು ಕೈ ಬಿಡುವುದು.
11)	ವರದಿ ಸಾಲಿನಲ್ಲಿ ಕೆಲವೊಮ್ಮೆ ರೂ. 10,000/– ಕ್ಕಿಂತ ಹೆಚ್ಚಿನ ಬಾಬ್ತುಗಳನ್ನು ನಗದು ರೂಪದಲ್ಲಿ ಪಾವತಿಸಿರುವುದನ್ನು ಗಮನಿಸಿದ್ದು, ಕೂಡಲೇ ಕೈ ಬಿಡತಕ್ಕದ್ದು.
12)	ಅನಗತ್ಯವಾಗಿ ಮುಂದುವರೆಯುತ್ತಿರುವ ಕೆಲ ಜವಾಬ್ದಾರಿಗಳನ್ನು ಚುಕ್ತಾ ಮಾಡಿಕೊಳ್ಳಲು ಕ್ರಮ ಅಗತ್ಯ.

44 ಲೆಕ್ಕಪರಿಶೋಧನಾ ಫಲಿತಾಂಶ ಮತ್ತು ಕ್ರಮವಿಡಬೇಕಾದ ಕಂಡಿಕೆಗಳು:

ಕ್ರ.ಸಂ.	ಕಂಡಿಕೆ ಸಂಖ್ಯೆ	ಪುಟ ಸಂಖ್ಯೆ	ನ್ಯೂನತೆಯ ಸಂಕ್ಷಿಪ್ತ ವಿವರ
1	19.1	16	ಮೂರು ವರ್ಷಕ್ಕೆ ಮೇಲ್ಪಟ್ಟ ಡಿವಿಡೆಂಡನ್ನು ಆಪದ್ಧನಕ್ಕೆ ವರ್ಗಾಯಿಸುವ ಕ್ರಮ ಅಗತ್ಯ.
2	19.5	17	ರಾಷ್ಟ್ರೀಯ ವಸತಿ ಬ್ಯಾಂಕ್‌ನಿಂದ ಹಿಂದಿನ ಸಾಲುಗಳಲ್ಲಿ ಸಾಲ ಪಡೆದಿದ್ದು, 2 ವರ್ಷದ ಹಿಂದೆ ಚುಕ್ತಾ ಆಗಿದ್ದರೂ ಸದರಿ ಸಂಸ್ಥೆಯಿಂದ ಬೇ ಬಾಕಿ ದೃಢೀಕರಣ (ಎನ್.ಓ.ಸಿ) ಪಡೆಯದಿರುವ ಬಗ್ಗೆ.
3	14	21	ಹಿಂದಿನಿಂದಲೂ ಸದಸ್ಯರಿಂದ ವಸೂಲಾಗಬೇಕೆಂದು ಮುಂದುವರೆಯುತ್ತಿರುವ ಸಾಮಾನ್ಯ ಸಾಲ ಅಲ್ಪ ವರಮಾನ ಸಾಲ, ಮಧ್ಯಮ ವರಮಾನ ಸಾಲ ಹಾಗೂ ಡಿಬೆಂಚರ್ ಸಾಲಗಳ ಒಟ್ಟು ಮೊತ್ತ ರೂ. 7,46,842–84 ಗಳಿಗೆ ಯಾವುದೇ ಕುಳುವಾರು ಹಾಗೂ ದಾಖಲಾತಿಗಳಿಲ್ಲದೇ ಮುಂದುವರೆದಿರುತ್ತದೆ. ಈ ಬಾಬ್ತುಗಳನ್ನು ಚುಕ್ತಾ ಮಾಡಿಕೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
4	22	30	6 ವರ್ಷ ಮೇಲ್ಪಟ್ಟು ಸುಸ್ತಿ ಸಾಲಗಳು (14) ಪ್ರಕರಣಗಳಿದ್ದು ಪ್ರತಿಯೊಂದು ಪ್ರಕರಣದ ಬಗ್ಗೆ ಗಮನಹರಿಸಿ ಅವುಗಳ ವಸೂಲಾತಿಗೆ ಗಂಭೀರ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.
5	25	37	ಸುಸ್ತಿ ಸಾಲ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಲು ಕ್ರಮ ಅಗತ್ಯ.
6	19	16(8)	ರಿಟೆನ್ಷನ್ ಡೆಪಾಸಿಟ್ ಬಾಬ್ತಿನಲ್ಲಿ ವ್ಯತ್ಯಾಸದ ಹಣ ಜಮಾ ಪಡೆಯತಕ್ಕದ್ದು.

45. ಲೆಕ್ಕ ಪರಿಶೋದಕರ ದೃಢೀಕರಣ ಪತ್ರ

(ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 63(16) ರಂತೆ)

1	ನನ್ನ ತಿಳುವಳಿಕೆ, ಅಭಿಪ್ರಾಯದಂತೆ ಹಾಗೂ ಲೆಕ್ಕ ಪರಿಶೋಧನಾ ಕಾಲಕ್ಕೆ ನನಗೆ ನೀಡಿದ ವಿವರಣೆಗಳಂತೆ, ಸಂಘದ ಲೆಕ್ಕ ಪತ್ರಗಳು, ಆರ್ಥಿಕ ತಖ್ತೆಗಳು, ಅನುಸೂಚಿಗಳು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ಅಧಿನಿಯಮದಲ್ಲಿ ಅಗತ್ಯಪಡಿಸಿದ ರೀತಿಯಂತೆ ಮಾಹಿತಿ ನೀಡುತ್ತವೆ.
2	ದಿನಾಂಕ 31.03.2020ರ ಅಂತ್ಯಕ್ಕೆ ಇದ್ದ ಅಡಾವೆ ಪತ್ರಿಕೆ ಹಾಗೂ ಸನ್ 2019–20ನೇ ಸಾಲಿನ ಲಾಭ ಹಾನಿ ಪತ್ರಿಕೆಯು ಸಂಘದ ನಿಜವಾದ ಹಾಗೂ ನ್ಯಾಯ ಸಮ್ಮತವಾದ ಆರ್ಥಿಕ ಸ್ಥಿತಿ ಮತ್ತು ಲಾಭ ಹಾನಿ ಪ್ರತಿಬಿಂಬಿಸುತ್ತದೆ ಅಂತ ಅಭಿಪ್ರಾಯ ಪಡುತ್ತೇನೆ.
3	ನನ್ನ ಜ್ಞಾನ ಹಾಗೂ ನಂಬಿಗೆಯ ಪ್ರಕಾರ ಲೆಕ್ಕ ಪರಿಶೋಧನೆಗೆ ಅವಶ್ಯವಾದ ಮಾಹಿತಿ ಹಾಗೂ ವಿವರಣೆಗಳನ್ನು ಸಂಬಂಧಿಸಿದವರಿಂದ ಪಡೆದಿರುತ್ತೇನೆ.
4	ಸಂಘದ ಲೆಕ್ಕ ಪರಿಶೋದನಾ ಕಾಲಕ್ಕೆ ಕಂಡುಬಂದಂತೆ ಸಂಸ್ಥೆಯಲ್ಲಿ ಸರಿಯಾದ ಲೆಕ್ಕ ಪತ್ರಗಳನ್ನು ಇಡಲಾಗಿದೆ ಎಂದು ಅಭಿಪ್ರಾಯ ಪಡುತ್ತೇನೆ.
5	ವರದಿಗೆ ಲಗತ್ತಿಸಿದ ಅಡಾವೆ ಪತ್ರಿಕೆ ಹಾಗೂ ಇತರೆ ಆರ್ಥಿಕ ತಃಖ್ತೆಗಳು ಸಂಸ್ಥೆಯಲ್ಲಿ ನಿರ್ವಹಿಸಿದ ಲೆಕ್ಕ ಪತ್ರ ಪುಸ್ತಕಗಳಿಗೆ ತಾಳೆ ಇರುತ್ತವೆ.



46	ಲಗತ್ತುಗಳು	
1.	ಜಮಾ ಖರ್ಚು ತ:ಖ್ತೆ	ಲಗತ್ತಿಸಿದೆ
2.	ವ್ಯಾಪಾರ ತ:ಖ್ತೆ	
3.	ಲಾಭಹಾನಿ ತ:ಖ್ತೆ	
4.	ಅಡಾವೆ ಪತ್ತಿಕೆ	
5.	ಕುಳುವಾರು ಪಟ್ಟಿಗಳು, ದೃಢೀಕರಣಗಳು, ಬ್ಯಾಂಕ್ ಸಮನ್ವಯ ತ:ಖ್ತೆ	

ಸ್ಥಳ: ಬೆಂದಳೂರು
ದಿನಾಂಕ: 29-10-2020

ತಮ್ಮ ವಿಶ್ವಾಸಿ,

MENEZES & ASSOCIATES BANGALORE-94 CHARTERED ACCOUNTANTS

(ಮಿನೇಜಸ್ ಅಂಡ್ ಅಸೋಸಿಯೇಟ್ಸ್)
ಪನ್ನದು ಲೆಕ್ಕಪರಿಶೋಧಕರು, ಬೆಂದಳೂರು.

UDIN-20204967AAAADZ7064

ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾ ಮಂಡಲ ನಿ.

ನಂ.3, ಎಸ್. ಕರಿಯಪ್ಪ ರಸ್ತೆ, ಬಸವನಗುಡಿ, ಬೆಂಗಳೂರು – 560 004.

2019–20 ನೇ ಸಾಲಿನ ಜಮಾ–ಖರ್ಚು ತಃಖ್ತೆ

ಕ್ರ.ಸಂ.	ವಿವರಗಳು	ಜಮಾ ಮೊಬಲಗು	ಖರ್ಚು ಮೊಬಲಗು
1	ಪ್ರವೇಶ ಧನ ಮತ್ತು ಷೇರು ಶುಲ್ಕ	9,820.00	1,700.00
2	"ಎ" ವರ್ಗದ ಷೇರುಗಳು	21,75,405.50	40,75,405.50
3	"ಸಿ" ವರ್ಗದ ಷೇರುಗಳು	2,31,200.00	19,36,200.00
4	ಆಡಳಿತ ವೆಚ್ಚ ಭವಿಷ್ಯನಿಧಿ ಬಾಬ್ತು	-	41,570.00
5	ಜಾಹಿರಾತು ವೆಚ್ಚ	25,809.00	4,36,378.66
6	ಲಾಭ ಮತ್ತು ನಷ್ಟದ ಹಂಚಿಕೆ ಖಾತೆ	-	1,02,57,058.63
7	ದಾವ ಫೀ, ಅಮಲ್ದಾರಿ ಶುಲ್ಕ, ಇತರೆ	3,73,621.00	1,41,720.00
8	ಬ್ಯಾಂಕ್ ಖಾತೆಗಳ ಕರಡು ನಿಧಿ ಖಾತೆ	-	12,07,939.00
9	ಬ್ಯಾಂಕ್ ಛಾರ್ಜ್	6,885.00	28,784.00
